ಸಂಪುಟ 2, ಸಂಚಿಕೆ 1

# ನ್ಯೂ ಇಂಡಿಯಾ ಸಮಾಚಾರ

ಜುಲೈ 1-15, 2021

ಉಚಿತ ವಿತರಣೆಗಾಗಿ



## ವೈದ್ಯೋ ನಾರಾಯಣೋ ಹರಿಃ

ಕೋವಿಡ್ ಸಂಕಷ್ಟದ ಸಮಯದಲ್ಲಿ ವೈದ್ಯರು ಲಕ್ಷಾಂತರ ಜನರ ಸಂರಕ್ಷಕರಾಗಿ ಹೊರಹೊಮ್ಮಿದ್ದಾರೆ. ರಾಷ್ಟ್ರೀಯ ವೈದ್ಯರ ದಿನದಂದು ಅವರಿಗೆ ರಾಷ್ಟ್ರವು ಕೃತಜ್ಞತೆಯನ್ನು ಸಲ್ಲಿಸುತ್ತದೆ



# ಏಕ ರಾಷ್ಟ್ರದ ಪ್ರವರ್ತಕ
# ಒಂದು ಸಂವಿಧಾನ - ಒಂದು ಚಿಹ್ನೆ

ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ಅವರು ಏಕೀಕೃತ ಭಾರತದ ಕನಸನ್ನು ನನಸಾಗಿಸಲು ಒಂದು ರಾಷ್ಟ್ರ, ಒಂದು ಸಂವಿಧಾನ ಮತ್ತು ಒಂದು ಚಿಹ್ನೆ ಎಂಬ ಘೋಷಣೆಯನ್ನು ನೀಡಿದರು. ಡಾ. ಮುಖರ್ಜಿ ಅವರನ್ನು ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ 33ನೇ ವಯಸ್ಸಿನಲ್ಲೇ ನೇಮಿಸಲಾಯಿತು. ಅವರು ಸ್ವತಂತ್ರ ಭಾರತದ ಮೊದಲ ಕೇಂದ್ರ ಸಚಿವ ಸಂಪುಟದಲ್ಲಿದ್ದರು. ಕಾಶ್ಮೀರ ಕಣಿವೆಗೆ ಭೇಟಿ ನೀಡಲು ಅನುಮತಿ ಅಗತ್ಯವಿದ್ದ ಆ ಸಂದರ್ಭದಲ್ಲಿ 370ನೇ ವಿಧಿಯನ್ನು ವಿರೋಧಿಸಲು ಅವರು 1953ರಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿದರು. ಅವರು ಅಲ್ಲಿಯೇ ನಿಗೂಢವಾಗಿ ನಿಧನರಾದರು. ಈ ಘಟನೆಯ 66 ವರ್ಷಗಳ ನಂತರ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಕೇಂದ್ರ ಸರ್ಕಾರವು 2019 ರಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸುವ ಮೂಲಕ ಡಾ.ಮುಖರ್ಜಿ ಅವರ ಕನಸನ್ನು ನನಸಾಗಿಸಿತು. ಶ್ಯಾಮಾ ಪ್ರಸಾದ್ ಮುಖರ್ಜಿ ಅವರ 121ನೇ ಜನ್ಮ ದಿನವಾದ ಜುಲೈ 6 ರಂದು ಅವರಿಗೆ ಗೌರವಪೂರ್ವಕ ನಮನಗಳು.

**‘ ಭಾರತದ ಏಕತೆ ಮತ್ತು ಸಮಗ್ರತೆಯನ್ನು ಖಾತರಿಪಡಿಸುವುದು ಡಾ.ಶ್ಯಾಮಾ ಪ್ರಸಾದ್ ಮುಖರ್ಜಿ ಅವರ ಹೃದಯಾಂತರಾಳದಲ್ಲಿತ್ತು. ಇದಕ್ಕಾಗಿ ಅವರು ತಮ್ಮ 52 ನೇ ವಯಸ್ಸಿನಲ್ಲಿಯೇ ತಮ್ಮ ಜೀವನವನ್ನು ಸಮರ್ಪಿಸಿದರು. ಡಾ. ಮುಖರ್ಜಿ ಅವರ ಏಕತೆಯ ಸಂದೇಶವನ್ನು ನಾವು ಯಾವಾಗಲೂ ಸ್ಮರಿಸಬೇಕು. ಸಾಮರಸ್ಯ ಮತ್ತು ಭ್ರಾತೃತ್ವ ಮನೋಭಾವದಿಂದ, ಭಾರತದ ಪ್ರಗತಿಗೆ ನಾವು ಮನಃಪೂರ್ವಕವಾಗಿ ಕೆಲಸ ಮಾಡೋಣ. ’**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

# ನ್ಯೂ ಇಂಡಿಯಾ ಸಮಾಚಾರ

ಸಂಪುಟ 2, ಸಂಚಿಕೆ 01 ಜುಲೈ 1-15, 2021

**ಸಂಪಾದಕರು**
ಜೈದೀಪ್ ಭಟ್ನಾಗರ್
ಪ್ರಧಾನ ಮಹಾನಿರ್ದೇಶಕರು,
ಪಿಐಬಿ, ನವದೆಹಲಿ

**ಸಲಹಾ ಸಂಪಾದಕರು**
ಸಂತೋಷ್ ಕುಮಾರ್

**ವಿನ್ಯಾಸಕ**
ರವೀಂದ್ರ ಕುಮಾರ್ ಶರ್ಮ

**ಮುದ್ರಕರು ಮತ್ತು ಪ್ರಕಾಶಕರು**
ಸತ್ಯೇಂದ್ರ ಪ್ರಕಾಶ್
ಪ್ರಧಾನ ಮಹಾನಿರ್ದೇಶಕರು,
ಬ್ಯೂರೋ ಆಫ್ ಔಟ್ ರೀಚ್
ಅಂಡ್ ಕಮ್ಯೂನಿಕೇಷನ್ ಪರವಾಗಿ

**ಮುದ್ರಣಾಲಯ**
ಇನ್‌ಫಿನಿಟಿ ಅಡ್ವರ್ಟೈಸಿಂಗ್
ಸರ್ವಿಸಸ್ ಪ್ರೈ. ಲಿಮಿಟೆಡ್
ಎಫ್‌ಬಿಡಿ-ಒನ್ ಕಾರ್ಪೋರೇಟ್ ಪಾರ್ಕ್,
10ನೇ ಮಹಡಿ,
ನವದೆಹಲಿ-ಫರೀದಾಬಾದ್ ಬಾರ್ಡರ್
ಎನ್‌ಹೆಚ್-1 ಫರೀದಾಬಾದ್-121003



**ಸಂಪರ್ಕ ವಿಳಾಸ ಮತ್ತು ಇ-ಮೇಲ್:**

ಕೊಠಡಿ ಸಂ. 278, ಬ್ಯೂರೋ ಆಫ್
ಔಟ್ ರೀಚ್ ಅಂಡ್ ಕಮ್ಯೂನಿಕೇಷನ್,
2ನೇ ಮಹಡಿ, ಸೂಚನಾ ಭವನ,
ನವದೆಹಲಿ-110003

response-nis@pib.gov.in



RNI No. : DELKAN/2020/78828


## ಒಳಪುಟಗಳಲ್ಲಿ




**ಮುಖಪುಟ ಲೇಖನ**

**ಭೂಮಿಯ ಮೇಲಿನ ದೇವತೆಗಳು** ಪುಟ 10-17
ರಾಷ್ಟ್ರೀಯ ವೈದ್ಯರ ದಿನ: ಕೊರೋನಾ ಸಾಂಕ್ರಾಮಿಕ ಸಮಯದಲ್ಲಿ ವೈದ್ಯರು ಲಕ್ಷಾಂತರ ಜನರ ಸಂರಕ್ಷಕರಾಗಿ ಹೊರಹೊಮ್ಮಿದ್ದಾರೆ





**ಮುಖ್ಯಮಂತ್ರಿಗಿಂತ ಹೆಚ್ಚಾಗಿ ವೈದ್ಯರೆಂದು ಕರೆಸಿಕೊಳ್ಳುವುದನ್ನು ಇಷ್ಟಪಟ್ಟ ಜನ ನಾಯಕ** ಪುಟ 09

ಓದುಗರಿಗಾಗಿ
**ಕ್ವಿಜ್ ಕಾರ್ನರ್**
ಪುಟ 40

ಒಂದು ರಾಷ್ಟ್ರ - ಒಂದು ತೆರಿಗೆ
**ದೇಶದ ಆರ್ಥಿಕ ಏಕೀಕರಣ**






**ದೇಶದ ಆರ್ಥಿಕತೆಯನ್ನು ಏಕೀಕರಿಸಿರುವ ಜಿಎಸ್‌ಟಿಗೆ 4 ವರ್ಷಗಳು** ಪುಟ 26-31

**ಸುದ್ದಿ ತುಣುಕುಗಳು** ಪುಟ 04-05

**ಕೊರೋನಾ ವಿರುದ್ಧ ಸಮರ** ಪುಟ 18-19
ಪರೀಕ್ಷೆ, ಪತ್ತೆ ಮತ್ತು ಚಿಕಿತ್ಸೆಯ ಜೊತೆಗೆ ವೇಗದ ಲಸಿಕೆಯ ಪರಿಣಾಮ

**ಪ್ರಮುಖ ಯೋಜನೆ** ಪುಟ 20-23
ಹೊಸ ಕ್ರಾಂತಿಗೆ ನಾಂದಿ ಹಾಡಿದ ಡಿಜಿಟಲ್ ಇಂಡಿಯಾ

**ಸಂಪುಟ ನಿರ್ಣಯಗಳು** ಪುಟ 24-25
ರೈಲ್ವೆಯಲ್ಲಿ 'ಸಾರ್ವಜನಿಕ ಸುರಕ್ಷತೆ' ಖಚಿತಪಡಿಸಿಕೊಳ್ಳಲು ಅತ್ಯಾಧುನಿಕ ವ್ಯವಸ್ಥೆ, ರೈತರ ಹಿತದೃಷ್ಟಿಯಿಂದ ಎಂಎಸ್‌ಪಿಯಲ್ಲಿ ಹೆಚ್ಚಳ

**ಆಜ಼ಾದಿ ಕಾ ಅಮೃತಮಹೋತ್ಸವ** ಪುಟ 32-33
ಸ್ವಾತಂತ್ರ್ಯದಿಂದ ಗಣರಾಜ್ಯದವರೆಗೆ ಮಹಿಳಾ ಹೋರಾಟಗಾರರ ಕಥೆ

**ಜಿ7, ಸಿಎಸ್‌ಐಆರ್, ಪರಿಸರ ದಿನ** ಪುಟ 34-35
'ಒಂದು ಭೂಮಿ', 'ಒಂದು ಆರೋಗ್ಯ' ಮಂತ್ರ

**ಟೋಕಿಯೊ ಒಲಿಂಪಿಕ್ಸ್** ಪುಟ 36-37
ಟೋಕಿಯೊಗೆ ಸಿದ್ಧ: ವಿಶ್ವದ ಅತಿದೊಡ್ಡ ಕ್ರೀಡಾಕೂಟಕ್ಕೆ ಸನ್ನದ್ಧರಾದ ಭಾರತೀಯ ಕ್ರೀಡಾಪಟುಗಳು

**ಅಬ್ದುಲ್ ಹಮೀದ್: ಅಸಲ್ ಉತ್ತಾರ್ ಕದನದ ನಾಯಕ**
"ಯುದ್ಧವನ್ನು ಶಸ್ತ್ರಾಸ್ತ್ರಗಳಿಂದ ಮಾತ್ರ ಗೆಲ್ಲಲಾಗುವುದಿಲ್ಲ, ದೇಶಕ್ಕಾಗಿ ಮಡಿವ ದಿಟ್ಟತನವೂ ಇದಕ್ಕೆ ಬೇಕಾಗುತ್ತದೆ." ಪುಟ 38

**ಸಕಾರಾತ್ಮಕ ಕ್ರಮ**
ಉದಾತ್ತ ಉಪಕ್ರಮಗಳೊಂದಿಗೆ ಮಹಿಳೆಯರಿಗೆ ಉದ್ಯಮಶೀಲತೆ ಪುಟ 39





**ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ಸಂವಾದ**
ವಿದ್ಯಾರ್ಥಿಗಳ ವರ್ಚುವಲ್ ಕಾರ್ಯಕ್ರಮದಲ್ಲಿ ದಿಢೀರ್ ಪ್ರತ್ಯಕ್ಷರಾದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪುಟ 06-08

# ಸಂಪಾದಕೀಯ

ಎಲ್ಲರಿಗೂ ನಮಸ್ಕಾರ,

ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯನ್ನು ಭಾರತವು ಸಾಕಷ್ಟು ಪುನಃಶ್ಚೈತನ್ಯ ಮತ್ತು ಧೈರ್ಯದಿಂದ ಎದುರಿಸುತ್ತಿದೆ. ಕಳೆದ ತಿಂಗಳುಗಳಲ್ಲಿ ಹೆಚ್ಚಾಗಿದ್ದ ಕೊರೋನಾ ಪ್ರಕರಣಗಳು ಈಗ ವೇಗವಾಗಿ ಕುಸಿಯುತ್ತಿರುವುದು ಪ್ರೋತ್ಸಾಹದಾಯಕ ಪ್ರವೃತ್ತಿಯಾಗಿ ಗೋಚರಿಸುತ್ತಿದೆ. ತಕ್ಷಣದ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರ ಮಾಡಿದ ಪ್ರಯತ್ನಗಳಿಂದ ಇದು ಸಾಧ್ಯವಾಗಿದೆ. ಎರಡನೇ ಅಲೆಯ ಆರಂಭದಲ್ಲಿ ಕೇಂದ್ರವು ರಾಜ್ಯ ಸರ್ಕಾರಗಳನ್ನು ಎಚ್ಚರಿಸಿತು. ಪ್ರಕರಣಗಳು ಹೆಚ್ಚಾಗಲು ಪ್ರಾರಂಭವಾದಾಗ, ದೇಶ ಮತ್ತು ವಿದೇಶಗಳ ಪ್ರತಿಯೊಂದು ಮೂಲಗಳಿಂದ ಆಮ್ಲಜನಕ, ಔಷಧಿ ಇತ್ಯಾದಿಗಳನ್ನು ತಕ್ಷಣವೇ ಪೂರೈಸುವುದನ್ನು ಖಚಿತಪಡಿಸಿಕೊಳ್ಳಲು ಅದು ಎಲ್ಲ ಕ್ರಮಗಳನ್ನು ಕೈಗೊಂಡಿತು. ದಾಖಲೆಯ ಸಮಯದಲ್ಲಿ ಆರೋಗ್ಯ ಮೂಲಸೌಕರ್ಯವನ್ನು ತ್ವರಿತವಾಗಿ ಹೆಚ್ಚಿಸಲಾಯಿತು.

ಸಾಂಕ್ರಾಮಿಕ ರೋಗದ ಪುನರಾಗಮನವನ್ನು ಹೆಚ್ಚು ಮಾರಕವೆಂದು ಗ್ರಹಿಸಿದ ಕೇಂದ್ರ ಸರ್ಕಾರವು ಲಸಿಕಾ ನೀತಿಯನ್ನು ಮರು ರೂಪಿಸಿತು. ಇದು ಉತ್ಪಾದನೆಯಿಂದ ಪೂರೈಕೆಯವರೆಗೆ ತಡೆರಹಿತ ಲಸಿಕಾ ಕಾರ್ಯಕ್ರಮದ ಇಡೀ ವ್ಯವಸ್ಥೆಯನ್ನು ನಿಯಂತ್ರಣಕ್ಕೆ ಕೆಗೆದುಕೊಂಡಿತು. 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಉಚಿತ ಲಸಿಕೆ ನೀಡುವುದನ್ನು ಸರ್ಕಾರ ಖಚಿತಪಡಿಸಿತು ಮತ್ತು ಅದೇ ಸಮಯದಲ್ಲಿ ಕೊರೋನಾ ಪರೀಕ್ಷೆಯ ವೇಗವನ್ನೂ ಹೆಚ್ಚಿಸಲಾಯಿತು. 80 ಕೋಟಿ ನಾಗರಿಕರಿಗೆ ಉಚಿತ ಪಡಿತರವನ್ನು ಖಾತ್ರಿಪಡಿಸುವ ಉದ್ದೇಶದಿಂದ ಪ್ರಧಾನ ಮಂತ್ರಿ ಅನ್ನ ಯೋಜನೆಯನ್ನು ದೀಪಾವಳಿಯವರೆಗೆ ವಿಸ್ತರಿಸಲಾಗಿದೆ.

ರಾಷ್ಟ್ರದ ಮುಂಚೂಣಿ ಕಾರ್ಯಕರ್ತರ ಸಾಮೂಹಿಕ ಶಕ್ತಿ ಮತ್ತು ಸೇವಾ ಮನೋಭಾವವು ನಾವು ಅಪಾಯಕಾರಿ ಪರಿಸ್ಥಿತಿಯಿಂದ ಹೊರಬರುತ್ತಿದ್ದೇವೆ ಎಂದು ಖಚಿತಪಡಿಸಿದೆ. ಕೊರೋನಾದ ಎರಡನೇ ಅಲೆಯ ವಿರುದ್ಧದ ಹೋರಾಟದಲ್ಲಿ ವಿಜ್ಞಾನಿಗಳು, ವೈದ್ಯರು, ದಾದಿಯರು ಮತ್ತಿತರ ಮುಂಚೂಣಿ ಯೋಧರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಕೊರೋನಾ ರೋಗಿಗಳಿಗೆ ಹೊಸ ಜೀವನವನ್ನು ನೀಡುವ ವೈದ್ಯರು ದೇವತೆಗಳಾಗಿದ್ದಾರೆ. ಇದಕ್ಕಾಗಿ ದೇಶವು ಅವರಿಗೆ ಋಣಿಯಾಗಿರುತ್ತದೆ. ನಾವು ಜುಲೈ 1 ರಂದು ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸುತ್ತಿದ್ದೇವೆ, ಈ ಸಾಂಕ್ರಾಮಿಕ ರೋಗದಿಂದ ರಾಷ್ಟ್ರವನ್ನು ರಕ್ಷಿಸಲು ನಿರಂತರವಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಡುತ್ತಿರುವ ವೈದ್ಯರು ಮತ್ತು ಕೊರೋನಾ ಯೋಧರ ಕಥೆ ಈ ಆವೃತ್ತಿಯ ನಮ್ಮ ಮುಖಪುಟ ಲೇಖನವಾಗಿದೆ.

2017 ರ ಜುಲೈ 1 ರಂದು ಯಶಸ್ವಿಯಾಗಿ ಜಿಎಸ್ಟಿಯನ್ನು ಜಾರಿ ಮಾಡುವ ಮೂಲಕ ದೇಶದ ಆರ್ಥಿಕ ಏಕೀಕರಣವನ್ನು ಸಾಧಿಸಲಾಗಿದೆ. ಜಿಎಸ್ಟಿ ತನ್ನ ನಾಲ್ಕು ವರ್ಷಗಳ ಪ್ರಯಾಣವನ್ನು ಪೂರ್ಣಗೊಳಿಸಿದೆ. ನಾವು ಈ ಸಂಚಿಕೆಯಲ್ಲಿ ಭಾರತದ ಆರ್ಥಿಕ ಭವಿಷ್ಯವನ್ನು ಮರುರೂಪಿಸುತ್ತಿರುವ ಡಿಜಿಟಲ್ ಇಂಡಿಯಾ ಮಿಷನ್ ಬಗ್ಗೆ ಒಳನೋಟವುಳ್ಳ ಲೇಖನವಿದೆ.

ಇದಲ್ಲದೆ, ಮುಖ್ಯಮಂತ್ರಿ ಮತ್ತು ಭಾರತ ರತ್ನ ಪ್ರಶಸ್ತಿ ಪುರಸ್ಕೃತ ಡಾ. ಬಿಧಾನ್ ಚಂದ್ರ ರಾಯ್ ಮತ್ತು ಪರಮ ವೀರ ಚಕ್ರ ಪ್ರಶಸ್ತಿ ಪುರಸ್ಕೃತ ಅಬ್ದುಲ್ ಹಮೀದ್ ಅವರ ನಿಸ್ವಾರ್ಥ ರಾಷ್ಟ್ರ ಸೇವೆಯ ಕಥೆಗಳು ಓದುಗರಿಗೆ ಪ್ರೇರಣೆ ನೀಡಲಿವೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಕುರಿತಾದ ವಿಭಾಗವು ಭಾರತದ ಇಬ್ಬರು ಶ್ರೇಷ್ಠ ಮಹಿಳಾ ಸಾಧಕರ ಜೀವನದ ಬಗ್ಗೆ ಹೇಳುತ್ತದೆ. ಹಂಸಾ ಮೆಹ್ತಾ ಮತ್ತು ದುರ್ಗಾಬಾಯಿ ದೇಶಮುಖ್ ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ನಂತರ ಗಣರಾಜ್ಯದ ಯಶಸ್ಸಿಗೆ ಪ್ರಮುಖ ಪಾತ್ರ ವಹಿಸಿದ್ದಾರೆ.

ಕೋವಿಡ್ ಶಿಷ್ಟಾಚಾರ ಅನುಸರಿಸುವ ಮೂಲಕ ಸುರಕ್ಷಿತವಾಗಿರಿ ಮತ್ತು ನಿಮ್ಮ ಸಲಹೆಗಳನ್ನು ನಮಗೆ ತಿಳಿಸಿ

ವಿಳಾಸ: ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್,
ಎರಡನೇ ಮಹಡಿ, ಸೂಚನಾ ಭವನ, ನವದೆಹಲಿ - 110003

ಇ-ಮೇಲ್: response-nis@pib.gov.in



**(ಜೈದೀಪ್ ಭಟ್ನಾಗರ್)**

# ಅಂಚೆ ಪೆಟ್ಟಿಗೆ




ನಾನು ತಮಿಳುನಾಡಿನಿಂದ ಆನಂದ್. ಸರ್ಕಾರಿ ಉದ್ಯೋಗಗಳನ್ನು ಹುಡುಕುವ ಸ್ನೇಹಿತರ ಗುಂಪು ನಮ್ಮದು. ಆದ್ದರಿಂದ ನಾವು ನಿಯಮಿತವಾಗಿ ಎನ್‌ಐಎಸ್ ಪತ್ರಿಕೆಯನ್ನು ಅನುಸರಿಸುತ್ತೇವೆ. ಇದು ನಿಜವಾಗಿಯೂ ದೊಡ್ಡ ಪ್ರಯತ್ನ. ನಮ್ಮ ಪ್ರದೇಶದ ಶಾಲಾ ಮಕ್ಕಳಲ್ಲಿ ಎನ್‌ಐಎಸ್ ಪತ್ರಿಕೆ ಬಹಳ ಜನಪ್ರಿಯವಾಗಿದೆ. ಪತ್ರಿಕೆಯ ಪಿಡಿಎಫ್ ರೂಪವು ಅಷ್ಟೊಂದು ಆರಾಮದಾಯಕವಲ್ಲ. ಆದ್ದರಿಂದ ದಯವಿಟ್ಟು ಮುದ್ರಣ ಪ್ರತಿಯನ್ನು ಕಳುಹಿಸಿ ಮತ್ತು ಅದರಿಂದ ನಮಗೆ ಸಹಾಯವಾಗುತ್ತದೆ.

**ಆನಂದ್**
**avinashianands@gmail.com**

## ನಿಮ್ಮ ಸಲಹೆಗಳನ್ನು ಕಳುಹಿಸಿ

**ಸಂಪರ್ಕ ವಿಳಾಸ:**

ಕೊಠಡಿ ಸಂಖ್ಯೆ 278, ಬ್ಯೂರೋ ಆಫ್ ಔಟ್ ರೀಚ್ ಅಂಡ್ ಕಮ್ಯುನಿಕೇಷನ್, ಎರಡನೇ ಮಹಡಿ, ಸೂಚನಾ ಭವನ, ನವದೆಹಲಿ - 110003

**response-nis@pib.gov.in**

ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ನಮ್ಮ ದೇಶದ ಪ್ರಯತ್ನಗಳು ವಿಶ್ವಾದ್ಯಂತ ಮೆಚ್ಚುಗೆ ಪಡೆದಿವೆ ಮತ್ತು ಭಾರತವು ಈ ಕ್ಷೇತ್ರದಲ್ಲಿ ಈಗ ಮುನ್ನಡೆ ಸಾಧಿಸುತ್ತಿರುವುದಕ್ಕೆ ನಾವು ಹೆಮ್ಮೆಪಡುತ್ತೇವೆ. ಮುಂದಿನ ದಿನಗಳಲ್ಲಿ ಈ ಪತ್ರಿಕೆ ಇನ್ನೂ ಹೆಚ್ಚು ಜನಪ್ರಿಯವಾಗಲಿ ಎಂದು ಆಶಿಸುತ್ತೇವೆ.

**ತಪಸ್ ಕುಮಾರ್ ಸುರ್**
**tabas.sur@gmail.com**

ತನ್ನ ಓದುಗರಿಗೆ ಇತ್ತೀಚಿನ ಮಾಹಿತಿ ನೀಡುವಲ್ಲಿ ಮತ್ತು ಸರ್ಕಾರದ ಕೆಲಸಗಳ ಬಗ್ಗೆ ಅರಿವು ಮೂಡಿಸುವಲ್ಲಿ ಎನ್‌ಐಎಸ್ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತಿದೆ. ಅಲ್ಲದೆ, ನೀವು ಸಾಮಾನ್ಯವಾಗಿ ಪಠ್ಯಕ್ರಮದ ಭಾಗವಾಗಿರದ ವಿಷಯಗಳ ಬಗ್ಗೆ ಯುವಕರಿಗೆ ಶಿಕ್ಷಣ ನೀಡುತ್ತಿರುವುದು ಹೆಚ್ಚು ಪ್ರಶಂಸನೀಯ. ಅನೇಕ ಜನರಿಗೆ ಇಂಟರ್ನೆಟ್ ಲಭ್ಯವಿರುವುದಿಲ್ಲ, ಆದ್ದರಿಂದ ಆಫ್‌ಲೈನ್ ಮೋಡ್‌ನಲ್ಲಿ ಸಹ ಪ್ರವೇಶಿಸಬಹುದಾದ ಡಿಜಿಟಲ್ ನಿಯತಕಾಲಿಕದ ಡೌನ್‌ಲೋಡ್ ಲಿಂಕ್ ಅನ್ನು ಒದಗಿಸಬೇಕೆಂಬುದು ನನ್ನ ಸಲಹೆಯಾಗಿದೆ.

**ಅಂಕೇಶ್ ಕುಮಾರ್ ಶರ್ಮಾ**
**ankesh.sharma@gov.in**

ಇದು ಮೋದಿಯವರ ಸರ್ಕಾರದ ನೀತಿಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವ ಅಪರೂಪದ ಪತ್ರಿಕೆಯಾಗಿದೆ. ಕೇರಳದ ಜನರಿಗೆ ಕೇಂದ್ರ ಸರ್ಕಾರದ ಪ್ರಯತ್ನಗಳ ಬಗ್ಗೆ ಅರಿವು ಮೂಡಿಸುವಲ್ಲಿ ಇದು ಬಹಳ ಸಹಕಾರಿಯಾಗಿದೆ. ಇದು ರಾಜ್ಯದ ಅನೇಕ ಜನರಿಗೆ ತಿಳಿದಿಲ್ಲ. ದಯವಿಟ್ಟು ಇದನ್ನು ಪ್ರಕಟಿಸುವುದನ್ನು ಮುಂದುವರಿಸಿ. ಈ ಪ್ರಯತ್ನದಲ್ಲಿ ಸಂಪೂರ್ಣ ಯಶಸ್ಸನ್ನು ಮನಃಪೂರ್ವಕವಾಗಿ ಬಯಸುತ್ತೇವೆ.

**prkutty33@gmail.com**

ಪರಿಸರದ ಸಮಸ್ಯೆ ಮತ್ತು ಅದರ ಸಂರಕ್ಷಣೆಯನ್ನು ಎತ್ತಿ ತೋರಿಸಿದ್ದಕ್ಕಾಗಿ ಒಂದು ದೊಡ್ಡ ನಮನ. ಕೋವಿಡ್ -19 ಅಪಾಯದಿಂದ ಪಾರಾಗಲು ಸಿದ್ಧತೆಗಳು, ಎಂಎಸ್‌ಎಂಇ ವಲಯದ ಪ್ರಗತಿಗೆ ಪ್ರಯತ್ನಗಳು ಮತ್ತು ಬಾಲ ಕಾರ್ಮಿಕ ಪದ್ಧತಿಯನ್ನು ನಿಗ್ರಹಿಸಲು ಕೈಗೊಂಡ ಕ್ರಮಗಳ ಬಗ್ಗೆ ಲೇಖನಗಳು ನಿಜವಾಗಿಯೂ ಇಷ್ಟವಾದವು.

**ಚಂದ್ರಕಾಂತ ಪ್ರಧಾನ್**
**chandrakantapradhan2014@gmail.com**

# ಕೊರೋನಾ ಅವಧಿಯಲ್ಲಿ 20 ಸಾವಿರ ಸ್ಟಾರ್ಟ್ ಅಪ್‌ಗಳ ಸೇರ್ಪಡೆಯೊಂದಿಗೆ ಭಾರತದ ಬೆಳವಣಿಗೆಯನ್ನು ಹೆಚ್ಚಿಸಿದ ಹೊಸ ಶೋಧಗಳು

ಸ್ವಾಮಿ ವಿವೇಕಾನಂದರು, "ನನ್ನ ನಂಬಿಕೆ ಯುವ ಮತ್ತು ಆಧುನಿಕ ಪೀಳಿಗೆಯಲ್ಲಿದೆ. ಅವರು ಸಿಂಹಗಳಂತೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತಾರೆ." ಎಂದು ಹೇಳಿದ್ದರು. ಆರ್ಥಿಕತೆಯು ಸಾಮಾನ್ಯ ಸ್ಥಿತಿಗೆ ಮರಳುತ್ತಿರುವ ಈ ಸಂದರ್ಭದಲ್ಲಿ ಅವರ ಮಾತುಗಳು ನವಭಾರತದಲ್ಲಿ ವಿಶೇಷವಾಗಿ ಕೋವಿಡ್ ಅವಧಿಯಲ್ಲಿ ನಿಜವಾಗುತ್ತಿವೆ. ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ದೇಶದ ಯುವಕರು ಹೊಸ ಇತಿಹಾಸವನ್ನು ಬರೆದರು. 2020 ರ ಏಪ್ರಿಲ್ ಒಂದರಿಂದ ಇದುವರೆಗೆ 20,000 ಸ್ಟಾರ್ಟ್ ಅಪ್ ಗಳನ್ನು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಪ್ರೋತ್ಸಾಹ ಇಲಾಖೆ (ಡಿಪಿಐಐಟಿ) ಮಾನ್ಯ ಮಾಡಿದೆ. ಗಮನಾರ್ಹವಾಗಿ, ಕಳೆದ 180 ದಿನಗಳಲ್ಲಿ 10,000 ಸ್ಟಾರ್ಟ್ ಅಪ್ ಗಳನ್ನು ಸೇರಿಸಲಾಗಿದೆ. ಇಲ್ಲಿಯವರೆಗೆ 50,000 ಸ್ಟಾರ್ಟ್ ಅಪ್ ಗಳನ್ನು ಡಿಪಿಐಐಟಿ ಮಾನ್ಯ ಮಾಡಿದೆ ಕಳೆದ ಹಣಕಾಸು ವರ್ಷದಲ್ಲಿ, ಮಾನ್ಯತೆ ಪಡೆದ ಸ್ಟಾರ್ಟ್ ಅಪ್ ಗಳು ದೇಶದಲ್ಲಿ 1.7 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ. ಭಾರತವು ನವೀನತೆಯ ನಾಯಕನಾಗುವಲ್ಲಿ ಸ್ಟಾರ್ಟ್ ಅಪ್ ಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ಮಾನ್ಯತೆ ಪಡೆದ ಸ್ಟಾರ್ಟ್‌ಅಪ್‌ಗಳು ಈಗ 623 ಜಿಲ್ಲೆಗಳಲ್ಲಿ ಹರಡಿವೆ. ಪ್ರತಿಯೊಂದೂ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕನಿಷ್ಠ ಒಂದು ಸ್ಟಾರ್ಟ್ ಅಪ್ ಇದೆ. ಗುಜರಾತ್, ಉತ್ತರ ಪ್ರದೇಶ, ಕರ್ನಾಟಕ, ದೆಹಲಿ, ಮಹಾರಾಷ್ಟ್ರಗಳು ಹೆಚ್ಚಿನ ಸಂಖ್ಯೆಯ ಸ್ಟಾರ್ಟ್ ಅಪ್ ಗಳನ್ನು ಹೊಂದಿವೆ. ಆಹಾರ ಸಂಸ್ಕರಣೆ, ಅಪ್ಲಿಕೇಶನ್ ಅಭಿವೃದ್ಧಿ, ಆದಾಯ ತೆರಿಗೆ ಸಲಹೆ ಮತ್ತು ವ್ಯಾಪಾರ ಬೆಂಬಲ ಸೇವೆಗಳ ಕ್ಷೇತ್ರಗಳಲ್ಲಿ ಗರಿಷ್ಠ ಸಂಖ್ಯೆಯ ಸ್ಟಾರ್ಟ್ ಅಪ್ ಗಳನ್ನು ನೋಂದಾಯಿಸಲಾಗಿದೆ. ಒಟ್ಟು ಸ್ಟಾರ್ಟ್ ಅಪ್ ಗಳಲ್ಲಿ ಶೇಕಡಾ 45 ರಷ್ಟು ಮಹಿಳೆಯರ ನೇತೃತ್ವದಲ್ಲಿದೆ. 10,000 ಕೋಟಿ ರೂ.ಗಳ ನಿಧಿ ಯೋಜನೆ ಮತ್ತು ಇತ್ತೀಚೆಗೆ ಪ್ರಾರಂಭಿಸಲಾದ ಸ್ಟಾರ್ಟ್‌ಅಪ್ ಇಂಡಿಯಾ ಸೀಡ್ ಫಂಡ್ ಸ್ಕೀಮ್ (ಎಸ್‌ಐಎಸ್‌ಎಫ್‌ಎಸ್) 945 ಕೋಟಿ ರೂ.ಗಳ ವಿನಿಯೋಗದೊಂದಿಗೆ ದೇಶದಲ್ಲಿ ನವೋದ್ಯಮ ಪರಿಸರ ವ್ಯವಸ್ಥೆಯ ಪ್ರಗತಿಯ ಗುರಿಯನ್ನು ಹೊಂದಿದೆ.

## 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬರಹಗಾರರಿಗಾಗಿ 'ಯುವ' ಯೋಜನೆ

ಭಾರತೀಯ ಪರಂಪರೆ, ಸಂಸ್ಕೃತಿ ಮತ್ತು ಜ್ಞಾನವನ್ನು ಉತ್ತೇಜಿಸುವ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿಯವರು ಯುವ ಲೇಖಕರಿಗೆ ಮಾರ್ಗದರ್ಶನ ನೀಡಲು 'ಯುವ, ಭವಿಷ್ಯದ ಮತ್ತು ಬಹುಮುಖಿ ಲೇಖಕರು'(ಯುವ) ಯೋಜನೆಯನ್ನು ಪ್ರಾರಂಭಿಸಿದ್ದಾರೆ. ಆಜ಼ಾದಿ ಕಾ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ಇದನ್ನು ಪ್ರಾರಂಭಿಸಲಾಗಿದೆ. ಶಿಕ್ಷಣ ಸಚಿವಾಲಯದ ಅಧೀನದಲ್ಲಿರುವ ನ್ಯಾಷನಲ್ ಬುಕ್ ಟ್ರಸ್ಟ್ ಹಂತಹಂತವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ಏಕ್ ಭಾರತ್ ಶ್ರೇಷ್ಠ ಭಾರತ್ ಅಡಿಯಲ್ಲಿ ಸಂಸ್ಕೃತಿ ಮತ್ತು ಸಾಹಿತ್ಯದ ವಿನಿಮಯವನ್ನು ಖಚಿತಪಡಿಸಿಕೊಳ್ಳಲು ಪುಸ್ತಕಗಳನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸಲಾಗುವುದು. ಜುಲೈ 31 ರವರೆಗೆ ನಡೆಯಲಿರುವ ಸ್ಪರ್ಧೆಯ ಮೂಲಕ ಒಟ್ಟು 75 ಭವಿಷ್ಯದ ಯುವ ಮತ್ತು ಬಹುಮುಖಿ ಬರಹಗಾರರನ್ನು ಆಯ್ಕೆ ಮಾಡಲಾಗುತ್ತದೆ. ವಿಜೇತರನ್ನು ಸ್ವಾತಂತ್ರ್ಯ ದಿನದಂದು ಘೋಷಿಸಲಾಗುತ್ತದೆ. ಈ ಯುವ ಬರಹಗಾರರಿಗೆ ಪ್ರಖ್ಯಾತ ಬರಹಗಾರರು ಮತ್ತು ಮಾರ್ಗದರ್ಶಕರು ತರಬೇತಿ ನೀಡಲಿದ್ದಾರೆ. ಪ್ರಕಟವಾದ ಪುಸ್ತಕಗಳನ್ನು ಜನವರಿ 12, 2022 ರಂದು 'ಯುವ ದಿವಸ್' ಅಥವಾ ರಾಷ್ಟ್ರೀಯ ಯುವ ದಿನಾಚರಣೆಯಂದು ಬಿಡುಗಡೆ ಮಾಡಲಾಗುವುದು.




## ಸರ್ಕಾರದಿಂದ 'ಪ್ಲಾಸ್ಟಿಕ್ ಹ್ಯಾಕಥಾನ್ 2021'

ಭಾರತವನ್ನು ಏಕ-ಬಳಕೆಯ ಪ್ಲಾಸ್ಟಿಕ್‌ನಿಂದ ಮುಕ್ತಗೊಳಿಸಲು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಈಗ ವಿದೇಶದಿಂದ ಭಾರತಕ್ಕೆ ಬರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ನಿಷೇಧಿಸಲಾಗಿದೆ. ಅಲ್ಲದೆ, ಏಕ-ಬಳಕೆಯ ಪ್ಲಾಸ್ಟಿಕ್ ಸಹ ನಿಷೇಧಿಸಲಾಗಿದೆ, ಇದಕ್ಕಾಗಿ ಎಲ್ಲಾ ರಾಜ್ಯಗಳಿಗೆ ಅದರ ಬಳಕೆಯನ್ನು ನಿಲ್ಲಿಸಲು ಅಗತ್ಯವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಸರ್ಕಾರ ಪ್ರಕಟಿಸಿದ್ದು, ಇದರ ಅಡಿಯಲ್ಲಿ 40 ಮೈಕ್ರಾನ್‌ಗಳಿಗಿಂತ ತೆಳುವಿರುವ ಪ್ಲಾಸ್ಟಿಕ್ ಅನ್ನು ಬಳಸುವಂತಿಲ್ಲ. ದೇಶಾದ್ಯಂತ ಅಭಿಯಾನದ ಭಾಗವಾಗಿ ಸಾರ್ವಜನಿಕ ಜಾಗೃತಿಯ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ. ಸಮಸ್ಯೆಯನ್ನು ಪರಿಹರಿಸಲು ಹೊಸತನವನ್ನು ಉತ್ತೇಜಿಸಲು ಕಾಲೇಜು ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಹ್ಯಾಕಥಾನ್ 2021- ಅನ್ನು ಆಯೋಜಿಸಲಾಗುವುದು. ಪ್ಲಾಸ್ಟಿಕ್ ತ್ಯಾಜ್ಯವನ್ನು ತಡೆಗಟ್ಟುವುದು ಮತ್ತು ಅದನ್ನು ಸಂಗ್ರಹಿಸುವ ಹೊಸ ವಿಧಾನವನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಗಮನಾರ್ಹವಾಗಿ, ಅದರಿಂದ ಯಾವ ಹೊಸ ವಸ್ತುಗಳನ್ನು ಮಾಡಬಹುದು ಎಂಬ ಸಂಶೋಧನೆಯನ್ನೂ ಇದು ಉತ್ತೇಜಿಸುತ್ತದೆ. ಏಕ ಬಳಕೆಯ ಪ್ಲಾಸ್ಟಿಕ್‌ನ ಪರ್ಯಾಯದ ಬಗ್ಗೆಯೂ ಹ್ಯಾಕಥಾನ್ ಚರ್ಚಿಸಲಿದೆ.



## ಹೊಸ ದಾಖಲೆ ನಿರ್ಮಿಸಿದ ಹಿಂಗಾರು ಹಂಗಾಮು: ಈ ಹಂಗಾಮಿನಲ್ಲಿ ಎಂಎಸ್‌ಪಿಯಲ್ಲಿ ಗೋಧಿ ಖರೀದಿ ಸಾರ್ವಕಾಲಿಕ ಏರಿಕೆ; ಗರಿಷ್ಠ ಮಟ್ಟ ತಲುಪಿದ ಕೃಷಿ ರಫ್ತು

ಕೋವಿಡ್ ಸಾಂಕ್ರಾಮಿಕದ ದುಷ್ಪರಿಣಾಮದ ಹೊರತಾಗಿಯೂ ಕೃಷಿ ಕ್ಷೇತ್ರವು ಉಲ್ಲಾಸ ತಂದಿದೆ. ಒಂದು ಕಡೆ ಭಾರತದ ಕೃಷಿ ರಫ್ತು ಹಿಂದೆಂದಿಗಿಂತಲೂ ಹೆಚ್ಚಿನ ಅಂಕಿ-ಅಂಶಗಳನ್ನು ದಾಟಿದೆ, ಮತ್ತೊಂದೆಡೆ ದೇಶದಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಗೋಧಿ ಮತ್ತು ಭತ್ತವನ್ನು ಖರೀದಿಸುವಲ್ಲಿ ಹೊಸ ದಾಖಲೆ ನಿರ್ಮಿಸಲಾಗಿದೆ. ಏಪ್ರಿಲ್‌ನಲ್ಲಿ ಪ್ರಾರಂಭವಾದ ಪ್ರಸಕ್ತ ಮಾರುಕಟ್ಟೆ ಹಂಗಾಮಿನಲ್ಲಿ ಇದುವರೆಗೆ ದಾಖಲೆಯ 418 ಲಕ್ಷ ಟನ್ ಗೋಧಿ ಖರೀದಿಸಲಾಗಿದ್ದು, ಇದಕ್ಕಾಗಿ 82,648 ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ ಖರೀದಿಯಿಂದ ಸುಮಾರು 46 ಲಕ್ಷ ರೈತರು ಲಾಭ ಪಡೆದಿದ್ದಾರೆ. ಪಾರದರ್ಶಕತೆಯನ್ನು ಖಾತರಿಪಡಿಸುವ ಉದ್ದೇಶದಿಂದ, ರೈತರ ಖಾತೆಗೆ ನೇರ ನಗದು ಪಾವತಿ ಮಾಡಲಾಗಿದೆ. ಜಮ್ಮು ಮತ್ತು ಕಾಶ್ಮೀರದ ಜೊತೆಗೆ ಉತ್ತರ ಪ್ರದೇಶ, ಬಿಹಾರ, ಹಿಮಾಚಲ ಪ್ರದೇಶ, ರಾಜಸ್ಥಾನ, ಮತ್ತು ಗುಜರಾತ್ ರಾಜ್ಯಗಳಲ್ಲಿ ಗೋಧಿ ಖರೀದಿ ಇನ್ನೂ ಮುಂದುವರಿದಿದೆ, ಇದು ಇನ್ನೂ ಏರಿಕೆಯಾಗುವ ನಿರೀಕ್ಷೆಯಿದೆ. ಕಳೆದ ವರ್ಷ ಎಂಎಸ್‌ಪಿಯಲ್ಲಿ 373.22 ಮೆಟ್ರಿಕ್ ಟನ್ ಗೋಧಿ ಖರೀದಿಸಲಾಗಿತ್ತು. ಜೂನ್ 8 ರವರೆಗೆ ಭತ್ತದ ಖರೀದಿಯು 816 ಲಕ್ಷ ಮೆಟ್ರಿಕ್ ಟನ್ ದಾಟಿದೆ. ಇದರಲ್ಲಿ ಮುಂಗಾರು ಮತ್ತು ಹಿಂಗಾರು ಹಂಗಾಮಿನಿಂದ ಸುಮಾರು 109 ಲಕ್ಷ ಮೆಟ್ರಿಕ್ ಟನ್ ಭತ್ತ ಸೇರಿದೆ. ಮುಂಗಾರು ಹಂಗಾಮಿನಲ್ಲಿ ಭತ್ತದ ರೈತರಿಗೆ 1 ಲಕ್ಷ 54 ಸಾವಿರ ಕೋಟಿ ರೂ. ಪಾವತಿಸಲಾಗಿದೆ. ಕೋವಿಡ್ ಸಾಂಕ್ರಾಮಿಕದ ಮಧ್ಯೆ, ಭಾರತದ ಕೃಷಿ ರಫ್ತು 2020-21ರಲ್ಲಿ 41 ಬಿಲಿಯನ್ ಡಾಲರ್ ಗಡಿ ದಾಟಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶೇಕಡಾ 17.34 ರಷ್ಟು ಹೆಚ್ಚಾಗಿದೆ. ಕೃಷಿ ರಫ್ತು 2017-18ರಲ್ಲಿ 38.43 ಬಿಲಿಯನ್ ಡಾಲರ್ ಇತ್ತು, 2018-19ರಲ್ಲಿ. 38.74 ಬಿಲಿಯನ್ ಮತ್ತು 2019-20ರಲ್ಲಿ. 35.16 ಬಿಲಿಯನ್ ಡಾಲರ್ ಆಗಿತ್ತು.

## ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಳೆದ 5 ವರ್ಷಗಳಲ್ಲಿ ಶೇ.18 ರಷ್ಟು ಹೆಚ್ಚಳ

"ಶಿಕ್ಷಣವು ಸಾಧ್ಯತೆಗಳ ಬಾಗಿಲು ತೆರೆಯುತ್ತದೆ." ಕಳೆದ 5 ವರ್ಷಗಳಿಂದ ಭಾರತದಲ್ಲಿ ಉನ್ನತ ಶಿಕ್ಷಣದ ಅಂಕಿಅಂಶಗಳನ್ನು ನೋಡಿದರೆ, ಇದು ಸಂಪೂರ್ಣವಾಗಿ ನಿಜವೆಂದು ಸಾಬೀತಾಗುತ್ತದೆ. ಶಿಕ್ಷಣ ಸಚಿವಾಲಯ ಜೂನ್ 10 ರಂದು ಬಿಡುಗಡೆ ಮಾಡಿದ ಅಖಿಲ ಭಾರತ ಉನ್ನತ ಶಿಕ್ಷಣ ವರದಿ 2019- 20 ರ ಪ್ರಕಾರ, ದೇಶದಲ್ಲಿ ಪಿಎಚ್‌ಡಿ ವಿದ್ಯಾರ್ಥಿಗಳ ಸಂಖ್ಯೆ 2020 ರಲ್ಲಿ 2.03 ಲಕ್ಷಕ್ಕೆ ಏರಿದೆ. 2015 ರಲ್ಲಿ ಈ ಸಂಖ್ಯೆ 1.17 ಲಕ್ಷ ಆಗಿತ್ತು. ದೇಶದಲ್ಲಿ ಪಿಎಚ್‌ಡಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ವಿಶೇಷವೆಂದರೆ, ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುತ್ತಿರುವವರಲ್ಲಿ ಮಹಿಳೆಯರ ಭಾಗವಹಿಸುವಿಕೆಯೂ ಹೆಚ್ಚಾಗಿದೆ. 2019-20ರಲ್ಲಿ ಒಟ್ಟು 3.85 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ದಾಖಲಾಗಿದ್ದಾರೆ. 2015 ರಿಂದ 2019 ರ ಅವಧಿಯಲ್ಲಿ ಪ್ರವೇಶದಲ್ಲಿ ಶೇಕಡಾ 11.4 ರಷ್ಟು ಹೆಚ್ಚಳವಾಗಿದ್ದರೆ, ಇದೇ ಅವಧಿಯಲ್ಲಿ ಬಾಲಕಿಯರ ದಾಖಲಾತಿಯಲ್ಲಿ ಶೇ 18.2 ರಷ್ಟು ಹೆಚ್ಚಳವಾಗಿದೆ. ಕಳೆದ ಒಂದು ವರ್ಷದಲ್ಲಿ ಉನ್ನತ ಶಿಕ್ಷಣಕ್ಕೆ ಮಹಿಳೆಯರ ದಾಖಲೆಯ 7,52,097 ಹೆಚ್ಚಳ ಕಂಡುಬಂದಿದೆ.



### ದೇಶದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದ ಸುಧಾರಣೆ

- ದೇಶಾದ್ಯಂತ 14,16,299 ಶಿಕ್ಷಕರಿದ್ದು, ಅವರಲ್ಲಿ ಶೇ 57.8 ರಷ್ಟು ಪುರುಷರು ಮತ್ತು 42.2 ರಷ್ಟು ಮಹಿಳೆಯರು ಇದ್ದಾರೆ.
- ಮಹಿಳೆಯರಿಗೆ ಶಿಕ್ಷಣ ನೀಡುವಲ್ಲಿ 16 ವಿಶ್ವವಿದ್ಯಾಲಯಗಳು ಮುಂಚೂಣಿಯಲ್ಲಿವೆ, ಅದರಲ್ಲಿ ಗರಿಷ್ಠ ಮೂರು ರಾಜಸ್ಥಾನದಲ್ಲಿವೆ.
- 60.53 ರಷ್ಟು ಕಾಲೇಜುಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಲಾಗಿದೆ.
- ವಿಜ್ಞಾನದಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಪಿಎಚ್‌ಡಿ ಮಾಡುತ್ತಿದ್ದರೆ, ನಂತರದ ಸ್ಥಾನದಲ್ಲಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿದ್ಯಾರ್ಥಿಗಳು ಇದ್ದಾರೆ.
- ಸ್ನಾತಕೋತ್ತರ ಅಧ್ಯಯನದಲ್ಲಿ ಸಮಾಜ ವಿಜ್ಞಾನವು ಮೊದಲನೆಯ ಮತ್ತು ನಿರ್ವಹಣೆ ಎರಡನೇ ಅತ್ಯಂತ ಜನಪ್ರಿಯ ವಿಷಯವಾಗಿದೆ. ■



# ‘ಯುವಕರು ದೇಶವನ್ನು ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯುಲಿದ್ದಾರೆ’

*ವಿದ್ಯಾರ್ಥಿಗಳೊಂದಿಗಿನ ಸಂವಾದದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ*

**ಕೋವಿಡ್ ಅವಧಿಯಲ್ಲಿ ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ಚಿಂತಿತರಾಗಿದ್ದಾಗ ಸಿಬಿಎಸ್ಇ ಮಂಡಳಿಯ ಹನ್ನೆರಡನೇ ತರಗತಿ ಪರೀಕ್ಷೆಯನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರ ಸೂಕ್ಷ್ಮ ಮತ್ತು ಅನುಭೂತಿಯ ನಿರ್ಧಾರವನ್ನು ತೆಗೆದುಕೊಂಡಿತು. ಈಗಾಗಲೇ ಹತ್ತನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಪಾಲಕರ ಪಾತ್ರ ವಹಿಸಿ ಮಾಹಿತಿಯನ್ನು ಸ್ವತಃ ಹಂಚಿಕೊಂಡಿದ್ದು ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ಸಮಾಧಾನ ತಂದಿತು. ಈ ನಿರ್ಧಾರದ ನಂತರ, ಜೂನ್ 3 ರಂದು ಶಿಕ್ಷಣ ಸಚಿವಾಲಯವು ವಿದ್ಯಾರ್ಥಿಗಳು ಮತ್ತು ಅವರ ಪೋಷಕರೊಂದಿಗೆ ವರ್ಚುವಲ್ ಸಂವಾದವನ್ನು ಆಯೋಜಿಸಿದಾಗ, ಪ್ರಧಾನ ಮಂತ್ರಿಯವರು ಸಂವಾದದಲ್ಲಿ ದಿಢೀರನೇ ಕಾಣಿಸಿಕೊಂಡರು. ಅವರ ಆಗಮನವು ಆಶ್ಚರ್ಯಕರವಾಗಿತ್ತು. ನಂತರ ಪ್ರಧಾನ ಮಂತ್ರಿಯವರು ವಿದ್ಯಾರ್ಥಿಗಳೊಂದಿಗೆ ನೇರ ಸಂವಾದ ನಡೆಸಿದರು.**

ಸಂವಾದದ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ಕಾಳಜಿ ಮತ್ತು ಅಭಿಪ್ರಾಯಗಳನ್ನು ಪ್ರಧಾನ ಮಂತ್ರಿಯವರಿಗೆ ಬಹಿರಂಗವಾಗಿ ತಿಳಿಸಿದರು. ಪ್ರಧಾನಿ ಅವರು ಪರೀಕ್ಷೆಯ ಕುರಿತು, ಕೋವಿಡ್ ಸಮಯದಲ್ಲಿ ಜಾಗರೂಕತೆ ಬಗ್ಗೆ ಮತ್ತು ಅವರ ಭವಿಷ್ಯದ ಬಗ್ಗೆ ಮಾತನಾಡಿದರು. ನೃತ್ಯ, ಯೂಟ್ಯೂಬ್ ಮ್ಯೂಸಿಕ್ ಚಾನೆಲ್‌ಗಳು, ವ್ಯಾಯಾಮ ಮತ್ತು ರಾಜಕೀಯದ ಹಲವಾರು ವಿಷಯಗಳ ಕುರಿತು ವಿದ್ಯಾರ್ಥಿಗಳು ಮತ್ತು ಪೋಷಕರು ಪ್ರತಿಕ್ರಿಯಿಸಿದರು. ಪರೀಕ್ಷೆಯನ್ನು ರದ್ದುಗೊಳಿಸಿದ ನಂತರ ಉಳಿದಿರುವ ಸಮಯದಲ್ಲಿ ವಿಶೇಷವಾಗಿ ತಮ್ಮ ಜಿಲ್ಲೆಗಳಿಗೆ ಸಂಬಂಧಿಸಿದಂತೆ 75 ವರ್ಷಗಳ ಭಾರತದ ಸ್ವಾತಂತ್ರ್ಯದ ಬಗ್ಗೆ ಸಂಶೋಧನೆ ಮಾಡುವಂತೆ ಮತ್ತು ಬರೆಯುವಂತೆ ಅವರು ಸಲಹೆ ನೀಡಿದರು, ಸಂವಾದದ ಆಯ್ದ ಭಾಗ:

**ಪ್ರಧಾನ ಮಂತ್ರಿ ಮೋದಿ:** ನಾನು ಇದ್ದಕ್ಕಿದ್ದಂತೆ ಬಂದಿದ್ದೇನೆ, ಆದರೆ ನೀವು ತುಂಬಾ ಹರ್ಷಚಿತ್ತದಿಂದ ಇರುವ ಕಾರಣ ನಾನು ನಿಮಗೆ ತೊಂದರೆ ಕೊಡಲು ಬಯಸುವುದಿಲ್ಲ ಮತ್ತು ಈಗ ನಿಮಗೆ ಪರೀಕ್ಷೆಯ ಆತಂಕವಿಲ್ಲ. ನೀವೆಲ್ಲರೂ ಹೇಗಿದ್ದೀರಿ? ನಿಮಗೆ ಪರೀಕ್ಷೆಯ ಆತಂಕ ಇತ್ತಾ?

**ವಿದ್ಯಾರ್ಥಿಗಳು:** ಹೌದು ಸರ್, ನಿಜವಾಗಲೂ ಇತ್ತು.

> “ಭಾರತದ ಯುವಕರು ಸಕಾರಾತ್ಮಕ ಮತ್ತು ಪ್ರಾಯೋಗಿಕ ಮನೋಭಾವದವರು. ನಕಾರಾತ್ಮಕ ಆಲೋಚನೆಗಳಿಗೆ ಬದಲಾಗಿ, ನೀವು ಪ್ರತಿ ಕಷ್ಟ ಮತ್ತು ಸವಾಲನ್ನು ನಿಮ್ಮ ಶಕ್ತಿಯನ್ನಾಗಿ ಪರಿವರ್ತಿಸುತ್ತೀರಿ. ಇದು ನಮ್ಮ ದೇಶದ ಯುವಕರ ವಿಶೇಷತೆ. ಮನೆಯಲ್ಲಿ ನಿರ್ಬಂಧದಲ್ಲಿರುವಾಗ ನೀವು ನಡೆಸಿದ ಆವಿಷ್ಕಾರಗಳು ಮತ್ತು ನೀವು ಕಲಿತ ಹೊಸ ವಿಷಯಗಳು ನಿಮ್ಮಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿವೆ.”
> - ಪ್ರಧಾನ ಮಂತ್ರಿ ನರೇಂದ್ರ ಮೋದಿ

Q&A

> ಕಳೆದ ನಾಲ್ಕೈದು ತಲೆಮಾರುಗಳಲ್ಲಿ ಈ ಬಗ್ಗೆ ಯಾರೂ ಕೇಳಿರಲಿಲ್ಲ, ಆದರೆ ಇದು ನಮ್ಮ ಜೀವಿತಾವಧಿಯಲ್ಲಿ ಸಂಭವಿಸಿದೆ. ಪ್ರತಿಯೊಬ್ಬ ಭಾರತೀಯನ ಮಾತೂ ನಾವು ಇದನ್ನು ಸೋಲಿಸುತ್ತೇವೆ, ಈ ಬಿಕ್ಕಟ್ಟಿನಿಂದ ಹೊರಬರುತ್ತೇವೆ ಮತ್ತು ಹೊಸ ಶಕ್ತಿಯೊಂದಿಗೆ ದೇಶವನ್ನು ಮುಂದೆ ಕೊಂಡೊಯ್ಯುತ್ತೇವೆ ಎಂಬುದನ್ನು ಧ್ವನಿಸುತ್ತದೆ. ನಾವು ಒಟ್ಟಾಗಿ ಮುಂದುವರಿಯಬೇಕು. ನೀವು ಎಲ್ಲಿಗೆ ಹೋದರೂ, ನೀವು ಒಟ್ಟಿಗೆ ಮುಂದುವರಿಯುತ್ತೀರಿ ಮತ್ತು ದೇಶವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುತ್ತೀರಿ ಎಂದು ನನಗೆ ವಿಶ್ವಾಸವಿದೆ.

**ಪ್ರಧಾನ ಮಂತ್ರಿ ಮೋದಿ:** ಹಾಗಾದರೆ, ಪರೀಕ್ಷೆಗಳ ವಿಷಯವು ನಿಮ್ಮ ಮನಸ್ಸಿನಿಂದ ಇನ್ನೂ ಹೊರಹೋಗಿಲ್ಲ. ನೀವು ನಿಮ್ಮ ಮನೆಯಲ್ಲಿದ್ದೀರಿ, ಆದ್ದರಿಂದ ನಿಮ್ಮ ಪೋಷಕರು ಈಗ ಎಲ್ಲವನ್ನೂ ಕೇಳುತ್ತಿರಬೇಕು. ನಿಮ್ಮ ಮಗಳು ಪರೀಕ್ಷೆಯಿಂದ ನಿರಾಳವಾಗಿರುವ ಬಗ್ಗೆ ಈಗ ನಿಮಗೆ ಹೇಗನಿಸುತ್ತಿದೆ?

**ಪೋಷಕರು:** ಸರ್, ಇದು ಒಳ್ಳೆಯ ನಿರ್ಧಾರ, ಏಕೆಂದರೆ ಇಡೀ ದೇಶದಲ್ಲಿ ಪರಿಸ್ಥಿತಿ ನಿಜವಾಗಿಯೂ ಕೆಟ್ಟದಾಗಿದೆ. ವಿದ್ಯಾರ್ಥಿಗಳು ಈಗ ಆತಂಕದಿಂದ ಮುಕ್ತರಾಗಿದ್ದಾರೆ ಮತ್ತು ಅವರು ತಮ್ಮ ವೃತ್ತಿಜೀವನಕ್ಕೆ ಉತ್ತಮ ಸಿದ್ಧತೆ ಮಾಡಿಕೊಳ್ಳಬಹುದು.

**ಪ್ರಧಾನ ಮಂತ್ರಿ ಮೋದಿ:** ಹಾಗಾದರೆ ನನ್ನ ಪುಸ್ತಕದಿಂದ ಪ್ರಯೋಜನವಿಲ್ಲ ಏಕೆಂದರೆ ನಾನು ಪರೀಕ್ಷಾ ವಾರಿಯರ್‌ನಲ್ಲಿ ಬರೆದಿದ್ದೇನೆ, ಎಂದಿಗೂ ಆತಂಕವನ್ನು ಪಡಬೇಡಿ ಎಂದು. ಹಾಗಿದ್ದರೂ ನೀವೇಕೆ ಉದ್ವೇಗದಲ್ಲಿದ್ದಿರಿ?

**ವಿದ್ಯಾರ್ಥಿ:** ಸರ್, ನಾವು ಪ್ರತಿದಿನ ಸಿದ್ಧತೆ ಮಾಡಿಕೊಂಡರೆ ಯಾವುದೇ ಆತಂಕ ಇರುವುದಿಲ್ಲ.

**ಪ್ರಧಾನ ಮಂತ್ರಿ ಮೋದಿ:** ಹಾಗಾದರೆ, ಆತಂಕ ಎಲ್ಲಿದೆ?

**ವಿದ್ಯಾರ್ಥಿ:** ಅಂತಹ ಯಾವುದೇ ಉದ್ವೇಗ ಇರಲಿಲ್ಲ. ಯುವಕರ ಆರೋಗ್ಯ ಮುಖ್ಯ. ಅಂತಹ ಮಹತ್ತರವಾದ ನಿರ್ಧಾರ ಕೈಗೊಂಡಿದ್ದಕ್ಕಾಗಿ ನಾವು ನಿಮಗೆ ಸದಾ ಋಣಿಯಾಗಿರುತ್ತೇವೆ.

**ಪ್ರಧಾನ ಮಂತ್ರಿ ಮೋದಿ:** ಹಿತೇಶ್ವರ ಶರ್ಮಾ ಅವರೇ!, ನೀವು ಪಂಚಕುಲದವರಾ? ನಾನು ಸೆಕ್ಟರ್ 7 ರಲ್ಲಿ ಹಲವು ವರ್ಷಗಳ ಕಾಲ ಇದ್ದೆ.

**ವಿದ್ಯಾರ್ಥಿ:** ಸರ್, ನಿಮ್ಮನ್ನು ಬೆಂಬಲಿಸುವ ಹಾಗೂ ಮತ್ತೆ ನಿಮ್ಮನ್ನು ಇಲ್ಲಿ ನೋಡಲು ಬಯಸುವ ಅನೇಕ ಜನರಿದ್ದಾರೆ.

**ಪ್ರಧಾನ ಮಂತ್ರಿ ಮೋದಿ:** ಹೇಳಿ, ನೀವು ಹತ್ತನೇ ತರಗತಿಯಲ್ಲಿ ಅಗ್ರಸ್ಥಾನದಲ್ಲಿದ್ದಿರಿ. ನೀವು ಮತ್ತೆ ಹನ್ನೆರಡನೇ ತರಗತಿಯ ಅಗ್ರಸ್ಥಾನಕ್ಕಾಗಿ ಸಿದ್ಧರಾಗಿದ್ದೀರಿ. ಈಗ ಯಾವುದೇ ಪರೀಕ್ಷೆಗಳಿಲ್ಲ, ಈಗ ಏನು?

**ವಿದ್ಯಾರ್ಥಿ:** ಹಲವು ನಿರೀಕ್ಷೆಗಳಿದ್ದವು. ಆದರೆ ಪರೀಕ್ಷೆಗೆ ಒತ್ತಡ ಹೆಚ್ಚಾಗುತ್ತಿದ್ದಂತೆ ನಾನು ನಿರ್ಧಾರವನ್ನು ಇಷ್ಟಪಟ್ಟೆ. ಅದು ಅಂತಿಮ ಹಂತ ತಲುಪಿದೆ. ಮತ್ತು ಇದು ಸುರಕ್ಷಿತವಲ್ಲ ಎಂಬುದು ನಮಗೆ ಗೊತ್ತಾಗಬೇಕು. ನೀವು ಉತ್ತಮ ನಿರ್ಧಾರ ತೆಗೆದುಕೊಂಡಿದ್ದೀರಿ. ಅಗ್ರಸ್ಥಾನದಲ್ಲಿರುವವರು ಅಥವಾ ಪ್ರಯತ್ನಗಳಲ್ಲಿ ತೊಡಗಿರುವವರು, ಅವರ ಪ್ರಯತ್ನಗಳು ಎಂದಿಗೂ ವ್ಯರ್ಥವಾಗುವುದಿಲ್ಲ ಮತ್ತು ಜ್ಞಾನವು ಯಾವಾಗಲೂ ನಮ್ಮೊಂದಿಗೆ ಇರುತ್ತದೆ ಎಂದು ನಾನು ನಂಬುತ್ತೇನೆ. ಸತತವಾಗಿ ತಯಾರಿ ನಡೆಸುತ್ತಿರುವವರು ಯಾವ ಮಾನದಂಡಗಳಿದ್ದರೂ ಅಗ್ರಸ್ಥಾನದಲ್ಲಿರುತ್ತಾರೆ.

**ಪ್ರಧಾನ ಮಂತ್ರಿ ಮೋದಿ:** ಸರಿ ಮಕ್ಕಳೇ, ಕೆಲವರು ತಮ್ಮನ್ನು ತಾವು ಧೈರ್ಯಶಾಲಿಗಳು ಎಂದು ಪರಿಗಣಿಸಿ ಮುಖಗವಸುಗಳನ್ನು ಧರಿಸುವುದಿಲ್ಲ ಅಥವಾ ನಿಯಮಗಳನ್ನು ಪಾಲಿಸದಿರುವ ಬಗ್ಗೆ ನಿಮಗೆ ಏನನಿಸುತ್ತದೆ?

**ವಿದ್ಯಾರ್ಥಿ:** ಸರ್, ನಾವು ನಿಯಮಗಳನ್ನು ಪಾಲಿಸಲೇಬೇಕು. ನೀವು ಹೇಳಿದಂತೆ ಮುಖಗವಸುಗಳನ್ನು ಧರಿಸದ ಮತ್ತು ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸದ ಕೆಲವು ಜನರಿದ್ದಾರೆ. ಇದು ನಿಜವಾಗಿಯೂ ನಿರಾಶಾದಾಯಕ ಸಂಗತಿ. ಏಕೆಂದರೆ ನಮ್ಮ ಸರ್ಕಾರ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಈ ಸಾಂಕ್ರಾಮಿಕ ರೋಗದ ಬಗ್ಗೆ ತುಂಬಾ ಜಾಗೃತಿ ಮೂಡಿಸುತ್ತಿವೆ. ಜನರು ಅದನ್ನು ಅರ್ಥಮಾಡಿಕೊಳ್ಳದಿರುವುದು ನಿಜವಾಗಿಯೂ ತಪ್ಪು. ನಾನು ನಿಮ್ಮೊಂದಿಗೆ ಒಂದು ವಿಷಯ ಹಂಚಿಕೊಳ್ಳಲು ಬಯಸುತ್ತೇನೆ. ಲಾಕ್‌ಡೌನ್ ಅನ್ನು ತೆಗೆದುಹಾಕಿದಾಗ ನಾವು ನಮ್ಮ ಪ್ರದೇಶದಲ್ಲಿ ಜಾಗೃತಿ ಅಭಿಯಾನ ಮಾಡಿದ್ದೇವೆ. ಸೂಕ್ತ ಕೋವಿಡ್ ಮಾರ್ಗಸೂಚಿಗಳಿಗೆ ಸಂಬಂಧಿಸಿದಂತೆ ಬೀದಿ ನಾಟಕಗಳನ್ನು ಮಾಡಿದ್ದೇವೆ. ಅವುಗಳನ್ನು ಅನುಸರಿಸುವಂತೆ, ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ, ಮುಖಗವಸುಗಳನ್ನು ಧರಿಸುವಂತೆ ಮತ್ತು ನಿಯಮಿತವಾಗಿ ಕೈ ತೊಳೆಯುವಂತೆ ಜನರಿಗೆ ತಿಳಿಸಿದ್ದೇವೆ.

**ಪ್ರಧಾನ ಮಂತ್ರಿ ಮೋದಿ:** ಒಂದು ದಿನದ ಮೊದಲು, ಅಂದರೆ, ಜೂನ್ 1 ರವರೆಗೆ, ನೀವೆಲ್ಲರೂ ಪರೀಕ್ಷೆಗೆ ಕುಳಿತುಕೊಳ್ಳುವ ಮನಸ್ಥಿತಿಯಲ್ಲಿದ್ದಿರಿ ಮತ್ತು ಸರಿಯಾದ ವೇಳಾಪಟ್ಟಿಯನ್ನು ತಯಾರಿಸಿ ಅದಕ್ಕೆ ತಕ್ಕಂತೆ ಯೋಜಿಸಿದ್ದಿರಿ. ಈಗ ಯಾವುದೇ ಪರೀಕ್ಷೆ ಇರುವುದಿಲ್ಲ, ಒಂದು ನಿರ್ವಾತ ಸೃಷ್ಟಿಯಾಗಿದೆ. ಅದನ್ನು ನೀವು ಹೇಗೆ ತುಂಬುತ್ತೀರಿ?

**ವಿದ್ಯಾರ್ಥಿ:** ಸರ್, ನೀವು ಹೇಳಿದಂತೆ ಈ ನಿರ್ಧಾರಕ್ಕೂ ಮೊದಲು ಎಲ್ಲರ ಮನಸ್ಸಿನಲ್ಲಿ ಹಲವು ವಿಷಯಗಳಿದ್ದವು ಎಂದು ಹೇಳಲು ಬಯಸುತ್ತೇನೆ. ಪರೀಕ್ಷಾ ವಾರಿಯರ್ಸ್ ಬಗ್ಗೆ ನಾನು ನಿಮಗೆ ಹೇಳಲು ಬಯಸುತ್ತೇನೆ. ನಾನು ಹತ್ತನೇ ತರಗತಿಯಲ್ಲಿದ್ದಾಗ, ನಾನು ಕೋಲ್ಕತ್ತಾದಿಂದ ಗುವಾಹಟಿಗೆ ಪ್ರಯಾಣಿಸುತ್ತಿದ್ದಾಗ ವಿಮಾನ ನಿಲ್ದಾಣದಲ್ಲಿ ನಿಮ್ಮ ಪುಸ್ತಕವನ್ನು ನೋಡಿದೆ. ನನ್ನ 10 ನೇ ತರಗತಿ ಪರೀಕ್ಷೆಗಳು ಪ್ರಾರಂಭವಾಗುತ್ತಿದ್ದವು, ಹಾಗಾಗಿ ನಾನು ತಕ್ಷಣ ಪುಸ್ತಕವನ್ನು ಖರೀದಿಸಿದೆ. ನಾನು ಸುಮಾರು ಒಂದು ತಿಂಗಳ ಕಾಲ ಪ್ರತಿದಿನ ಆ ಪುಸ್ತಕವನ್ನು ಓದಿದೆ. ಸರ್, ಪರೀಕ್ಷೆಗಳನ್ನು ಹಬ್ಬವಾಗಿ ಆಚರಿಸಬೇಕು ಎಂಬ ಸಲಹೆಯೊಂದಿಗೆ ನೀವು ಪುಸ್ತಕವನ್ನು ಪ್ರಾರಂಭಿಸಿದ್ದೀರಿ. ಹಾಗಾದರೆ ಸರ್, ಹಬ್ಬದಲ್ಲಿ ಭಯದ ಪ್ರಶ್ನೆ ಎಲ್ಲಿದೆ? ನಾವು ಹಬ್ಬಕ್ಕೆ ತಯಾರಿ ನಡೆಸಿದಾಗ, ಅದು ಯಶಸ್ವಿಯಾಗಬೇಕೆಂದು ನಾವು ಬಯಸುತ್ತೇವೆ. ನೀವು ಯೋಗದ ಮಂತ್ರದೊಂದಿಗೆ ಪುಸ್ತಕವನ್ನು ಕೊನೆಗೊಳಿಸಿದ್ದೀರಿ. ಈ ಎರಡು ವಿಷಯಗಳು ನನ್ನಲ್ಲಿ ಉಳಿದುಕೊಂಡಿವೆ.

ಈ ವರ್ಷ ನಮ್ಮ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಿಮ್ಮ ಜಿಲ್ಲೆಯಲ್ಲಿ ಏನಾಯಿತು ಎಂಬುದರ ಕುರಿತು ನೀವು ಪ್ರಬಂಧ ಬರೆಯಬಹುದೇ? ಪರಿಸರಕ್ಕಾಗಿ ಏನಾದರೂ ಮಾಡಿ. ಏಕೆಂದರೆ ಭೂಮಿ ಮತ್ತು ಪ್ರಕೃತಿಯನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅಂತೆಯೇ, ಅಂತರರಾಷ್ಟ್ರೀಯ ಯೋಗ ದಿನವೂ ಬರಲಿದೆ. ಈ ಸಂದರ್ಭದಲ್ಲಿ ಯೋಗವನ್ನು ಅಳವಡಿಸಿಕೊಳ್ಳಿ ಮತ್ತು ಅದನ್ನು ನಿಮ್ಮ ಕುಟುಂಬದೊಂದಿಗೆ ಅಭ್ಯಾಸ ಮಾಡಿ. ಹಲವು ಕ್ರೀಡಾಕೂಟಗಳು ಬರಲಿವೆ, ಒಲಿಂಪಿಕ್ಸ್ ಇದೆ, ನಮ್ಮ ದೇಶದ ಯಾರ್ಯಾರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿದ್ದಾರೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

Q&A

**ಪ್ರಧಾನ ಮಂತ್ರಿ ಮೋದಿ:** ಆರೋಗ್ಯವೇ ಭಾಗ್ಯ ಎಂದು ನಮ್ಮ ದೇಶದಲ್ಲಿ ಹೇಳಲಾಗಿದೆ. ದೈಹಿಕ ಸದೃಢತೆಗಾಗಿ ನೀವು ಏನು ಮಾಡುತ್ತೀರಿ? ನೀವು ಎಷ್ಟು ಸಮಯ ಏನನ್ನು ಮಾಡುತ್ತೀರಿ?

**ವಿದ್ಯಾರ್ಥಿ:** ಸರ್, ನಾನು ನನ್ನ ತಮ್ಮನೊಂದಿಗೆ ಪ್ರತಿದಿನ ಬೆಳಿಗ್ಗೆ 30 ನಿಮಿಷಗಳ ಕಾಲ ಯೋಗ ಮತ್ತು ಇತರ ವ್ಯಾಯಾಮಗಳನ್ನು ಮಾಡುತ್ತೇನೆ.

**ಪ್ರಧಾನ ಮಂತ್ರಿ ಮೋದಿ:** ಆದರೆ ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಮಾತನಾಡಲು ಅವಕಾಶ ಸಿಗದ ಕಾರಣಕ್ಕೆ ಕೈ ಎತ್ತಿರುವ ಯುವಕನಿದ್ದಾನೆ ಅಲ್ಲಿ. ನಿಮ್ಮ ಹೆಸರೇನು?

**ವಿದ್ಯಾರ್ಥಿ:** ಸರ್, ನನ್ನ ಹೆಸರು ಚಂದನ್ ಹೆಗ್ಡೆ. ಇದು ನನ್ನ ಜೀವನದ ಕೊನೆಯ ಪರೀಕ್ಷೆ ಅಲ್ಲ ಎಂದು ನಾನು ಭಾವಿಸುತ್ತೇನೆ. ಭವಿಷ್ಯದಲ್ಲಿ ಹಲವು ಪರೀಕ್ಷೆಗಳು ಬರಲಿವೆ. ಮುಂಬರುವ ಪರೀಕ್ಷೆಗಳಿಗೆ ನಾವು ಸಿದ್ಧರಾಗಲು ನಾವು ಆರೋಗ್ಯವಾಗಿರಬೇಕು.

**ಪ್ರಧಾನ ಮಂತ್ರಿ ಮೋದಿ:** ಸರಿ. ಈಗ ನೀವು ಪರೀಕ್ಷೆಗಳಿಂದ ಮುಕ್ತರಾಗಿದ್ದೀರಿ, ನಿಮ್ಮ ಸಮಯವನ್ನು ಎಲ್ಲಿ ಕಳೆಯುತ್ತೀರಿ? ಐಪಿಎಲ್ ಅಥವಾ ಚಾಂಪಿಯನ್ಸ್ ಲೀಗ್ ಫೈನಲ್ಸ್ ಅಥವಾ ಫ್ರೆಂಚ್ ಓಪನ್ ಅಥವಾ ಜುಲೈನಿಂದ ಪ್ರಾರಂಭವಾಗುವ ಒಲಿಂಪಿಕ್ಸ್ ವೀಕ್ಷಿಸುತ್ತೀರಾ? ಭಾರತದಿಂದ ಯಾರು ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲಿದ್ದಾರೆ, ಅವರ ಹಿನ್ನೆಲೆ ಏನು? ಅಥವಾ ಜೂನ್ 21 ರಂದು ನಡೆಯುವ ಯೋಗ ದಿನದ ಬಗ್ಗೆ ನೀವು ಯೋಚಿಸುವಿರಾ?

**ವಿದ್ಯಾರ್ಥಿ:** ಎಲ್ಲವೂ ಸರ್

**ಪ್ರಧಾನ ಮಂತ್ರಿ ಮೋದಿ:** ಬಹಳ ಹೊತ್ತಿನಿಂದ ಮಾತನಾಡಲು ಅವಕಾಶಕ್ಕಾಗಿ ಕಾಯುತ್ತಿರುವ ಕನ್ನಡಕ ಹಾಕಿರುವ ಆ ಹೆಣ್ಣು ಮಗಳು ಏನನ್ನೋ ಹೇಳಲು ಬಯಸುತ್ತಿದ್ದಾಳೆ.

**ವಿದ್ಯಾರ್ಥಿ:** ನೀವು ನಮ್ಮ ಪರೀಕ್ಷೆಗಳನ್ನು ರದ್ದುಗೊಳಿಸಿದ್ದೀರಿ ಎಂದು ನನಗೆ ತಿಳಿದ ಕ್ಷಣ, ನನಗೆ ತುಂಬಾ ಸಂತೋಷವಾಯಿತು. ಅದು ಒತ್ತಡವನ್ನು ಕಡಿಮೆ ಮಾಡಿತು. ಆದರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಾವು ಅಧ್ಯಯನ ಮಾಡಬೇಕಾಗಿದೆ ಎಂದು ಈಗ ನಮಗೆ ತಿಳಿದಿದೆ. ಈ ಮೊದಲು ನಾವು ಬೋರ್ಡ್ ಪರೀಕ್ಷೆಗಳಿಗೆ ಮತ್ತು ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೆವು. ಈಗ ನಾವು ತುಂಬಾ ಸಮಯವನ್ನು ಹೊಂದಿದ್ದೇವೆ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಾವು ಉತ್ತಮ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಬಹುದು.

**ಪ್ರಧಾನ ಮಂತ್ರಿ ಮೋದಿ:** ನಿಮ್ಮ ಕುಟುಂಬ ಸದಸ್ಯರು ನೀವು ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದಾರೆ. ನಾನು ಅವರನ್ನು ಈ ಬಗ್ಗೆ ಕೇಳಿದರೆ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ.

**ವಿದ್ಯಾರ್ಥಿ:** ಇಲ್ಲ ಸರ್, ನಾನು ಮತ್ತು ನನ್ನ ಸಹೋದರ ಪ್ರತಿದಿನ 30 ನಿಮಿಷಗಳ ಕಾಲ ಯೋಗ ಮಾಡುತ್ತೇವೆ. ನನ್ನ ಮನಸ್ಸನ್ನು ತಾಜಾವಾಗಿಡಲು ನಾನು ತಬಲಾ ನುಡಿಸುತ್ತೇನೆ. ನಾನು ಸುಮಾರು ಒಂದು ವರ್ಷದಿಂದ ಅದರ ತರಬೇತಿ ಪಡೆಯುತ್ತಿದ್ದೇನೆ.

**ಪ್ರಧಾನ ಮಂತ್ರಿ ಮೋದಿ:** ಅಲ್ಲಿ ಕೈ ಇತ್ತಿರುವ ಹುಡುಗಿ. ಹೇಳಮ್ಮಾ..

**ವಿದ್ಯಾರ್ಥಿ:** ನಾನು ರಾಜಸ್ಥಾನದ ಜೈಪುರದ ದೆಹಲಿ ಪಬ್ಲಿಕ್ ಶಾಲೆಯ ಹನ್ನೆರಡನೇ ತರಗತಿಯ ವಿದ್ಯಾರ್ಥಿ. ನನ್ನ ಹೆಸರು ಜನ್ನತ್ ಸಾಕ್ಷಿ. ಮಂಡಳಿಯ ಪರೀಕ್ಷೆ ಕುರಿತ ನಿಮ್ಮ ನಿರ್ಧಾರವನ್ನು ನಾನು ಸ್ವಾಗತಿಸುತ್ತೇನೆ. ಪ್ರಸ್ತುತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಈ ನಿರ್ಧಾರವು ತುಂಬಾ ಸರಿಯಾಗಿದೆ, ಏಕೆಂದರೆ ಮಕ್ಕಳ ಸುರಕ್ಷತೆ ಮತ್ತು ಯೋಗಕ್ಷೇಮವು ಮುಖ್ಯವಾಗಿದೆ. ಸಿಬಿಎಸ್‌ಇಯ ಮೌಲ್ಯಮಾಪನ ವಿಧಾನಗಳು ನಮ್ಮ ಹಿತಾಸಕ್ತಿಗೆ ಅನುಗುಣವಾಗಿರುತ್ತವೆ ಎಂದು ನಮಗೆ ಸಂಪೂರ್ಣ ನಂಬಿಕೆ ಇದೆ.

**ಪ್ರಧಾನ ಮಂತ್ರಿ ಮೋದಿ:** ಎಲ್ಲಾ ಪೋಷಕರು ಪರದೆಯ ಮೇಲೆ ಬರಬೇಕು. ನೀವು ಸತ್ಯವನ್ನು ಹೇಳುತ್ತಿದ್ದೀರಿ ಎಂದು ನನಗೆ ತಿಳಿಯುತ್ತದೆ. ನನ್ನ ಮುಂದೆ ಬಿಳಿ ಅಂಗಿ ಧರಿಸಿದ ಒಬ್ಬ ಯುವಕ ಮಾತನಾಡುತ್ತಿದ್ದಾರೆ.

**ವಿದ್ಯಾರ್ಥಿ:** ಸರ್, ನನ್ನ ತಾಯಿ ಇಲ್ಲಿಲ್ಲ. ನಾವು ಒಟ್ಟಿಗೆ ಇದ್ದಾಗ, ಪರೀಕ್ಷೆಯ ಸಮಸ್ಯೆಯ ಬಗ್ಗೆ ನೋಡಿಕೊಳ್ಳುವ ಮೋದಿಜಿ ಇರುವುದರಿಂದ ಚಿಂತಿಸಬೇಡ ಎಂದು ಅವರು ನನಗೆ ಹೇಳುತ್ತಾರೆ.

**ಪ್ರಧಾನ ಮಂತ್ರಿ ಮೋದಿ:** ಇದೀಗ ತಾನೇ, ಈ ಪರೀಕ್ಷೆಯ ವಿಷಯದಿಂದ ಹೊರಬರುವಂತೆ ಪ್ರತಿಯೊಬ್ಬರಿಗೂ ಹೇಳಿದ್ದೇನೆ. ನಾವು ಬೇರೆ ವಿಷಯದ ಬಗ್ಗೆ ಮಾತನಾಡಬಹುದೇ?

**ಪೋಷಕರು:** ಖಂಡಿತ, ಸರ್. ಹೇಳಲೇಬೇಕು, ನಿಮ್ಮನ್ನು ಭೇಟಿಯಾಗಿದ್ದರಿಂದ ಶಾರುಖ್ ಖಾನ್ ಅವರನ್ನು ಭೇಟಿಯಾಗುವುದಕ್ಕಿಂತ ಹೆಚ್ಚು ಖುಷಿಯಾಗಿದೆ ಸರ್. ಕನಸು ನನಸಾಗಿದೆ. ನೀವೊಬ್ಬ ಉತ್ತಮ ವ್ಯಕ್ತಿ.

**ಪ್ರಧಾನ ಮಂತ್ರಿ ಮೋದಿ:** ಈ ವರ್ಷ ನಮ್ಮ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಿಮ್ಮ ಜಿಲ್ಲೆಯಲ್ಲಿ ಏನಾಯಿತು ಎಂಬುದರ ಕುರಿತು ನೀವು ಪ್ರಬಂಧ ಬರೆಯಬಹುದೇ?

**ವಿದ್ಯಾರ್ಥಿ:** ಹೌದು ಸರ್. ಖಂಡಿತವಾಗಿ ನಾವು ಬರೆಯಬಹುದು.

ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ಪ್ರಧಾನಿ: ನಿಮ್ಮ ಅನುಭವಗಳು ನಿಮ್ಮ ಭವಿಷ್ಯವನ್ನು ಉತ್ಕೃಷ್ಟಗೊಳಿಸುತ್ತವೆ. ಕೊರೊನಾ ಲಸಿಕೆಗಳು ಲಭ್ಯವಿರುವುದರಿಂದ ನಿಮ್ಮ ಪ್ರದೇಶಗಳ ಜನರನ್ನು ನೋಂದಾಯಿಸಿ. ಅವರಿಗೆ ಲಸಿಕೆ ನೀಡಲಾಗುತ್ತದೆ. ನಿಮ್ಮ ಕೆಲಸದಲ್ಲಿ ಸೇವೆಯು ಒಂದು ಭಾಗವಾಗಿರಲಿ. ■

ಪ್ರಧಾನ ಮಂತ್ರಿಯವರ ಪೂರ್ಣ ಭಾಷಣವನ್ನು ಕೇಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

# ಮುಖ್ಯಮಂತ್ರಿಗಿಂತ ಹೆಚ್ಚಾಗಿ ವೈದ್ಯರೆಂದು ಕರೆಸಿಕೊಳ್ಳುವುದನ್ನು ಇಷ್ಟಪಟ್ಟ ಜನ ನಾಯಕ

"ವೈದ್ಯಕೀಯ ಕಲೆ ಎಲ್ಲೆಲ್ಲಿ ಇಷ್ಟವಾಗುತ್ತದೆಯೋ ಅಲ್ಲಿ ಮಾನವೀಯತೆಯ ಮಮತೆಯೂ ಇರುತ್ತದೆ." ವೈದ್ಯಶಾಸ್ತ್ರ ಪಿತಾಮಹ ಎಂದೂ ಪರಿಗಣಿಸಲ್ಪಟ್ಟಿರುವ ಹಿಪ್ಪೊಕ್ರೇಟಸ್ ಅವರ ಈ ಮಾತು ಬಿಧಾನ್ ಚಂದ್ರ ರಾಯ್ ಅವರ ಉದಾರ ವ್ಯಕ್ತಿತ್ವವನ್ನು ಸೂಕ್ತವಾಗಿ ವಿವರಿಸುತ್ತದೆ. ಮುಖ್ಯಮಂತ್ರಿಯಂತಹ ಅತ್ಯಂತ ಶಕ್ತಿಯುತವಾದ ಸಾಂವಿಧಾನಿಕ ಹುದ್ದೆಯಲ್ಲಿದ್ದರೂ ಅವರು ವೈದ್ಯರಾಗಿಯೇ ಪ್ರಸಿದ್ಧರಾಗಬೇಕೆಂದು ಬಯಸಿದ್ದರು. ಅವರು ಭಾರತೀಯ ವೈದ್ಯಕೀಯ ಸಂಘದ ಸ್ಥಾಪಕರು ಮತ್ತು ನಂತರ ಅದರ ಅಧ್ಯಕ್ಷರಾದರು. "ನಾಗರಿಕರು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿದ್ದಾಗ ಮಾತ್ರ ದೇಶವು ನಿಜವಾದ ಸ್ವರಾಜ್ಯವನ್ನು ಪಡೆಯುತ್ತದೆ." ಎಂದು ರಾಯ್ ಹೇಳುತ್ತಿದ್ದರು. ವೈದ್ಯಕೀಯ ಕ್ಷೇತ್ರಕ್ಕೆ ಅವರು ನೀಡಿದ ಅಪಾರ ಕೊಡುಗೆಯಿಂದಾಗಿ, ಜುಲೈ 1 ರಂದು ಅವರ ಜನ್ಮದಿನವನ್ನು ರಾಷ್ಟ್ರೀಯ ವೈದ್ಯರ ದಿನವೆಂದು ಆಚರಿಸಲಾಗುತ್ತದೆ.



ರಾಯ್ ಜನಿಸಿದ್ದು ಜುಲೈ 1, 1882 ರಂದು ಪಾಟ್ನಾ ಹತ್ತಿರದ ಬಂಕೀಪುರದಲ್ಲಿ. ಅವರು ತಮ್ಮ ಮೆಟ್ರಿಕ್ಯುಲೇಷನ್ ಅನ್ನು 1897 ರಲ್ಲಿ ಪಾಟ್ನಾದ ಕೊಲಿಲೇಜಿಯೇಟ್ ಶಾಲೆಯಿಂದ ಮತ್ತು ಕೋಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಿಂದ ಇಂಟರ್ ಮೀಡಿಯೇಟ್ ಪಾಸು ಮಾಡಿದರು. ಅವರು ಪಾಟ್ನಾ ಕಾಲೇಜಿನಿಂದ ಗಣಿತಶಾಸ್ತ್ರದಲ್ಲಿ ಬಿ.ಎ. ಪಡೆದರು. ಕಾಲೇಜು ಶಿಕ್ಷಣ ಮುಗಿಸಿದ ನಂತರ ಬಂಗಾಳ ಎಂಜಿನಿಯರಿಂಗ್ ಕಾಲೇಜು ಮತ್ತು ಕಲ್ಕತ್ತಾ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಿದರು. ಅವರು ಎರಡೂ ಸಂಸ್ಥೆಗಳಲ್ಲಿ ಆಯ್ಕೆಯಾದರು. ಆದರೆ ಅವರು ವೈದ್ಯಕೀಯ ಕ್ಷೇತ್ರವನ್ನು ಆರಿಸಿಕೊಂಡರು ಮತ್ತು 1901 ರಲ್ಲಿ ಕೋಲ್ಕತ್ತಾಗೆ ತೆರಳಿದರು. ಅದೇ ಅವಧಿಯಲ್ಲಿ ತಮ್ಮ ತಂದೆಯ ನಿವೃತ್ತಿಯ ನಂತರ, ಅವರು ಸಾಕಷ್ಟು ಆರ್ಥಿಕ ತೊಂದರೆಗಳನ್ನು ಎದುರಿಸಿದರು. ಪುಸ್ತಕಗಳನ್ನು ಖರೀದಿಸಲು ಸಹ ಅವರ ಬಳಿ ಸಾಕಷ್ಟು ಹಣವಿರಲಿಲ್ಲ. ಅವರು ತಮ್ಮ ವೈದ್ಯಕೀಯವನ್ನು ಕಲಿಯುತ್ತಿರುವಾಗ ಬ್ರಿಟಿಷರು ಬಂಗಾಳವನ್ನು ವಿಭಜಿಸಿದರು. ಇದರಿಂದ ಬೇಸರಗೊಂಡ ಯುವಕ ರಾಯ್ ಬಂಗಾಳದ ವಿಭಜನೆಯನ್ನು ವಿರೋಧಿಸುವ ಆಂದೋಲನದಲ್ಲಿ ಭಾಗವಹಿಸಲು ಬಯಸಿದ್ದರು. ಆದರೆ ಅವರು ಪ್ರಜ್ಞಾಪೂರ್ವಕವಾಗಿ ರಾಷ್ಟ್ರಕ್ಕೆ ಉತ್ತಮ ಸೇವೆ ಸಲ್ಲಿಸಬಹುದಾದ ವೈದ್ಯಕೀಯ ಅಧ್ಯಯನಗಳಿಗೆ ಗಮನ ಕೊಡುವ ನಿರ್ಧಾರವನ್ನು ತೆಗೆದುಕೊಂಡರು. 1909 ರಲ್ಲಿ ರಾಯ್ ಸೇಂಟ್ ಬಾರ್ತಲೋಮೆವ್ಸ್ ಆಸ್ಪತ್ರೆಯಿಂದ ಮೆಡಿಸಿನ್ ನಲ್ಲಿ ಸ್ನಾತಕೋತ್ತರ ಅಧ್ಯಯನ ಕೈಗೊಳ್ಳುವ ಮಹತ್ವಾಕಾಂಕ್ಷೆಯೊಂದಿಗೆ ಕೇವಲ 1200 ರೂ.ಗಳೊಂದಿಗೆ ಬ್ರಿಟನ್‌ಗೆ ಪ್ರಯಾಣ ಬೆಳೆಸಿದರು.

**ರಾಯ್ ಅವರು ರಾಜ್ಯದಲ್ಲಿ ಮಾಡಿದ ಸಾಮೂಹಿಕ ಅಭಿವೃದ್ಧಿ ಕಾರ್ಯಗಳಿಂದಾಗಿ ಅವರನ್ನು ಪಶ್ಚಿಮ ಬಂಗಾಳದ ಶಿಲ್ಪಿ ಎಂದು ಕರೆಯಲಾಗುತ್ತದೆ**

ಏಷ್ಯಾದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಕಾಲೇಜಿನ ಡೀನ್ ಹಿಂಜರಿಯುತ್ತಿದ್ದ ಕಾರಣ ಅವರ ಅರ್ಜಿಯನ್ನು ಪದೇ ಪದೇ ತಿರಸ್ಕರಿಸಲಾಯಿತು. ಛಲ ಬಿಡದೇ ರಾಯ್ ಅರ್ಜಿ ಸಲ್ಲಿಸುತ್ತಲೇ ಇದ್ದರು ಮತ್ತು ಅಂತಿಮವಾಗಿ ಅವರಿಗೆ 30 ಅರ್ಜಿಗಳ ನಂತರ ಪ್ರವೇಶ ನೀಡಲಾಯಿತು. ಅವರು ತಮ್ಮ ಎಂ.ಆರ್.ಸಿ.ಪಿ. ಮತ್ತು ಎಫ್.ಆರ್.ಸಿ.ಎಸ್. ಗಳನ್ನು ಎರಡೂವರೆ ವರ್ಷಗಳಿಗಿಂತ ಕಡಿಮೆ ಅವಧಿಯಲ್ಲಿ ಮುಗಿಸಿದರು. ಅದು ಆ ಸಮಯದಲ್ಲಿ ದಾಖಲೆಯಾಗಿತ್ತು. ಅವರು ಜಾದವಪುರ ಕ್ಷಯರೋಗ ಆಸ್ಪತ್ರೆ, ಚಿತ್ತರಂಜನ್ ಸೇವಾ ಸದನ, ಕಮಲಾ ನೆಹರು ಆಸ್ಪತ್ರೆ, ವಿಕ್ಟೋರಿಯಾ ಸಂಸ್ಥೆ, ಮತ್ತು ಚಿತ್ತರಂಜನ್ ಕ್ಯಾನ್ಸರ್ ಆಸ್ಪತ್ರೆಗಳನ್ನು ಸ್ಥಾಪಿಸಿದರು. ಅವರು 1923 ರಲ್ಲಿ ರಾಷ್ಟ್ರ ರಾಜಕಾರಣಕ್ಕೆ ಧುಮುಕಿದರು ಮತ್ತು ಬ್ಯರಕ್‌ಪುರ್‌ದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಹಿರಿಯ ರಾಜಕಾರಣಿ ಸುರೇಂದ್ರ ನಾಥ್ ಬ್ಯಾನರ್ಜಿಯನ್ನು ಸೋಲಿಸಿದರು. 1928 ರಲ್ಲಿ ಅವರನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರನ್ನಾಗಿ ಮಾಡಲಾಯಿತು. ಮಹಾತ್ಮ ಗಾಂಧಿಯವರು ಪ್ರಾರಂಭಿಸಿದ ನಾಗರಿಕ ಅಸಹಕಾರ ಚಳವಳಿಯನ್ನು ರಾಯ್ 1929 ರಲ್ಲಿ ಬಂಗಾಳದಲ್ಲಿ ಸಮರ್ಥವಾಗಿ ನಡೆಸಿದರು, 1933 ರಲ್ಲಿ ಅವರು ಪಶ್ಚಿಮ ಬಂಗಾಳದ ಮೇಯರ್ ಆಗಿ ಆಯ್ಕೆಯಾದರು.

ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಪಕ್ಷವು ರಾಯ್ ಅವರ ಹೆಸರನ್ನು ಬಂಗಾಳದ ಮುಖ್ಯಮಂತ್ರಿ ಹುದ್ದೆಗೆ ಪ್ರಸ್ತಾಪಿಸಿತು ಆದರೆ ಅವರು ವೈದ್ಯಕೀಯ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಬಯಸಿದ್ದರು. ಆದರೆ, ಮಹಾತ್ಮ ಗಾಂಧಿಯವರ ಸಲಹೆಯ ಮೇರೆಗೆ ಅವರು ಮುಖ್ಯಮಂತ್ರಿಯಾಗಲು ಒಪ್ಪಿದರು. ಅವರು 1948 ರಿಂದ 1962 ರವರೆಗೆ 14 ವರ್ಷಗಳ ಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದರು. ತಮ್ಮ ವೈದ್ಯಕೀಯ ವೃತ್ತಿಯ ಬಗ್ಗೆ ಅಪಾರ ಪ್ರೀತಿ ಇದ್ದ ಅವರು ರೋಗಿಗಳ ಉಪಚಾರವನ್ನು ನಿಲ್ಲಿಸಲಿಲ್ಲ. ಅವರು ಪಶ್ಚಿಮ ಬಂಗಾಳದಲ್ಲಿ ದುರ್ಗಾಪುರ, ಕಲ್ಯಾಣಿ, ಬಿಧಾನ್ ನಗರ್, ಅಶೋಕ್‌ನಗರ ಮತ್ತು ಹಾಬ್ರಾ ಎಂಬ ಐದು ಹೊಸ ನಗರಗಳನ್ನು ಸ್ಥಾಪಿಸಿದರು. ರಾಷ್ಟ್ರ ಮತ್ತು ಸಮಾಜಕ್ಕೆ ಅವರು ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ 1961 ರಲ್ಲಿ ಅವರಿಗೆ "ಭಾರತ ರತ್ನ" ನೀಡಲಾಯಿತು. ಅವರು ಜುಲೈ 1, 1962 ರಂದು ನಿಧನರಾದರು. ಅವರ ನಿಧನಕ್ಕೂ ಮೊದಲು, ತಮ್ಮ ತಾಯಿ ಅಘೋರ ಕಾಮಿನಿ ದೇವಿಯವರ ಹೆಸರಿನಲ್ಲಿ ನರ್ಸಿಂಗ್ ಹೋಂ ಆಗಿ ನಡೆಸಲು ತಮ್ಮ ಮನೆಯನ್ನು ದಾನವಾಗಿ ನೀಡಿದ್ದರು. ■



# ಭೂಮಿಯ ಮೇಲಿನ ದೇವತೆಗಳು

## न आत्मार्थम् न अपि कामार्थम् अतभूत दयां प्रति ।।
## वतर्ते यत् चिकित्सायां स सवर्म इति वर्तते ।।

"ಉತ್ತಮ ವೈದ್ಯರು ರೋಗಿಯ ಆರೈಕೆಗಾಗಿ ಸಹಾನುಭೂತಿಯಿಂದ ಕೆಲಸ ಮಾಡುತ್ತಾರೆ. ಹಣ ಅಥವಾ ಯಾವುದೇ ವಿಶೇಷ ಬಯಕೆಗಳಿಗಾಗಿ ಅಲ್ಲ." ಆಚಾರ್ಯ ಚರಕ ಅವರ ಶತಮಾನಗಳಷ್ಟು ಹಿಂದಿನ ಈ ನಾಣ್ನುಡಿ, ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ರೋಗಿಗಳನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟಿರುವ ವೈದ್ಯರು ಮತ್ತು ಕೊರೋನಾ ಯೋಧರಿಗೆ ಬಹಳ ಸ್ಪಷ್ಟವಾಗಿ ಹೊಂದುತ್ತದೆ.





**ದೇವರು ಮನುಷ್ಯನಿಗೆ ಜೀವವನ್ನು ಒಮ್ಮೆ ಮಾತ್ರ ಕೊಡುತ್ತಾನೆ, ಆದರೆ ಅವನ ಜೀವಕ್ಕೆ ಅಪಾಯ ಬಂದಾಗಲೆಲ್ಲಾ ಅವನಿಗೆ ಮತ್ತೆ ಮತ್ತೆ ಹೊಸ ಜೀವವನ್ನು ಕೊಡುವುದು ವೈದ್ಯರು. ಕೊರೋನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ನಾವು ದೈಹಿಕ ಅಂತರವನ್ನು ಕಾಪಾಡಿಕೊಳ್ಳುವ ಮೂಲಕ ನಮ್ಮನ್ನು ರಕ್ಷಿಸಿಕೊಳ್ಳುತ್ತಿರುವ ಸಮಯದಲ್ಲಿ, ವೈದ್ಯರು ತಮ್ಮ ಹತ್ತಿರದ ಮತ್ತು ಆತ್ಮೀಯರಿಂದ ದೂರವಿದ್ದು, ರೋಗಿಗಳ ಜೀವವನ್ನು ಉಳಿಸುವ ಮೂಲಕ ರಾಷ್ಟ್ರ ಸೇವೆಯಲ್ಲಿ ತೊಡಗಿದ್ದಾರೆ. ಈ ಕಠಿಣವಾದ ಯುದ್ಧವನ್ನು ಗೆಲ್ಲಲು ಬದ್ಧವಾಗಿರುವ ರಾಷ್ಟ್ರವು, ದೀರ್ಘಕಾಲದವರೆಗೆ ಪಿಪಿಇ ಕಿಟ್ ಧರಿಸಿ ಅದರ ಶಾಖ ಮತ್ತು ನಿರ್ಜಲೀಕರಣದ ಸಮಸ್ಯೆಗಳೊಂದಿಗೆ ಹೋರಾಡುತ್ತಿರುವ ವೈದ್ಯರು, ವಿಜ್ಞಾನಿಗಳು, ದಾದಿಯರು, ಆಂಬ್ಯುಲೆನ್ಸ್ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ ಮತ್ತು ಇತರ ಎಲ್ಲ ಕೊರೋನಾ ಯೋಧರಿಗೆ ಚಿರ ಋಣಿಯಾಗಿದೆ.**

ಸುಮಾರು ಒಂದೂವರೆ ವರ್ಷಗಳಿಂದ ಕೊರೋನಾ ರೋಗಿಗಳ ಆರೈಕೆಯಲ್ಲಿ ತೊಡಗಿಸಿಕೊಂಡಿರುವ ಲಕ್ನೋದ ಕಿಂಗ್ ಜಾರ್ಜ್ ವೈದ್ಯಕೀಯ ವಿಶ್ವವಿದ್ಯಾಲಯದ 41 ವರ್ಷದ ಯುವ ವೈದ್ಯ ಸುಮಿತ್ ರುಂಗ್ಟಾ, ಸಾಂಕ್ರಾಮಿಕದ ಎರಡನೇ ಅಲೆಯಲ್ಲಿ ಸೋಂಕಿಗೆ ಒಳಗಾದರು. ಆದರೆ ನೆಗೆಟಿವ್ ಪರೀಕ್ಷೆ ಬಂದ ಎರಡೇ ದಿನಗಳಲ್ಲಿ ಅವರು ಕೆಲಸಕ್ಕೆ ಮರಳಿದರು. ವೃತ್ತಿಯಲ್ಲಿ ವೈದ್ಯರೂ ಆಗಿರುವ ಅವರ ಪತ್ನಿಗೆ ಸೋಂಕಿನ ಪಾಸಿಟಿವ್ ವರದಿ ಬಂದಾಗ ದೊಡ್ಡ ಬಿಕ್ಕಟ್ಟು ಎದುರಾಯಿತು. ಸುಮಿತ್‌ಗೆ ಅಡುಗೆ ಮಾಡಲು ಸಾಧ್ಯವಾಗಲಿಲ್ಲ ಮತ್ತು ಮನೆಗೆ ಒಬ್ಬ ಸಹಾಯಕನನ್ನೂ ಕರೆಯಲು ಸಾಧ್ಯವಾಗಲಿಲ್ಲ. ತನ್ನ ವಯಸ್ಸಾದ ಹೆತ್ತವರನ್ನು ಹಳ್ಳಿಯಿಂದ ಕರೆತಂದರೆ ಅವರಿಗೂ ಅಪಾಯ ಇತ್ತು. “ಆ ಅವಧಿಯಲ್ಲಿ ಎದುರಿಸಿದ ಸಮಸ್ಯೆಗಳನ್ನು ನಾನು ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಕುಟುಂಬ ಸದಸ್ಯರು ಅಸಮಾಧಾನಗೊಂಡರು, ಆದರೆ ದೇಶದಲ್ಲಿಯೇ ಅಸಾಧಾರಣ ಬಿಕ್ಕಟ್ಟು ಉಂಟಾಗಿದೆ. ಹೇಗಾದರೂ, ದೇಶದ ಜನರಿಗೆ ಸಾಧ್ಯವಾದಷ್ಟು ಸಹಾಯ ಮಾಡಲು ನಾನು ನಿರ್ಧರಿಸಿದೆ” ಎಂದು ಸುಮಿತ್ ಹೇಳುತ್ತಾರೆ. ಗ್ಯಾಸ್ಟ್ರೋಎಂಟರಾಲಜಿ ತಜ್ಞರಾದ ಸುಮಿತ್, ಪಿಪಿಇ ಕಿಟ್ ಧರಿಸಿ ಎಂಡೋಸ್ಕೋಪಿ ಅಥವಾ ಯಾವುದೇ ರೀತಿಯ ಚಿಕಿತ್ಸೆಯನ್ನು ಮಾಡುವುದು ತುಂಬಾ ಕಷ್ಟ ಎಂದು ಹೇಳುತ್ತಾರೆ.

ಹಲವಾರು ಗಂಟೆಗಳ ಕಾಲ ಪಿಪಿಇ ಕಿಟ್ ಧರಿಸಿ ಕೋರೋನಾ ವಿರುದ್ಧದ ಯುದ್ಧದಲ್ಲಿ ತೊಡಗಿರುವ ವೈದ್ಯರ ಕಥೆ ಯಾವ ಯಾತನೆಗೂ ಕಡಿಮೆಯಿಲ್ಲ. ದೆಹಲಿ ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಾಂಕ್ರಾಮಿಕ ರೋಗಶಾಸ್ತ್ರಜ್ಞ 47 ವರ್ಷದ ಡಾ.ಅಜಯ್ ಕುಮಾರ್ ಅವರನ್ನು ಕೊರೋನಾದ ಮೊದಲ ಅಲೆಯ ಸಮಯದಲ್ಲಿ, ವಿದೇಶದಿಂದ ಹಿಂದಿರುಗಿದ ಪ್ರಯಾಣಿಕರನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪರೀಕ್ಷಿಸಲು ನಿಯೋಜಿಸಲಾಯಿತು. “ಪಿಪಿಇ ಕಿಟ್ ಧರಿಸುವುದು ಆ ಸಮಯದಲ್ಲಿ ಹೊಸ ವಿಷಯವಾಗಿತ್ತು. ಉಸಿರುಗಟ್ಟಿಸುವ ವಿಚಿತ್ರ ಭಾವನೆ ಇತ್ತು. ಪಿಪಿಇ ಕಿಟ್ ಧರಿಸಿ ಶೌಚಾಲಯಕ್ಕೆ ಹೋಗುವುದು ಕಷ್ಟಕರವಾಗಿತ್ತು, ಆದ್ದರಿಂದ ನಾವು ಅದಕ್ಕೆ ತಕ್ಕಂತೆ ನೀರನ್ನು ಸೇವಿಸುತ್ತಿದ್ದೆವು.” ಎಂದು ಅವರು ಹೇಳುತ್ತಾರೆ. ಇದಲ್ಲದೆ, ಅವರು ಮನೆಯಲ್ಲಿ ತಮಗಾಗಿ ಒಂದು ಪ್ರತ್ಯೇಕ ಸ್ನಾನಗೃಹವನ್ನು ನಿಗದಿಪಡಿಸಿದ್ದರು, ಅಲ್ಲಿ ಅವರ ಬಟ್ಟೆಗಳನ್ನು ಮೊದಲು ‘ಪೊಟ್ಯಾಸಿಯಮ್ ಪರ್ಮಾಂಗನೇಟ್’ ನಿಂದ ತೊಳೆದು ಪಕ್ಕಕ್ಕೆ ಇಡಲಾಗಿತ್ತು, ನಂತರ ಅದನ್ನು ಬಿಸಿನೀರು ಮತ್ತು ನಂಜುನಿರೋಧಕದಿಂದ ತೊಳೆಯಲಾಗುತ್ತಿತ್ತು. ಡಾ. ಕುಮಾರ್ ಅವರು ಈಗ ತಮ್ಮ ಎಂದಿನ ಕರ್ತವ್ಯಕ್ಕೆ ಮರಳಿದ್ದಾರೆ. ಕುಷ್ಠರೋಗ ಮತ್ತು ಚರ್ಮ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ.




## 24 ಗಂಟೆಗಳ ಕಾರ್ಯಾಚರಣೆಯಲ್ಲಿ ಗ್ರೂಪ್ ಕ್ಯಾಪ್ಟನ್ ಪಟ್ನಾಯಕ್

ಕೋವಿಡ್‌ನ ಎರಡನೇ ಅಲೆಯಲ್ಲೂ ಸಶಸ್ತ್ರ ಪಡೆಗಳು ಅಪಾರ ದಿಟ್ಟತನ ತೋರಿಸಿವೆ. ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಎ.ಕೆ. ಪಟ್ನಾಯಕ್ ಬಿಕ್ಕಟ್ಟಿನ ಸಮಯದಲ್ಲಿ ದೇಶಕ್ಕೆ ಸಹಾಯ ಮಾಡುವುದು ತನ್ನ ಅದೃಷ್ಟ ಮತ್ತು ಸಾಧನೆ ಎಂದು ಹೇಳುತ್ತಾರೆ. ಏಪ್ರಿಲ್ ತಿಂಗಳಲ್ಲಿ ಆಮ್ಲಜನಕದ ಸಾಗಣೆಯಲ್ಲಿ ನಿರತರಾಗಿದ್ದ ಕ್ಯಾಪ್ಟನ್ ಪಟ್ನಾಯಕ್ ಅವರು ನಿರಂತರವಾಗಿ ದೇಶೀಯ ಮತ್ತು ಅಂತರರಾಷ್ಟ್ರೀಯ ಕಾರ್ಯಾಚರಣೆಗಳನ್ನು ಮಾಡುತ್ತಿದ್ದರು. **3,000** ಗಂಟೆಗಳಿಗಿಂತ ಹೆಚ್ಚು ಹಾರಾಟ ಮಾಡುವ ಮೂಲಕ **160** ಅಂತರರಾಷ್ಟ್ರೀಯ ಕಾರ್ಯಾಚರಣೆಗಳನ್ನು ಪೂರ್ಣಗೊಳಿಸಿದರು. **2-3** ದಿನಗಳಿಗೆ ಬದಲು, **2-3** ಗಂಟೆಗಳಲ್ಲಿಯೇ ಆಮ್ಲಜನಕ ಟ್ಯಾಂಕರ್‌ಗಳನ್ನು ತಲುಪಿಸಲಾಯಿತು. ಸಾಂಕ್ರಾಮಿಕ ರೋಗದ ವಿರುದ್ಧ ದೇಶದ ಹೋರಾಟದಲ್ಲಿ ನೀಡಿದ ಕೊಡುಗೆಗಾಗಿ ಸಶಸ್ತ್ರ ಪಡೆಗಳ ಎಲ್ಲಾ ವಿಭಾಗಗಳ ಸಿಬ್ಬಂದಿಯ ಬಗ್ಗೆ ಪ್ರಧಾನ ಮಂತ್ರಿಯವರು ವಿಶೇಷವಾಗಿ ಪ್ರಸ್ತಾಪಿಸಿದರು.




ತಮ್ಮ ಭಯಾನಕ ಅನುಭವವನ್ನು ಡಾ. ಕುಮಾರ್ ವಿವರಿಸುತ್ತಾರೆ. ಸೋಂಕಿಗೆ ತುತ್ತಾದ ಕುಮಾರ್ ಅವರಿಗೆ ಏಪ್ರಿಲ್ 17 ರಂದು ಪಾಸಿಟಿವ್ ದೃಢಪಟ್ಟಿತು. ಅಂದು ಅವರ ಜನ್ಮದಿನ. ಈ ಸಂದರ್ಭಕ್ಕಾಗಿ ಅವರ ಮಕ್ಕಳು ಎಲ್ಲಾ ವ್ಯವಸ್ಥೆಗಳನ್ನು ಮಾಡಿದ್ದರು. ಡಾ. ಕುಮಾರ್ ಕೂಡ ಹೃದಯ ಕಾಯಿಲೆಯಿಂದ ಬಳಲುತ್ತಿದ್ದರಿಂದ ಕುಟುಂಬದಲ್ಲಿ ಭಯದ ವಾತಾವರಣ ನೆಲೆಸಿತು. ಆದರೆ ಅವರು ತಮ್ಮ ಸಕಾರಾತ್ಮಕ ಚಿಂತನೆ ಮತ್ತು ತಾಳ್ಮೆಯಿಂದ ಸಾಂಕ್ರಾಮಿಕ ರೋಗದಿಂದ ಮುಕ್ತರಾದರು.

ವೈದ್ಯರ ವೃತ್ತಿ ಸವಾಲುಗಳು ಗಡಿಯಲ್ಲಿ ಹೋರಾಡುವ ಸೈನಿಕರಿಗಿಂತ ಕಡಿಮೆಯಿಲ್ಲ. ಯುದ್ಧದ ಸಮಯದಲ್ಲಿ ದೇಶವನ್ನು ರಕ್ಷಿಸಲು ಶಸ್ತ್ರಾಸ್ತ್ರಗಳಿಂದ ಹೋರಾಡುವ ಸೈನಿಕನಂತೆ, ಪ್ರಸ್ತುತ ಬಿಕ್ಕಟ್ಟಿನ ಸಂದರ್ಭದಲ್ಲಿ ವೈದ್ಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಹಿಂದೆ ಬಿದ್ದಿಲ್ಲ. ಡಾ.ಪ್ರಶಾಂತ್ ಚೌಧರಿ ದೆಹಲಿಯ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನರಶಸ್ತ್ರಚಿಕಿತ್ಸಕ. ಸಾಂಕ್ರಾಮಿಕ ರೋಗದ ಎರಡನೇ ಅಲೆಯ ಸಮಯದಲ್ಲಿ, ಮನೆಯಲ್ಲಿ ಪ್ರತ್ಯೇಕವಾಗಿದ್ದ ಕೋವಿಡ್ ರೋಗಿಯೊಬ್ಬರು ಬೆಳಿಗ್ಗೆ ತಮ್ಮ ಮನೆಯ ಗಿಡಗಳಿಗೆ ನೀರುಣಿಸುತ್ತಿದ್ದಾಗ ಟೆರೇಸ್‌ನಿಂದ ಬಿದ್ದರು. ಅವರಿಗೆ ಶಸ್ತ್ರಚಿಕಿತ್ಸೆ ಮಾಡಬೇಕಾಗಿತ್ತು. ವೈದ್ಯರು ಮತ್ತು ಇಡೀ ತಂಡಕ್ಕೆ ಇದೊಂದು ಸವಾಲಾಯಿತು. ಏಕೆಂದರೆ ಅಂತಹ ಪರಿಸ್ಥಿತಿಯಲ್ಲಿ ವೈದ್ಯಕೀಯ ತಂಡವು ಕೊರೋನಾ ಸೋಂಕಿಗೆ ಒಳಲಾಗುವ ಸಾಧ್ಯತೆಗಳು ಹೆಚ್ಚು. ಆದರೆ ಡಾ.ಚೌಧರಿ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಿದರು. ಕಳೆದ ಎರಡು ತಿಂಗಳುಗಳಲ್ಲಿ, ಅವರು ಒಂದು ಡಜನ್ಗಿಂತ ಹೆಚ್ಚು ನರ-ಸಂಬಂಧಿತ ರೋಗಿಗಳಿಗೆ ಶಸ್ತ್ರಚಿಕಿತ್ಸೆ ಮಾಡಿದ್ದಾರೆ ಮತ್ತು ಕೋವಿಡ್ ರೋಗಿಗಳ ಆರೈಕೆಗೂ ಸಹ ಹಾಜರಾಗುತ್ತಿದ್ದಾರೆ. "ಈ ಅವಧಿಯಲ್ಲಿ ವೈದ್ಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಭಯಪಡಬಾರದು" ಎಂದು ಅವರು ಹೇಳುತ್ತಾರೆ.

ವೈದ್ಯರು, ದಾದಿಯರು ಮತ್ತು ಕೊರೋನಾ ಯೋಧರು ಹಗಲು-ರಾತ್ರಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಇತರರಿಗೆ ಸಹಾಯ ಮಾಡುವ ಬಗ್ಗೆ ಮಾಧ್ಯಮಗಳು ಪ್ರಮುಖವಾಗಿ ತೋರಿಸಿದ ಹಲವಾರು ಕಥೆಗಳಿವೆ.

**ಕರ್ತವ್ಯದಲ್ಲಿರುವಾಗ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರು 8-10 ಗಂಟೆಗಳ ಕಾಲ ಪಿಪಿಇ ಕಿಟ್ ಮತ್ತು ರಕ್ಷಣಾ ಸಾಧನಗಳನ್ನು ಧರಿಸಬೇಕಾಗುತ್ತದೆ, ಈ ಸಮಯದಲ್ಲಿ ಅವರು ನೀರನ್ನು ಸಹ ಕುಡಿಯಲಾಗುವುದಿಲ್ಲ**

## ತಮ್ಮ ಕುಟುಂಬದ ಮನವೊಲಿಸುವುದು ಶುಶ್ರೂಷಕಿ ಭಾವನಾಗೆ ಸುಲಭವಾಗಿರಲಿಲ್ಲ...

ಸಿಸ್ಟರ್ ಭಾವನಾ ಧ್ರುವ್, ರಾಯಪುರದ ಬಿ.ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಂಬಂಧಿತ ಕರ್ತವ್ಯದ 14 ದಿನಗಳ ನಂತರ ಅವರಿಗೆ 14 ದಿನಗಳ ಕಾಲ ವಿಶ್ರಾಂತಿ ನೀಡಲಾಗುತ್ತದೆ. ಎರಡು ತಿಂಗಳ ನಂತರ ಮತ್ತೆ ಅದೇ ಕರ್ತವ್ಯವನ್ನು ನಿಯೋಜಿಸಲಾಗುತ್ತದೆ ಎಂದು ಅವರು ಹೇಳುತ್ತಾರೆ. ಅವರು ತಮ್ಮ ಕರ್ತವ್ಯದ ಬಗ್ಗೆ ಮೊದಲ ಬಾರಿಗೆ ಕುಟುಂಬ ಸದಸ್ಯರೊಂದಿಗೆ ಮಾತನಾಡಿದಾಗ ಎಲ್ಲರೂ ಭಯಭೀತರಾದರು. “ನಾನು ಮೊದಲ ಬಾರಿಗೆ ಪಿಪಿಇ ಕಿಟ್ ಧರಿಸಿದಾಗ, ಅದು ತುಂಬಾ ಕಷ್ಟಕರವಾಗಿತ್ತು. ಆ ಎರಡು ತಿಂಗಳಲ್ಲಿ ನಾನು ಐಸಿಯುಗಳು, ವಾರ್ಡ್‌ಗಳು ಮತ್ತು ಐಸೋಲೇಷನ್ ಕೇಂದ್ರಗಳಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ.” ಎಂದು ಅವರು ಹೇಳುತ್ತಾರೆ. ಅವರು ಮೊದಲ ಬಾರಿಗೆ ಕೋವಿಡ್ ರೋಗಿಯ ಬಳಿಗೆ ಹೋದಾಗ, ಆತ ತುಂಬಾ ನರಳುತ್ತಿದ್ದರು ಮತ್ತು ಅವರನ್ನು ಶಾಂತಗೊಳಿಸಲು ಪ್ರಯತ್ನಿಸಿದರು. “ಭಯಪಡಬೇಡಿ, ಕೋವಿಡ್ ಶಿಷ್ಟಾಚಾರ ಪಾಲಿಸಿ, ಎಲ್ಲವೂ ಸರಿಯಾಗುತ್ತದೆ ಎಂದು ನಾನು ಅವರಿಗೆ ಸಂತೈಸಿದೆ” ಎಂದು ಅವರು ತಿಳಿಸುತ್ತಾರೆ.



**ಕೋವಿಡ್ ಸಾಂಕ್ರಾಮಿಕದ ಎರಡು ಅಲೆಗಳಲ್ಲಿ 1400 ಕ್ಕೂ ಹೆಚ್ಚು ವೈದ್ಯರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ**

ಇತ್ತೀಚೆಗೆ, ಏಪ್ರಿಲ್ 28 ರಂದು ಡಾ.ಸೋಹಿಲ್ ತಮ್ಮ ಎರಡು ಫೋಟೋಗಳನ್ನು ಸಾಮಾಜಿಕ ಮಾಧ್ಯಮ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಮೊದಲ ಫೋಟೋದಲ್ಲಿ, ಅವರು ಪಿಪಿಇ ಕಿಟ್‌ನಲ್ಲಿದ್ದರು ಮತ್ತು ಎರಡನೇ ಫೋಟೋ ಪಿಪಿಇ ಕಿಟ್ ತೆಗೆಯುತ್ತಿರುವುದು ಮತ್ತು ಅವರು ಬೆವರಿನಿಂದ ತೋಯ್ದಿರುವುದು. ಅಲ್ಲಿ ಅವರು ಬರೆಯುತ್ತಾರೆ. “ನಾನು ದೇಶದ ಸೇವೆಗಾಗಿ ಏನನ್ನಾದರೂ ಮಾಡುತ್ತಿದ್ದೇನೆ ಎಂಬ ಹೆಮ್ಮೆ ಇದೆ. ನಾವು ನಮ್ಮ ಕುಟುಂಬದಿಂದ ದೂರವಿದ್ದು ಶ್ರಮಿಸುತ್ತಿದ್ದೇವೆ ಎಂದು ಎಲ್ಲಾ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಪರವಾಗಿ ಹೇಳಲು ಬಯಸುತ್ತೇನೆ. ಕೆಲವೊಮ್ಮೆ, ನಾವು ಕೋವಿಡ್ ರೋಗಿಗಳಿಂದ ಕೆಲವೇ ಹೆಜ್ಜೆ ದೂರವಿರುತ್ತೇವೆ ಮತ್ತು ಕೆಲವೊಮ್ಮೆ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ವಯಸ್ಸಾದ ರೋಗಿಗಳಿಂದ ಒಂದು ಇಂಚಿನಷ್ಟು ಮಾತ್ರ ದೂರವಿರುತ್ತೇವೆ. ಲಸಿಕೆ ತೆಗೆದುಕೊಳ್ಳುವುದು ಎಲ್ಲರಿಗೂ ಖಂಡಿತ ಪರಿಹಾರವಾಗಿದೆ. ಏಕೆಂದರೆ ಇದು ಮಾತ್ರ ಪರಿಹಾರವಾಗಿದೆ. ಸುರಕ್ಷಿತವಾಗಿರಿ. ”

ಹಾಗೆಯೇ, ಇಂದೋರ್‌ನ ಶ್ರೀ ಅರಬಿಂದೋ ವೈದ್ಯಕೀಯ ಕಾಲೇಜಿನ ಡಾ.ರವಿ ದೋಸಿ ವೈದ್ಯರು ಮತ್ತು ಕೊರೋನಾ ಯೋಧರ ಕಥೆಯನ್ನು ಹೇಳುತ್ತಾರೆ. “ಸುಮಾರು 8-10 ಗಂಟೆಗಳ ಕಾಲ ಪಿಪಿಇ ಕಿಟ್‌ಗಳನ್ನು ಧರಿಸಲು ತಾಳ್ಮೆ ಮತ್ತು ತ್ರಾಣ ಬೇಕಾಗುತ್ತದೆ. ಪಿಪಿಇ ಕಿಟ್, ಹೆಡ್ ಗೇರ್, ಮುಖ ಕವಚ, ಕನ್ನಡಕ, ಎನ್ -95 ಮಾಸ್ಕ್, ಪ್ರತ್ಯೇಕ ಸರ್ಜಿಕಲ್ ಮಾಸ್ಕ್, ಉದ್ದದ ಕೈಗವಸುಗಳು, ಮೊಣಕಾಲು ಸಾಕ್ಸ್, ಶೂ-ಕವರ್ ಮತ್ತು ಇತರ ರಕ್ಷಣಾತ್ಮಕ ಸಾಧನಗಳೊಂದಿಗೆ ನಾವು ಒಂದೂವರೆ ಕೆಜಿಗಿಂತ ಹೆಚ್ಚಿನ ತೂಕವನ್ನು 8-10 ಗಂಟೆಗಳ ಕಾಲ ಧರಿಸಬೇಕಾಗುತ್ತದೆ” ಎಂದು ಅವರು ಹೇಳುತ್ತಾರೆ.

ವೈದ್ಯರು ಮತ್ತು ಕೊರೋನಾ ಯೋಧರ ಶಿಸ್ತಿನಿಂದ ಸ್ಫೂರ್ತಿ ಪಡೆದ ಪ್ರಧಾನಿ ನರೇಂದ್ರ ಮೋದಿಯವರು, “ಕೆಲವೊಮ್ಮೆ ನಮಗೆ ಮುಖಗವಸುಗಳಿಂದ ತೊಂದರೆಯಾಗುತ್ತದೆ ಮತ್ತು ಮುಖಗವಸನ್ನು ತೆಗೆಯಬೇಕೆಂದು ಅನಿಸುತ್ತದೆ. ಇತರರೊಂದಿಗೆ ಮಾತನಾಡುವಾಗ ನಾವು ಮುಖಗವಸು ತೆಗೆದುಹಾಕುತ್ತೇವೆ. ಆದರೆ ಅದನ್ನು ಧರಿಸಿರುವುದು ಹೆಚ್ಚು ಅಗತ್ಯವಾಗಿರುತ್ತದೆ. ನಾನು ನಿಮಗೆ ವಿನಂತಿಸುವುದೇನೆಂದರೆ, ನಿಮಗೆ ಮುಖಗವಸು ತೊಂದರೆ ಎನಿಸಿದಾಗ ಮತ್ತು ನೀವು ಅದನ್ನು ತೆಗೆಯಲು ಬಯಸಿದಾಗ, ಆ ವೈದ್ಯರು, ದಾದಿಯರು ಮತ್ತು ನಮ್ಮ ಕೊರೋನಾ ಯೋಧರ ಬಗ್ಗೆ ಒಂದು ಕ್ಷಣ ಯೋಚಿಸಿ. ನಮ್ಮೆಲ್ಲರ ಪ್ರಾಣ ಉಳಿಸಲು ಪ್ರಯತ್ನಿಸುತ್ತಿರುವ ಅವರು ಗಂಟೆಗಟ್ಟಲೆ ನಿರಂತರವಾಗಿ ಮುಖಗವಸುಗಳನ್ನು ಹೇಗೆ ಧರಿಸುತ್ತಾರೆ? ಎಂಟು-ಹತ್ತು ಗಂಟೆಗಳ ಕಾಲ ಮುಖಗವಸುಗಳನ್ನು ಧರಿಸಲು ಅವರಿಗೆ ಕಷ್ಟವಿಲ್ಲವೇ?” ಎಂದು ಜನರಲ್ಲಿ ಮನವಿ ಮಾಡುತ್ತಾರೆ. ಪ್ರಧಾನಮಂತ್ರಿಯವರ ಮಾತಿನಲ್ಲಿ, ವೈದ್ಯರು, ದಾದಿಯರು, ಅರೆವೈದ್ಯಕೀಯ ಸಿಬ್ಬಂದಿ, ಆಶಾ-ಎಎನ್‌ಎಂ ಕಾರ್ಯಕರ್ತರು ಮತ್ತು ನೈರ್ಮಲ್ಯ ಕಾರ್ಮಿಕರ ತ್ಯಾಗ, ತಪಸ್ಸು ಮತ್ತು ಸಮರ್ಪಣೆ ಭಾವವನ್ನು ದೇಶವು ಗಮನಿಸುತ್ತಿದೆ. ಕೊರೋನಾ ವಿರುದ್ಧದ ಈ ಯುದ್ಧದಲ್ಲಿ ಮುಂಚೂಣಿಯಲ್ಲಿ ನಿಂತಿರುವ ಮತ್ತು ಸಮಾಜದ ನಿಜವಾದ ವೀರರಾದ ಅಂತಹ ಅನೇಕ ಜನರು ತಮ್ಮ ಸುತ್ತಲೂ ಇದ್ದಾರೆ.

## ಆಂಬ್ಯುಲೆನ್ಸ್ ಚಾಲಕ ಪ್ರೇಮ್‌ಗೆ ಕೆಲಸ ಬಿಡುವಂತೆ ತಾಯಿ ಹೇಳಿದಾಗ...

ವೈದ್ಯರು ಮತ್ತು ಶುಶ್ರೂಷಾ ಸಿಬ್ಬಂದಿಯೊಂದಿಗೆ, ಮುಂಚೂಣಿಯ ಕೆಲಸಗಾರರಾದ ಪ್ರಯೋಗಾಲಯ ತಂತ್ರಜ್ಞರು ಮತ್ತು ಆಂಬ್ಯುಲೆನ್ಸ್ ಚಾಲಕರು ಸಹ ಬಿಕ್ಕಟ್ಟಿನ ಸಂದರ್ಭದಲ್ಲಿ ದೇವದೂತರಂತೆ ಕೆಲಸ ಮಾಡುತ್ತಿದ್ದಾರೆ. ರೋಗಿಯ ಬಳಿಗೆ ಆಂಬ್ಯುಲೆನ್ಸ್ ಬಂದಾಗ ರೋಗಿಯು ಅದರ ಚಾಲಕನನ್ನು ದೇವತೆ ಎಂದು ಪರಿಗಣಿಸುತ್ತಾನೆ. ಅಂತಹ ಆಂಬ್ಯುಲೆನ್ಸ್ ಚಾಲಕ ಪ್ರೇಮ್ ವರ್ಮಾ ಫೋನ್ ಕರೆ ಮಾಡಿದರೆ ಸಾಕು ರೋಗಿಗಳ ಬಳಿಗೆ ತೆರಳುತ್ತಾರೆ. ಆದರೆ ತಮ್ಮ ತಾಯಿ ಈ ಬಗ್ಗೆ ತುಂಬಾ ಚಿಂತಿತರಾಗಿದ್ದರು. ಕೆಲಸವನ್ನು ಬಿಡುವಂತೆ ಹೇಳಿದಳು ಎಂದು ಅವರು ಹೇಳುತ್ತಾರೆ. “ನಾನು ಕೆಲಸ ಬಿಟ್ಟರೆ ರೋಗಿಗಳನ್ನು ಆಸ್ಪತ್ರೆಗೆ ಯಾರು ಸಾಗಿಸುತ್ತಾರೆ ಎಂದು ನಾನು ಅವಳಿಗೆ ಹೇಳಿದೆ. ಎಲ್ಲರೂ ಭಯಭೀತರಾಗಿದ್ದಾರೆ ಮತ್ತು ಕೆಲಸವನ್ನು ತೊರೆಯುತ್ತಾರೆ, ಆದರೆ ನಾನು ಮಾತ್ರ ಈ ಕೆಲಸವನ್ನು ಬಿಡುವುದಿಲ್ಲ,” ಎಂದು ಹೇಳಿದ್ದಾಗಿ ಅವರು ಹೇಳುತ್ತಾರೆ. ಪ್ರೇಮ್ ನಂತಹ ಸಾವಿರಾರು ಜನರು ಇತರರ ಯೋಗಕ್ಷೇಮಕ್ಕಾಗಿ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟಿದ್ದಾರೆ.



## ಕೋವಿಡ್ ಯೋಧರಿಗೆ ಕ್ರಮಗಳು



**50** ಲಕ್ಷ ರೂ.ಗಳ ವಿಮಾ ರಕ್ಷಣೆ

**100 ದಿನಗಳ** ಕೋವಿಡ್ ಕರ್ತವ್ಯ ಪೂರೈಸಿದವರಿಗೆ ಖಾಯಂ ಉದ್ಯೋಗದಲ್ಲಿ ಆದ್ಯತೆ

**100 ದಿನಗಳ** ಕೋವಿಡ್ ಕರ್ತವ್ಯವನ್ನು ಪೂರ್ಣಗೊಳಿಸಿದವರಿಗೆ ‘ಪ್ರಧಾನ ಮಂತ್ರಿ ಕೋವಿಡ್ ರಾಷ್ಟ್ರೀಯ ಸೇವಾ ಪ್ರಶಸ್ತಿ’

**ಕಾನೂನು ರಕ್ಷಣೆ**

ಸುಗ್ರೀವಾಜ್ಞೆಯ ಮೂಲಕ ವೈದ್ಯರಿಗೆ ರಕ್ಷಣೆ

ವೈದ್ಯಕೀಯ ಇಂಟರ್ನಿಗಳು, ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳಿಗೂ ಸಹ ಕರ್ತವ್ಯ ನಿಯೋಜನೆ



> **ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಮೇಲಿನ ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬಂದಾಗ, ಅವರನ್ನು ರಕ್ಷಿಸಲು ಕೇಂದ್ರ ಸರ್ಕಾರ ಕಠಿಣ ಕಾನೂನು ರೂಪಿಸಿತು**

ವೈದ್ಯರು ತಮ್ಮ ಕುಟುಂಬಗಳನ್ನು ದೂರದಿಂದ ಭೇಟಿಯಾಗುವುದು ಅಥವಾ ಕರ್ತವ್ಯದ ನಂತರ ಮನೆಗೆ ಹೋಗುವ ಬದಲು ತಮ್ಮ ಕಾರಿನಲ್ಲಿಯೇ ರಾತ್ರಿ ಕಳೆಯುವುದು ಅಥವಾ ವೈದ್ಯ ದಂಪತಿಗಳು ತಮ್ಮ ಒಂದೇ ಫ್ಲಾಟ್ ನಲ್ಲಿ ಪ್ರತ್ಯೇಕ ಜೀವನವನ್ನು ನಡೆಸುವುದು ಇಂತಹ ಅಸಂಖ್ಯಾತ ಕಥೆಗಳಿವೆ. ಆದರೆ ಅವರು ತಮ್ಮ ಕರ್ತವ್ಯದ ಬಗೆಗಿನ ಸಮರ್ಪಣೆಯಲ್ಲಿ ಅಚಲರಾಗಿದ್ದಾರೆ. ಕೊರೋನಾ ರೋಗಿಗಳೊಂದಿಗೆ ಹೆಚ್ಚಿನ ಸಮಯ ನಿಕಟ ಸಂಪರ್ಕ ಹೊಂದಿದ್ದರಿಂದ ನೂರಾರು ವೈದ್ಯರು, ದಾದಿಯರು ಮತ್ತು ಇತರ ಅರೆವೈದ್ಯಕೀಯ ಸಿಬ್ಬಂದಿ ಸಹ ಸೋಂಕಿಗೆ ಬಲಿಯಾಗಿದ್ದಾರೆ. ಜೂನ್ 15 ರಂದು ಭಾರತೀಯ ವೈದ್ಯಕೀಯ ಸಂಘವು ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ದೇಶಾದ್ಯಂತ ಒಟ್ಟು 730 ವೈದ್ಯರು ಎರಡನೇ ಅಲೆಯಲ್ಲಿ ತಮ್ಮ ರೋಗಿಗಳಿಗೆ ಚಿಕಿತ್ಸೆ ನೀಡುವಾಗ ವೈರಾಣು ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಸಾಂಕ್ರಾಮಿಕ ರೋಗದ ಮೊದಲ ಅಲೆಯಲ್ಲೂ ಒಟ್ಟು 741 ವೈದ್ಯರು ಸಾವನ್ನಪ್ಪಿದ್ದಾರೆ ಎಂದು ಐಎಂಎ ಹೇಳಿದೆ.

### ವೈದ್ಯರು ಮತ್ತು ಯೋಧರ ಸುರಕ್ಷತೆ

ವೈದ್ಯರ ನಿರಂತರ ಪರಿಶ್ರಮ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳು ಮತ್ತು ಇತರ ಕೊರೋನಾ ಯೋಧರ ಪ್ರಯತ್ನಗಳು ಜನರಿಗೆ ಭರವಸೆಯ ಕಿರಣವಾಗಿವೆ.

ಈ ಕೊರೋನಾ ಯೋಧರು ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೆಲಸ ಮಾಡುತ್ತಿರುವ ತೀವ್ರ ಪರಿಸ್ಥಿತಿಗಳನ್ನು ಗುರುತಿಸಿ, ಕೇಂದ್ರ ಸರ್ಕಾರವು

# ಕೋವಿಡ್ ಮೂಲಸೌಕರ್ಯ ವಿಸ್ತರಣೆ

ಇ-ಸಂಜೀವಿನಿ ಮೂಲಕ **60 ಲಕ್ಷಕ್ಕೂ** ಹೆಚ್ಚು ಜನರಿಗೆ ಕೌನ್ಸೆಲಿಂಗ್. 1.20 ಕೋಟಿಗೆ ತಲುಪಿದ ರೆಮ್‌ಡೆಸಿವಿರ್ ವಯಲ್ಸ್ ಉತ್ಪಾದನೆ. ಈ ಮೊದಲು ಅದು 37 ಲಕ್ಷ ಇತ್ತು

**2649** ಕ್ಕೂ ಹೆಚ್ಚು ಪರೀಕ್ಷಾ ಪ್ರಯೋಗಾಲಯಗಳು; ಮೊದಲು ಒಂದೇ ಪ್ರಯೋಗಾಲಯ ಇತ್ತು

ಈಗ ಪ್ರತಿದಿನ **15 ಲಕ್ಷಕ್ಕೂ** ಹೆಚ್ಚು ಪರೀಕ್ಷೆಗಳು

ದಿನಕ್ಕೆ **4.5 ಲಕ್ಷ** ಪಿಪಿಇ ಕಿಟ್‌ಗಳ ತಯಾರಿಕೆ, ಈ ಮೊದಲು ಇದು ಶೂನ್ಯವಾಗಿತ್ತು. ಪಿಪಿಇ ಕಿಟ್‌ಗಳ ತಯಾರಿಕೆಗೆ 110 ದೇಶೀಯ ಕಂಪನಿಗಳನ್ನು ಗುರುತಿಸಲಾಗಿದೆ.

ಐಸಿಯು ಹಾಸಿಗೆಗಳು ಮಾರ್ಚ್ 2020 ರಲ್ಲಿದ್ದ 2,168 ರಿಂದ **81,000** ಕ್ಕೆ ಹೆಚ್ಚಳ

**14.88** ಲಕ್ಷ ಐಸೊಲೇಷನ್ ಹಾಸಿಗೆಗಳು; ಮಾರ್ಚ್ 2020 ರಲ್ಲಿ ಅಂತಹ 10,180 ಹಾಸಿಗೆಗಳು ಮಾತ್ರ ಇದ್ದವು

**18.52** ಲಕ್ಷ ತಲುಪಿದ ಕೋವಿಡ್ ಹಾಸಿಗೆಗಳ ಸಂಖ್ಯೆ

4,400 ಕೋವಿಡ್ ಕೇರ್ ಬೋಗಿಗಳಲ್ಲಿ **70,000** ಐಸೊಲೇಷನ್ ಹಾಸಿಗೆಗಳು ಲಭ್ಯವಾಗಿವೆ

ಎನ್ -95 ಮುಖಗವಸುಗಳ ದೈನಂದಿನ ಪೂರೈಕೆ **1.26 ಕೋಟಿ**; ಇದು ಮಾರ್ಚ್ 2020 ರಲ್ಲಿ 3.35 ಲಕ್ಷ ಆಗಿತ್ತು

ಈಗ ಪ್ರತಿದಿನ **84.6** ಲಕ್ಷ ಪಿಪಿಇ ಕಿಟ್‌ಗಳನ್ನು ಸರಬರಾಜು ಮಾಡಲಾಗುತ್ತಿದ್ದು, ಇದು ಮಾರ್ಚ್ 2020 ರಲ್ಲಿ 1.86 ಲಕ್ಷ ಇತ್ತು.

ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ, ಇದರಿಂದ ಅವರು ಮತ್ತು ಅವರ ಕುಟುಂಬಗಳು ಪ್ರೇರಿತರಾಗಿವೆ. ಕೊರೋನಾವನ್ನು ಸಾಂಕ್ರಾಮಿಕ ಎಂದು ಘೋಷಿಸಿದ ಕೂಡಲೇ, ಆರೋಗ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ಪ್ರತಿ ಕೊರೋನಾ ಯೋಧರಿಗೆ 50 ಲಕ್ಷ ರೂ.ಗಳ ವಿಮಾ ರಕ್ಷಣೆಯನ್ನು ನೀಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿತು. ಆರೋಗ್ಯ ಕಾರ್ಯಕರ್ತರ ರಕ್ಷಣೆಗಾಗಿ ಕೇಂದ್ರ ಸರ್ಕಾರವು ಸಾಂಕ್ರಾಮಿಕ ರೋಗಗಳ ಕಾಯ್ದೆ (ಸಾಂಕ್ರಾಮಿಕ ರೋಗಗಳ ಕಾಯ್ದೆ, 1897) ಯನ್ನು ಸುಗ್ರೀವಾಜ್ಞೆಯ ಮೂಲಕ ಬದಲಾಯಿಸಿತು. ಭವಿಷ್ಯದ ಖಾಯಂ ಉದ್ಯೋಗ ನೇಮಕಾತಿಗಳಲ್ಲಿ ಕೋವಿಡ್ ಕರ್ತವ್ಯದಲ್ಲಿ ತೊಡಗಿರುವ ಆರೋಗ್ಯ ಕಾರ್ಯಕರ್ತರಿಗೆ ಆದ್ಯತೆ ನೀಡಲು ಮತ್ತು 100 ದಿನಗಳ ಕರ್ತವ್ಯವನ್ನು ಪೂರೈಸಿದ ವೈದ್ಯಕೀಯ ಸಿಬ್ಬಂದಿಗೆ ಪ್ರಧಾನ ಮಂತ್ರಿಯವರ ಪ್ರತಿಷ್ಠಿತ ‹ಕೋವಿಡ್ ರಾಷ್ಟ್ರೀಯ ಸೇವಾ ಪ್ರಶಸ್ತಿ' ಯನ್ನು ನೀಡಲು ನಿರ್ಧರಿಸಲಾಯಿಗಿದೆ.

ಆದರೂ, ಕೆಲವು ಆತಂಕಕಾರಿ ಘಟನೆಗಳು ಸಹ ಮುನ್ನೆಲೆಗೆ ಬಂದವು, ಅದು ಮನುಕುಲವನ್ನು ಮುಜುಗರಕ್ಕೀಡು ಮಾಡಿತು. ಚಿಕಿತ್ಸೆಯ ಸಮಯದಲ್ಲಿ ಸಾವಿಗೀಡಾದ ಕೆಲವು ರೋಗಿಗಳ ಸಂಬಂಧಿಕರು ವೈದ್ಯರೊಂದಿಗೆ ಹಿಂಸಾತ್ಮಕವಾಗಿ ವರ್ತಿಸಿದರು. ಸಮಸ್ಯೆಯ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು, ವೈದ್ಯಕೀಯ ಸಿಬ್ಬಂದಿಯ ಮೇಲಿನ ಇಂತಹ ಹಲ್ಲೆಗೆ 3 ತಿಂಗಳಿನಿಂದ 5 ವರ್ಷಗಳವರೆಗೆ ಶಿಕ್ಷೆ ಮತ್ತು 50,000 ರಿಂದ 2 ಲಕ್ಷ ರೂ.ಗಳ ದಂಡವನ್ನು ವಿಧಿಸುವ ಸುಗ್ರೀವಾಜ್ಞೆಯ ಮೂಲಕ ಸರ್ಕಾರ ಹೊಸ ಕಾನೂನು ಜಾರಿಗೆ ತಂದಿತು. ಅಂತಹ ಅಪರಾಧವನ್ನು ಜಾಮೀನು ರಹಿತ ಕೃತ್ಯವೆಂದು ಮಾಡಲಾಗಿದೆ. ಇದಲ್ಲದೆ, ವೈದ್ಯರ ಸಂಪೂರ್ಣ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ವೈದ್ಯರ ಅಥವಾ ಇತರ ಸಿಬ್ಬಂದಿಯ ಕಾರು ಅಥವಾ ಕ್ಲಿನಿಕ್ ಹಾನಿಗೊಳಗಾದರೆ, ಅಪರಾಧಿಯಿಂದ ಹಾನಿಯ ದುಪ್ಪಟ್ಟು ಹಣವನ್ನು ಪಡೆಯಲು ಕಾನೂನಿನಲ್ಲಿ ನಿಬಂಧನೆಗಳನ್ನು ಮಾಡಲಾಗಿದೆ. ಇದಲ್ಲದೆ, ಅಂತಹ ಪ್ರಕರಣಗಳ ತನಿಖೆಯನ್ನು 30 ದಿನಗಳಲ್ಲಿ ಪೂರ್ಣಗೊಳಿಸಲು ಹಿರಿಯ ಇನ್ಸ್‌ಪೆಕ್ಟರ್‌ಗೆ ಮತ್ತು ನ್ಯಾಯಾಲಯವು ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಲು ಸಹ ಇದು ತಿಳಿಸುತ್ತದೆ. ಗಂಭೀರ ಪ್ರಕರಣಗಳಲ್ಲಿ ಅಪರಾಧಿಗೆ 6 ತಿಂಗಳಿಂದ 7 ವರ್ಷಗಳವರೆಗೆ ಕಠಿಣ ಶಿಕ್ಷೆ ವಿಧಿಸುವ ಅವಕಾಶವೂ ಇದೆ.

## ಪ್ರಧಾನಿಯವರ ಮಟ್ಟದಲ್ಲಿ ನಿರಂತರ ಮೇಲ್ವಿಚಾರಣೆ

- 2020 ರ ಏಪ್ರಿಲ್‌ನಲ್ಲಿ ಲಸಿಕೆ ಕಾರ್ಯಪಡೆ ರಚನೆ
- 2021 ರ ಜನವರಿಯಲ್ಲಿ ಲಸಿಕೆ ಕಾರ್ಯಕ್ರಮ ಪ್ರಾರಂಭ
- 9 ತಿಂಗಳಲ್ಲಿಯೇ ಸಿದ್ಧವಾದ ಎರಡು 'ಮೇಡ್ ಇನ್ ಇಂಡಿಯಾ' ಲಸಿಕೆಗಳು
- ಉತ್ತಮ ನಿರ್ವಹಣೆಗಾಗಿ ಮುಖ್ಯಮಂತ್ರಿಗಳೊಂದಿಗೆ ಪ್ರಧಾನ ಮಂತ್ರಿಯವರ 14 ಸಭೆಗಳು
- ಜನರಿಗೆ ಭರವಸೆ ನೀಡಲು 10 ಬಾರಿ ಪ್ರಧಾನಮಂತ್ರಿಯವರಿಂದ ಭಾಷಣ
- ಕೋವಿಡ್ ನಿರ್ವಹಣೆ ಕುರಿತು ಸಚಿವರ ಗುಂಪಿನ (ಜಿಒಎಂ) 24 ಸಭೆಗಳು
- ಕೇಂದ್ರ ಆರೋಗ್ಯ ಸಚಿವಾಲಯದಿಂದ ರಾಜ್ಯಗಳೊಂದಿಗೆ ಕನಿಷ್ಠ 97 ಸಭೆಗಳು

## ಆಮ್ಲಜನಕದ ಉತ್ಪಾದನೆಯಲ್ಲಿ 10 ಪಟ್ಟು ಹೆಚ್ಚಳ




ದಿನಕ್ಕೆ **9300** ಮೆ.ಟನ್ ತಲುಪಿದ ದ್ರವೀಕೃತ ವೈದ್ಯಕೀಯ ಆಮ್ಲಜನಕ ಉತ್ಪಾದನೆ. ಇದು **2019 ರಲ್ಲಿ 900 ಮೆ.ಟನ್ ಇತ್ತು**

ಆಮ್ಲಜನಕ ಟ್ಯಾಂಕರ್‌ಗಳು **1,681** ಕ್ಕೆ ಹೆಚ್ಚಳ, ಇದು ಮಾರ್ಚ್ **2020 ರಲ್ಲಿ 1,040 ರಷ್ಟಿತ್ತು**

ಟ್ಯಾಂಕರ್ ಸಾಮರ್ಥ್ಯವು ಮೇ **2021** ರಲ್ಲಿ **23,056** ಮೆ.ಟನ್ ತಲುಪಿದ್ದು, ಮಾರ್ಚ್ **2020** ರಲ್ಲಿ **12,480** ಮೆ.ಟನ್ ಇತ್ತು

ಕ್ರಯೋಜೆನಿಕ್ ಟ್ಯಾಂಕರ್‌ಗಳ ಸಂಖ್ಯೆ **901** ಕ್ಕೆ ತಲುಪಿದ್ದು, ಇವುಗಳ ಸಂಖ್ಯೆ ಮಾರ್ಚ್ **2020** ರಲ್ಲಿ **609** ಇತ್ತು

ವೈದ್ಯಕೀಯ ಆಮ್ಲಜನಕ ಸಿಲಿಂಡರ್‌ಗಳ ಸಂಖ್ಯೆ **11.19 ಲಕ್ಷ** ತಲುಪಿದ್ದು, ಮಾರ್ಚ್ **2020** ರಲ್ಲಿ ಅದು **4.35 ಲಕ್ಷ** ಆಗಿತ್ತು

- 2021 ರ ಮೇ 23 ರವರೆಗೆ 234 ಆಕ್ಸಿಜನ್ ಎಕ್ಸ್‌ಪ್ರೆಸ್ ರೈಲುಗಳ ಮೂಲಕ 15,000 ಮೆಟ್ರಿಕ್ ಟನ್ ಆಮ್ಲಜನಕವನ್ನು ದೇಶದ ವಿವಿಧ ಭಾಗಗಳಿಗೆ ತಲುಪಿಸಲಾಯಿತು
- ಪಿಎಂ ಕೇರ್ಸ್ ನಿಧಿ ಸಹಾಯದಿಂದ 1051 ಪಿಎಸ್‌ಎ ಆಕ್ಸಿಜನ್ ಘಟಕಗಳ ಸ್ಥಾಪನೆ
- ಆಮ್ಲಜನಕದ ಪೂರೈಕೆಯನ್ನು ಹೆಚ್ಚಿಸಲು ಪಿಎಂ ಕೇರ್ಸ್ ನಿಧಿಯಿಂದ 200 ಕೋಟಿ ರೂ.
- 31 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ವೈದ್ಯಕೀಯ ಮೂಲಸೌಕರ್ಯಕ್ಕಾಗಿ 86 ಸಂಸ್ಥೆಗಳನ್ನು ಬಲಗೊಳಿಸಲಾಗಿದೆ
- ಟ್ಯಾಂಕರ್ ಸಾಮರ್ಥ್ಯವು ಮೇ 2021 ರಲ್ಲಿ 23,056 ಮೆ.ಟನ್ ತಲುಪಿದ್ದು, ಮಾರ್ಚ್ 2020 ರಲ್ಲಿ 12,480 ಮೆ.ಟನ್ ಇತ್ತು

**ಕೋವಿಡ್ ಸಮಯದಲ್ಲಿ ಆರೋಗ್ಯ ಮೂಲಸೌಕರ್ಯಗಳ ಅಭಿವೃದ್ಧಿ**

ಯಾವುದೇ ಅನಾಹುತವನ್ನು ಎದುರಿಸಲು ಅಥವಾ ವ್ಯವಸ್ಥೆಯು ಸುಗಮವಾಗಿ ನಡೆಯಲು ಮೂಲಸೌಕರ್ಯವು ಪ್ರಮುಖ ಪಾತ್ರವನ್ನು ಹೊಂದಿದೆ.

ಕೊರೋನಾ ವೈರಸ್‌ನಿಂದ ವಿವಿಧ ದೇಶಗಳು ಪರಿಣಾಮ ಎದುರಿಸುತ್ತಿದ್ದಾಗ ಸಾಂಕ್ರಾಮಿಕ ರೋಗದ ಆರಂಭಿಕ ಹಂತಗಳಲ್ಲಿ, ಅದರ ಹರಡುವಿಕೆಯನ್ನು ತಡೆಯಲು ಪೂರ್ವಭಾವಿ ಕ್ರಮಗಳನ್ನು ಕೈಗೊಂಡ ಮೊದಲ ದೇಶಗಳಲ್ಲಿ ಭಾರತವು ಒಂದಾಗಿದೆ. ಇದು ಭಾರತಕ್ಕೆ ಬರುವ ಪ್ರಯಾಣಿಕರ ಬಗ್ಗೆ ತೀವ್ರ ನಿಗಾ ಇರಿಸಿತು. ಆದರೆ ಭಾರತದಲ್ಲಿ ಸಾಂಕ್ರಾಮಿಕ ರೋಗ ಹರಡಲು ಪ್ರಾರಂಭಿಸಿದಾಗ, ಆರೋಗ್ಯ ಮೂಲಸೌಕರ್ಯಗಳನ್ನು ಬಲಪಡಿಸುವುದು ದೇಶದ ಮುಂದೆ ದೊಡ್ಡ ಸವಾಲಾಗಿತ್ತು. ಹೊಸ ಸವಾಲುಗಳನ್ನು ಎದುರಿಸಲು ಆರೋಗ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕೇಂದ್ರವು ಅಖಾಡಕ್ಕೆ ಇಳಿಯಿತು ಮತ್ತು ದೇಶಾದ್ಯಂತ ಲಾಕ್ಡೌನ್ ಅನ್ನು

**ಈ ವರ್ಷದ ಆರೋಗ್ಯ ಬಜೆಟ್‌ನಲ್ಲಿ ಶೇ.137 ರಷ್ಟು ಹೆಚ್ಚಳದೊಂದಿಗೆ 2.23 ಲಕ್ಷ ಕೋಟಿ ಮೀಸಲಿಡಲಾಗಿದೆ**

ಘೋಷಿಸಿತು. ಬಹಳ ಕಡಿಮೆ ಸಮಯದಲ್ಲಿ, ದೇಶವು ಆರು ಲಕ್ಷ ಕೋವಿಡ್ ವಿಶೇಷ ಹಾಸಿಗೆಗಳನ್ನು ಒದಗಿಸಿತು. ಪ್ರಸ್ತುತ, ದೇಶದಲ್ಲಿ ಸುಮಾರು 19 ಲಕ್ಷ ಹಾಸಿಗೆಗಳಿವೆ. ಮಾರ್ಚ್ 2020 ರಲ್ಲಿದ್ದ 10,000 ಐಸೊಲೇಷನ್ ಹಾಸಿಗೆಗಳು, 2021 ರ ಏಪ್ರಿಲ್ ವೇಳೆಗೆ 14.88 ಲಕ್ಷಕ್ಕೆ ಏರಿಕೆಯಾಗಿವೆ. ಅದೇ ರೀತಿ ಕಳೆದ ವರ್ಷ ಮಾರ್ಚ್‌ನಲ್ಲಿ 2,168



> ತಾಯಿ ಒಮ್ಮೆ ಮಾತ್ರ ನಮಗೆ ಜನ್ಮ ನೀಡುತ್ತಾಳೆ; ವೈದ್ಯರು ನಮಗೆ ಅನೇಕ ಬಾರಿ ಜೀವ ನೀಡುತ್ತಾರೆ. ಬಿಕ್ಕಟ್ಟಿನ ಈ ಸಂದರ್ಭದಲ್ಲಿ , ಆಸ್ಪತ್ರೆಗಳಲ್ಲಿ ಬಿಳಿ ಬಟ್ಟೆಯಲ್ಲಿ ಕಾಣುವ ವೈದ್ಯರು, ದಾದಿಯರು ದೈವ ಸ್ವರೂಪರು. ಇವರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ನಮ್ಮ ಜೀವ ಉಳಿಸುತ್ತಿದ್ದಾರೆ. ವೈದ್ಯರು ಜೀವಗಳನ್ನು ಉಳಿಸುತ್ತಾರೆ ಮತ್ತು ಅವರ ಋಣವನ್ನು ನಾವು ಎಂದಿಗೂ ಹಿಂದಿರುಗಿಸಲು ಸಾಧ್ಯವಿಲ್ಲ. ದೇಶಕ್ಕೆ ಸೇವೆ ಸಲ್ಲಿಸುತ್ತಿರುವವರನ್ನು ಪ್ರತಿ ಕ್ಷಣವೂ ಸಾರ್ವಜನಿಕವಾಗಿ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ
>
> **- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

## ಮಾಜಿ ಸೈನಿಕರ ಪಾತ್ರ

2017 ಮತ್ತು 2021 ರ ನಡುವೆ ಸೈನ್ಯದಿಂದ ನಿವೃತ್ತರಾದ 400 ಮಾಜಿ ಎಎಂಸಿ / ಎಸ್‌ಎಸ್‌ಸಿ ವೈದ್ಯಕೀಯ ಅಧಿಕಾರಿಗಳನ್ನು 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು. ನಿಗದಿತ ಅವಧಿಗೆ ನೇಮಕವಾಗಿರುವ ವೈದ್ಯರ ಸೇವೆಯನ್ನು 2021 ರ ಡಿಸೆಂಬರ್ 31 ರವರೆಗೆ ವಿಸ್ತರಿಸಲಾಗಿದೆ.

## ಮಕ್ಕಳಿಗಾಗಿ ಪಿಎಂ ಕೇರ್ಸ್

- ಕೋವಿಡ್‌ನಲ್ಲಿ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳಿಗೆ 10 ಲಕ್ಷ ರೂ. ನಿಶ್ಚಿತ ಠೇವಣಿ. ಈ ಮೊತ್ತವು 18 ನೇ ವಯಸ್ಸಿನಲ್ಲಿ ಅವರಿಗೆ ಲಭ್ಯವಾಗುತ್ತದೆ.
- ಶಾಲೆಗಳಲ್ಲಿ ಉಚಿತ ಶಿಕ್ಷಣ ಮತ್ತು ಅಂತಹ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ಆರ್ಥಿಕ ನೆರವು.
- ಆಯುಷ್ಮಾನ್ ಭಾರತ್ ಯೋಜನೆಯಡಿ 5 ಲಕ್ಷ ರೂ.ವರೆಗೆ ಉಚಿತ ಚಿಕಿತ್ಸೆಯ ವ್ಯವಸ್ಥೆ, ಇದರ ಪ್ರೀಮಿಯಂ ಅನ್ನು ಪಿಎಂ ಕೇರ್ಸ್ ನಿಧಿಯು ಭರಿಸುತ್ತದೆ.

## ಲಸಿಕೆ ಲಭ್ಯತೆಯ ವಿಸ್ತರಣೆ

**12** ಖಾಸಗಿ, ಸಾರ್ವಜನಿಕ ವಲಯದ ಉತ್ಪಾದಕರನ್ನು ಲಸಿಕೆ ಉತ್ಪಾದನೆಗೆ ಗುರುತಿಸಲಾಗಿದೆ

- ಮೇ 26 ರ ಹೊತ್ತಿಗೆ ಜನರಿಗೆ 200 ಮಿಲಿಯನ್ ಲಸಿಕೆಗಳನ್ನು ಜನರಿಗೆ ನೀಡುವ ಮೂಲಕ ಭಾರತವು ಇದನ್ನು ಸಾಧಿಸಿದ ಎರಡನೇ ಅತಿ ವೇಗದ ದೇಶವಾಯಿತು

**₹4500** ಕೋಟಿ ರೂ.ಗಳನ್ನು ಸೀರಮ್ ಸಂಸ್ಥೆ (₹ 3000 ಕೋಟಿ ರೂ.) ಮತ್ತು ಭಾರತ್ ಬಯೋಟೆಕ್ (₹ 1500 ಕೋಟಿ ರೂ.) ಕಂಪನಿಗಳಿಗೆ ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ನೀಡಲಾಗಿದೆ

- ಮುಂಚೂಣಿ ಕಾರ್ಯಕರ್ತರಿಂದ ಪ್ರಾರಂಭವಾದ ಹಂತವಾರು ಲಸಿಕೆ ಅಭಿಯಾನವನ್ನು ನಂತರ 45 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮತ್ತು ನಂತರ 45-18 ವರ್ಷದವರಿಗೆ ವಿಸ್ತರಿಸಲಾಯಿತು

## ಭವಿಷ್ಯಕ್ಕಾಗಿ ಸುರಕ್ಷಿತ ಮತ್ತು ಆರೋಗ್ಯಕರ ಭಾರತದ ನಿರ್ಮಾಣ

**2014 ರವರೆಗೆ ಇದ್ದ 7 ಏಮ್ಸ್ ಗೆ ಹೋಲಿಸಿದರೆ ಈಗ 22 ಏಮ್ಸ್**

- 2014 ರ ನಂತರ 184 ಹೊಸ ವೈದ್ಯಕೀಯ ಕಾಲೇಜುಗಳು ಪ್ರಾರಂಭವಾಗಿವೆ. ಅವು ವಿವಿಧ ಹಂತಗಳಲ್ಲಿವೆ, ಕಳೆದ ಏಳು ವರ್ಷಗಳಲ್ಲಿ 30,000 ಹೆಚ್ಚುವರಿ ವೈದ್ಯಕೀಯ ಸೀಟುಗಳು ಹೆಚ್ಚಾಗಿವೆ. 2014 ರವರೆಗೆ ಕೇವಲ 50,000 ಸೀಟುಗಳು ಇದ್ದವು.
- ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಲು ಹೆಚ್ಚಿನ ಹೂಡಿಕೆ ಮಾಡಲಾಗಿದೆ
- ಭವಿಷ್ಯದಲ್ಲಿ ಯಾವುದೇ ಸಾಂಕ್ರಾಮಿಕ ರೋಗಗಳಿಗೆ ದೇಶವನ್ನು ಸಿದ್ಧಪಡಿಸಲು ಎಲ್ಲಾ ಜಿಲ್ಲೆಗಳ ಆಸ್ಪತ್ರೆಗಳಲ್ಲಿ ಸಾಂಕ್ರಾಮಿಕ ರೋಗ ಬ್ಲಾಕ್ ಗಳನ್ನು ಸ್ಥಾಪಿಸಲಾಗುವುದು
- ಸಾಂಕ್ರಾಮಿಕ ನಿರ್ವಹಣೆಗಾಗಿ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರಯೋಗಾಲಯ ಜಾಲ ಮತ್ತು ಸಾರ್ವಜನಿಕ ಆರೋಗ್ಯ ಘಟಕಗಳಲ್ಲಿ ಸಂಯೋಜಿತ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳು

ಐಸಿಯು ಹಾಸಿಗೆಗಳಿದ್ದು, ಈ ವರ್ಷದ ಏಪ್ರಿಲ್ ವೇಳೆಗೆ 81,000 ಕ್ಕಿಂತ ಹೆಚ್ಚಾಗಿವೆ. ಕೇಂದ್ರ ಸರ್ಕಾರ ಪರೀಕ್ಷೆ, ಪ್ರಯೋಗಾಲಯ ಕಿಟ್‌ಗಳು, ವರ್ಚುವಲ್ ಪ್ಲಾಟ್‌ಫಾರ್ಮ್‌ಗಳು, ಲಸಿಕೆಗಳ ಸಂಶೋಧನೆ, ಪಿಪಿಇ ಕಿಟ್‌ಗಳು, ಎನ್ -95 ಮುಖಗವಸುಗಳು ಇತ್ಯಾದಿಗಳಿಗೆ 15,000 ಕೋಟಿ ರೂ. ಒದಗಿಸಿತು. ಇದರ ಪರಿಣಾಮವಾಗಿ, ಪಿಪಿಇ ಕಿಟ್‌ಗಳಿಗೆ ವಿದೇಶಗಳ ಮೇಲೆ ಅವಲಂಬಿತವಾಗಿದ್ದ ಭಾರತವು ಇತರ ದೇಶಗಳಿಗೆ ರಫ್ತು ಮಾಡಲು ಪ್ರಾರಂಭಿಸಿತು. ಇದಕ್ಕಾಗಿ 110 ದೇಶೀಯ ತಯಾರಕರನ್ನು ಸರ್ಕಾರ ಗುರುತಿಸಿದೆ. 2021 ರ ಜೂನ್ 5 ರವರೆಗೆ ಕೊರೋನವೈರಸ್ ವಿರುದ್ಧ ಹೋರಾಡಲು ಭಾರತವು 1,268 ಸರ್ಕಾರಿ ಪರೀಕ್ಷಾ ಪ್ರಯೋಗಾಲಯಗಳನ್ನು ಮತ್ತು ದೇಶಾದ್ಯಂತ 1,356 ಖಾಸಗಿ ಪ್ರಯೋಗಾಲಯಗಳನ್ನು ನೇಮಿಸಿತು. ದೇಶದಲ್ಲಿ ಕೊರೋನವೈರಸ್ ಸೋಂಕನ್ನು ಪತ್ತೆಹಚ್ಚಲು ಅನುಕೂಲವಾಗುವಂತೆ ಹೆಚ್ಚಿನ ಪರೀಕ್ಷೆ ಮತ್ತು ಮಾದರಿ ಸಂಗ್ರಹ ಸೌಲಭ್ಯಗಳನ್ನು ಸ್ಥಾಪಿಸಲಾಗುತ್ತಿದೆ.

**ಸಾಂಕ್ರಾಮಿಕ ರೋಗವನ್ನು ಎದುರಿಸಲು 7 ಸಲಹೆಗಳು**

ಸಾಂಕ್ರಾಮಿಕ ರೋಗಕ್ಕೆ ಚಿಕಿತ್ಸೆ ಅಥವಾ ಔಷಧಿ ಇಲ್ಲದ ಸಮಯದಲ್ಲಿ, ವೈವಿಧ್ಯ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ವಿಶ್ವದ ಎರಡನೇ ಅತಿದೊಡ್ಡ ದೇಶವಾದ ಭಾರತಕ್ಕೆ ಇದು ಒಂದು ಸವಾಲಾಗಿತ್ತು. ಆದರೆ ಪ್ರತಿಕೂಲ ಸಂದರ್ಭಗಳನ್ನು ಯಾವಾಗಲೂ ದಿಟ್ಟವಾಗಿ ಎದುರಿಸುವ ಪ್ರಧಾನಿ ನರೇಂದ್ರ ಮೋದಿ, ಕೋವಿಡ್19- ಎದುರಿಸಲು ಏಳು ಭದ್ರತಾ ಕ್ರಮಗಳನ್ನು ಖಾತರಿಪಡಿಸಿದರು. ಹಿರಿಯ ನಾಗರಿಕರ ವಿಶೇಷ ಆರೈಕೆ, ಸಾಮಾಜಿಕ ಅಂತರದ ಪಾಲನೆ, ಆಯುಷ್ ಮೂಲಕ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು, ಪ್ರತಿ ಮೊಬೈಲ್ ಫೋನ್‌ನಲ್ಲಿ ಆರೋಗ್ಯ ಸೇತು ಅಪ್ಲಿಕೇಶನ್, ತಾಳ್ಮೆ, ಬಡವರಿಗೆ ಮತ್ತು ನಿರ್ಗತಿಕರಿಗೆ ನೆರವು ಮತ್ತು ಮುಖ್ಯವಾಗಿ ಕೊರೋನಾ ಯೋಧರಿಗೆ ಗೌರವ ಇವು ಆ ಏಳು ಕ್ರಮಗಳಾಗಿವೆ. ■

### ಪರೀಕ್ಷೆ, ಪತ್ತೆ ಮತ್ತು ಚಿಕಿತ್ಸೆಯ ಜೊತೆಗೆ ವೇಗದ ಲಸಿಕೆಯ ಪರಿಣಾಮ

# ಕೋವಿಡ್‌ನ ಎರಡನೇ ಅಲೆಯಲ್ಲಿ ಪ್ರಕರಣಗಳು ಏರಿದ್ದಕ್ಕಿಂತ ವೇಗವಾಗಿ ಕಡಿಮೆಯಾಗುತ್ತಿವೆ

ನಮ್ಮ ಧರ್ಮಗ್ರಂಥಗಳಲ್ಲಿ ಹೇಳಿರುವಂತೆ "ವಿಪತ್ತು ಸಂಭವಿಸಿದಾಗ ವಿಜಯಶಾಲಿಗಳು ಎಂದಿಗೂ ಕೈ ಚೆಲ್ಲಿ ಕೂರುವುದಿಲ್ಲ. ಬದಲಿಗೆ ಪರಿಸ್ಥಿತಿಯನ್ನು ಗೆಲ್ಲಲು ಶ್ರಮಪಡುತ್ತಾರೆ". ಕೋವಿಡ್ ವಿರುದ್ಧದ ಸಮರದಲ್ಲಿ ಭಾರತವೂ ಇದೇ ತತ್ವವನ್ನು ಅನುಸರಿಸುತ್ತಿದೆ. ಇದು ಭಾರತದ ಬಲವಾದ ಇಚ್ಛಾಶಕ್ತಿಗೆ ಒಂದು ಉದಾಹರಣೆಯಾಗಿದೆ, ಇದರ ಮೂಲಕ ನಾವು ಕೊರೋನಾದಂತಹ ಸಾಂಕ್ರಾಮಿಕ ರೋಗದ ವಿರುದ್ಧ ನಮ್ಮನ್ನು ಬಲಪಡಿಸಿಕೊಂಡಿದ್ದೇವೆ, ಪರೀಕ್ಷೆ, ಪತ್ತೆ ಮತ್ತು ಚಿಕಿತ್ಸೆಯೊಂದಿಗೆ ತ್ವರಿತ ಲಸಿಕೆ ಎಂಬ ಮೂಲ ಮಂತ್ರವನ್ನು ಅನುಸರಿಸುತ್ತಿದ್ದೇವೆ. ಈ ಮೊದಲು ವರದಿಯಾಗುತ್ತಿದ್ದ ಸುಮಾರು 4 ಲಕ್ಷ ದೈನಂದಿನ ಸೋಂಕು ಪ್ರಕರಣಗಳು ಈಗ **60,000** ಕ್ಕೆ ಇಳಿದಿವೆ. ಸಕ್ರಿಯ ಪ್ರಕರಣಗಳ ಸಂಖ್ಯೆಯೂ 9 ಲಕ್ಷಕ್ಕೆ ಇಳಿದಿದೆ.

ಈ ವರ್ಷದ ಮಾರ್ಚ್ 17 ರಂದು ಮುಖ್ಯಮಂತ್ರಿಗಳೊಂದಿಗಿನ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹೆಚ್ಚುತ್ತಿದ್ದ ಕೊರೋನಾ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು ಮೂರು ವಿಷಯಗಳಿಗೆ ಒತ್ತು ನೀಡುವಂತೆ ರಾಜ್ಯಗಳಿಗೆ ಸೂಚಿಸಿದ್ದರು. ಅವುಗಳೆಂದರೆ, ಆರ್‌ಟಿ ಪಿಸಿಆರ್ ಪರೀಕ್ಷೆಗಳ ಹೆಚ್ಚಳ; ಕಟ್ಟುನಿಟ್ಟಿನ ಸೂಕ್ಷ್ಮ ಕಂಟೈನ್ ಮೆಂಟ್ ವಲಯಗಳು ಮತ್ತು ಕೋವಿಡ್ ಮೂಲಸೌಕರ್ಯದ ಜೊತೆಗೆ ಲಸಿಕೆ ಕಾರ್ಯಕ್ರಮದ ವೇಗವನ್ನು ಹೆಚ್ಚಿಸಲು ಒತ್ತು ನೀಡುವುದು.

ನಂಬಲು ಕಷ್ಟವಾದರೂ, ಗುಜರಾತ್ ಒಂದು ದಿನವೂ ಲಾಕ್ ಡೌನ್ ವಿಧಿಸದೇ ಎರಡನೇ ಅಲೆಯ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಲ್ಲಿ ಯಶಸ್ವಿಯಾಯಿತು. ಗುಜರಾತ್‌ನಲ್ಲಿ ವಾರಾಂತ್ಯದಲ್ಲಿ ಸರ್ಕಾರಿ ಕಚೇರಿಗಳನ್ನು ಮುಚ್ಚಲಾಗಿತ್ತು, ಖಾಸಗಿ ಕಚೇರಿಗಳು ಸ್ವಯಂಪ್ರೇರಣೆಯಿಂದ ಇದನ್ನು ಮಾಡಲು ಅವಕಾಶ ನೀಡಲಾಗಿತ್ತು. ರಾತ್ರಿ ಕರ್ಫ್ಯೂ ಜೊತೆಗೆ ರಾಜ್ಯದಲ್ಲಿ ಸೂಕ್ಷ್ಮ ಕಂಟೈನ್ ಮೆಂಟ್ ವಲಯಗಳ ಕಟ್ಟುನಿಟ್ಟಿನ ಮೇಲ್ವಿಚಾರಣೆ ನಡೆಸಲಾಯಿತು. ಪರೀಕ್ಷೆಗಳನ್ನು ಹೆಚ್ಚಿಸಲಾಯಿತು. ಲಸಿಕಾ ಕಾರ್ಯಕ್ರಮದ ಬಗ್ಗೆ ಗಮನ ನೀಡಲಾಯಿತು. ಇದೆಲ್ಲದರ ಫಲಿತಾಂಶವಾಗಿ, ಜೂನ್ 15 ರಂದು, ಗುಜರಾತ್‌ನಲ್ಲಿ ಸಕ್ರಿಯ ಪ್ರಕರಣಗಳು 10,000 ಕ್ಕಿಂತ ಕಡಿಮೆಯಾಗಿದ್ದವು.

## ಪ್ರಕರಣಗಳ ಸಂಖ್ಯೆ ಜೂನ್ 7 ರ ಹೊತ್ತಿಗೆ 1 ಲಕ್ಷಕ್ಕಿಂತ ಕಡಿಮೆಯಾಯಿತು, ಜೂನ್ 15 ರಂದು 60,000 ಕ್ಕೆ ಇಳಿಕೆ

- ಭಾರತದಲ್ಲಿ ದೈನಂದಿನ ಸೋಂಕು ಪ್ರಕರಣಗಳ ಅಂಕಿಅಂಶಗಳನ್ನು ನೋಡಿದರೆ, ಕೊನೆಯ ಬಾರಿಗೆ ಒಂದು ಲಕ್ಷಕ್ಕೂ ಹೆಚ್ಚು ಸೋಂಕಿತ ರೋಗಿಗಳು ಕಂಡುಬಂದಿದ್ದು ಜೂನ್ 7 ರಂದು. ಜೂನ್ 11 ರಂದು, ಏಳು ದಿನಗಳ ಸರಾಸರಿ ಪ್ರಕರಣಗಳ ಸಂಖ್ಯೆ 67 ದಿನಗಳ ನಂತರ 1 ಲಕ್ಷಕ್ಕಿಂತ ಕಡಿಮೆಯಾಗಿ 95,101 ಕ್ಕೆ ಇಳಿಯಿತು. ಇದು ಮೇ 8 ರಂದು ಅಲೆಯ ಉತ್ತುಂಗದಲ್ಲಿದ್ದ 3.9 ಲಕ್ಷ ಪ್ರಕರಣಗಳ ನಾಲ್ಕನೇ ಒಂದು ಭಾಗಕ್ಕಿಂತ ಕಡಿಮೆ
- ದೈನಂದಿನ ಪಾಸಿಟಿವ್ ದರವು ಜೂನ್ 8 ರಂದು ಶೇ.4.66 ಕ್ಕೆ ಇಳಿದರೆ, ಜೂನ್ 16 ರಂದು ಈ ದರವು ಶೇ.3.48 ಕ್ಕೆ ಇಳಿದಿತ್ತು. ಸತತ ಒಂಬತ್ತನೇ ದಿನದ ದೈನಂದಿನ ಪಾಸಿಟಿವ್ ದರ ಶೇ.5 ಕ್ಕಿಂತ ಕಡಿಮೆಯಾಗಿತ್ತು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಈ ದರವು ಕನಿಷ್ಠ 14 ದಿನಗಳವರೆಗೆ ಶೇ.5 ಕ್ಕಿಂತ ಕಡಿಮೆಯಿದ್ದರೆ, ಕೋವಿಡ್ ಅನ್ನು ನಿಯಂತ್ರಣದಲ್ಲಿದೆ ಎಂದು ಪರಿಗಣಿಸಲಾಗುತ್ತದೆ. 20 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಾಸಿಟಿವ್ ದರ ಶೇ.5 ಕ್ಕಿಂತ ಕಡಿಮೆಯಾಗಿದೆ.

ಭಾರತದಲ್ಲಿ ಚೇತರಿಕೆ ಪ್ರಮಾಣ

**ಶೇ. 95.64**

ಕ್ಕೆ ತಲುಪಿದೆ. ಹಾಗೆಯೇ, ಸಾವಿನ ಪ್ರಮಾಣ ಶೇ.**1.28** ಕ್ಕೆ ಇಳಿದಿದೆ. ದೇಶದಲ್ಲಿ ಕಂಡುಬಂದಿರುವ ಒಟ್ಟು ಪ್ರಕರಣಗಳಲ್ಲಿ ಈಗ ಕೇವಲ ಶೇ.**3.09** ರಷ್ಟು ಸಕ್ರಿಯ ಪ್ರಕರಣಗಳಿವೆ.



## ಹೊಸ ಪ್ರಕರಣಗಳಿಗಿಂತ ಗುಣಮುಖರಾಗುತ್ತಿರುವವರ ಸಂಖ್ಯೆ ಹೆಚ್ಚಳ




# ಲಸಿಕಾ ಅಭಿಯಾನ ವೇಗಗೊಳಿಸಲು ರಾಜ್ಯಗಳಿಗೆ ಉಚಿತ ಲಸಿಕೆಗಳು

- ಕೊರೋನಾ ವಿರುದ್ಧದ ಸಮರದಲ್ಲಿ ಭಾರತವು ವಿಶ್ವದ ಅತಿದೊಡ್ಡ ಲಸಿಕಾ ಅಭಿಯಾನವನ್ನು ನಡೆಸುತ್ತಿದೆ. ಜೂನ್ 15 ರವರೆಗೆ ಭಾರತದಲ್ಲಿ 25 ಕೋಟಿ 90 ಲಕ್ಷ ಜನರಿಗೆ ಲಸಿಕೆ ನೀಡಲಾಗಿದೆ. ಜೂನ್ 15 ರವರೆಗೆ ಸುಮಾರು 29 ಕೋಟಿ ಜನರು ಲಸಿಕೆಗಾಗಿ ನೋಂದಾಯಿಸಿಕೊಂಡಿದ್ದಾರೆ. ಇದರಲ್ಲಿ 18 ರಿಂದ 44 ವರ್ಷದೊಳಗಿನ 12 ಕೋಟಿ 24 ಲಕ್ಷ ಕ್ಕೂ ಹೆಚ್ಚು ಜನರು ಸೇರಿದ್ದಾರೆ. 16 ಕೋಟಿ 68 ಲಕ್ಷಕ್ಕೂ ಹೆಚ್ಚು 45 ವರ್ಷಕ್ಕಿಂತ ಮೇಲ್ಪಟ್ಟವರು ಲಸಿಕೆಗಾಗಿ ನೋಂದಾಯಿಸಿಕೊಂಡಿದ್ದಾರೆ.
- ಲಸಿಕೆ ಕಾರ್ಯಕ್ರಮವನ್ನು ವೇಗಗೊಳಿಸಲು ಪ್ರಧಾನಿ ನರೇಂದ್ರ ಮೋದಿಯವರು ಜೂನ್ 7 ರಂದು ರಾಷ್ಟ್ರವನ್ನು ಉದ್ದೇಶಿಸಿ ಹೊಸ ಲಸಿಕೆ ನೀತಿಯನ್ನು ಘೋಷಿಸಿದರು. ಇದರ ಅಡಿಯಲ್ಲಿ ಜೂನ್ 21 ರಿಂದ ದೇಶದ ಎಲ್ಲ ರಾಜ್ಯಗಳಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲರಿಗೂ ಉಚಿತ ಲಸಿಕೆಗಳನ್ನು ನೀಡಲಾಗುತ್ತಿದೆ.
- ಭಾರತ ಸರ್ಕಾರವು ಒಟ್ಟು ಲಸಿಕೆ ಡೋಸ್ ಗಳಲ್ಲಿ 75 ಪ್ರತಿಶತವನ್ನು ರಾಜ್ಯಗಳಿಗೆ ಉಚಿತವಾಗಿ ನೀಡುತ್ತಿದೆ. ಖಾಸಗಿ ಆಸ್ಪತ್ರೆಗಳು ಶೇ.25 ರಷ್ಟು ಡೋಸ್ ಗಳನ್ನು ಪಡೆಯುತ್ತಿವೆ. ಖಾಸಗಿ ಆಸ್ಪತ್ರೆಗಳು ಸೇವಾ ಶುಲ್ಕವಾಗಿ ಲಸಿಕೆಯ ನಿಗದಿತ ಬೆಲೆಯೊಂದಿಗೆ ಕೇವಲ 150 ರೂ. ಪಡೆಯಬೇಕು. ಮತ್ತೊಂದೆಡೆ, ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದ ಉಪಕರಣಗಳು, ಔಷಧಿಗಳು ಇತ್ಯಾದಿಗಳ ಮೇಲಿನ ಜಿ ಎಸ್ ಟಿ ದರವನ್ನು ಜಿ ಎಸ್ ಟಿ ಮಂಡಳಿ ಕಡಿತ ಮಾಡಿದೆ.

ಪ್ರಧಾನ ಮಂತ್ರಿಯವರ ಪೂರ್ಣ ಭಾಷಣವನ್ನು ಕೇಳಲು ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಹೊಸ ದಾಖಲೆ ಮುಟ್ಟಿದ ಪರೀಕ್ಷೆಗಳು

ಭಾರತವು ಪ್ರತಿದಿನ ನಿರಂತರವಾಗಿ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ. ಎರಡನೇ ಅಲೆಯು ಉತ್ತುಂಗದಲ್ಲಿದ್ದಕ್ಕಿಂತ ಹೆಚ್ಚಿನ ಜನರನ್ನು ನಾವು ಈಗ ಪರೀಕ್ಷಿಸುತ್ತಿದ್ದೇವೆ. ಪ್ರಸ್ತುತ, ದೇಶದ 2600 ಕ್ಕೂ ಹೆಚ್ಚು ಪ್ರಯೋಗಾಲಯಗಳಲ್ಲಿ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.



# ಡಿಜಿಟಲ್ ಇಂಡಿಯಾ

## ನವ ಕ್ರಾಂತಿಯ ಹರಿಕಾರ

ಅದು ರಾಜಕೀಯವೇ ಇರಲಿ, ರಾಜತಾಂತ್ರಿಕತೆಯೇ ಇರಲಿ, ಅಥವಾ ಜನರ ಜೀವನವನ್ನು ಸುಗಮಗೊಳಿಸುವುದೇ ಆಗಿರಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗಿಂತ ಉತ್ತಮವಾಗಿ ಡಿಜಿಟಲ್ ತಂತ್ರಜ್ಞಾನದ ಮಹತ್ವವನ್ನು ಮತ್ತಿನ್ಯಾರು ಅರಿಯಲು ಸಾಧ್ಯ. 2014ರಲ್ಲಿ ಅವರು ದೇಶದ ಚುಕ್ಕಾಣಿ ಹಿಡಿದಾಗಿನಿಂದ ಸರ್ಕಾರದ ಕಾರ್ಯವೈಖರಿ ಮತ್ತು ಆಡಳಿತದಲ್ಲಿ ಹೊಸ ಡಿಜಿಟಲ್ ಯುಗ ಆರಂಭವಾಗಿದೆ. ಪ್ರಧಾನಮಂತ್ರಿ ಮೋದಿ ಅವರು ಸುಗಮ ಜೀವನದೊಂದಿಗೆ ಆರ್ಥಿಕತೆಯನ್ನು ಸಂಪರ್ಕಿಸಲು “ಡಿಜಿಟಲ್ ಇಂಡಿಯಾ’ ಅಭಿಯಾನವನ್ನು 2015ರ ಜುಲೈ 1ರಿಂದ ಆರಂಭಿಸಿದ್ದಾರೆ. ಆಗ ಕೋವಿಡ್ ನಂತಹ ಬಿಕ್ಕಟ್ಟು ತಲೆದೋರುತ್ತದೆ ಮತ್ತು ಡಿಜಿಟಲೀಕರಣ ಜೀವನವನ್ನು ಮತ್ತೆ ಸಹಜ ಸ್ಥಿತಿಗೆ ತರಲು ಒಂದು ಸಾಧನವಾಗುತ್ತದೆ ಎಂದು ಯಾರೂ ಅಂದುಕೊಂಡಿರಲಿಲ್ಲ.

> “ ಕೊರೊನಾ ಸಾಂಕ್ರಾಮಿಕದ ವೇಳೆ, ಡಿಜಿಟಲ್ ತಂತ್ರಜ್ಞಾನ ನಮಗೆ ನಿಭಾಯಿಸಲು, ಸಂಪರ್ಕಿಸಲು, ಆರಾಮದಾಯಕ ಮತ್ತು ಸಾಂತ್ವನ ನೀಡಲು ಸಹಾಯ ಮಾಡಿತು. ಡಿಜಿಟಲ್ ಮಾಧ್ಯಮದ ಮೂಲಕ, ನಾವು ಕಾರ್ಯನಿರ್ವಹಿಸಬಹುದು, ನಮ್ಮ ಪ್ರೀತಿಪಾತ್ರರ ಜೊತೆ ಮಾತನಾಡಬಹುದು ಮತ್ತು ಇತರರಿಗೆ ಸಹಾಯ ಮಾಡಬಹುದು. ಭಾರತದ ಸಾರ್ವತ್ರಿಕ ಮತ್ತು ವಿಶಿಷ್ಟ ಬಯೋಮೆಟ್ರಿಕ್ ಡಿಜಿಟಲ್ ಗುರುತಿನ ವ್ಯವಸ್ಥೆ - ಆಧಾರ್ - ಬಡವರಿಗೆ ಸಮಯೋಚಿತ ಆರ್ಥಿಕ ನೆರವು ನೀಡಲು ಸಹಾಯ ಮಾಡಿತು. ಭಾರತದಲ್ಲಿ ನಾವು ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ತ್ವರಿತ ಸಮಯದಲ್ಲಿ ಎರಡು ಸಾರ್ವಜನಿಕ ಡಿಜಿಟಲ್ ಶಿಕ್ಷಣ ಕಾರ್ಯಕ್ರಮಗಳಾದ ಸ್ವಯಂ ಮತ್ತು ದೀಕ್ಷಾವನ್ನು ಕಾರ್ಯಗತಗೊಳಿಸಲು ಸಾಧ್ಯವಾಯಿತು
>
> -ನರೇಂದ್ರ ಮೋದಿ, ಪ್ರಧಾನ ಮಂತ್ರಿ



ಅದು ಶಿಕ್ಷಣವೇ ಇರಲಿ, ಹಣ ಪಾವತಿಯೇ ಇರಲಿ, ಪಿಂಚಣಿಗೆ ಜೀವತ ಪ್ರಮಾಣಪತ್ರವೇ ಆಗಿರಲಿ ಅಥವಾ ಸರ್ಕಾರದ ಯಾವುದೇ ಯೋಜನೆಗೆ ಅರ್ಜಿ ಸಲ್ಲಿಸುವುದಾಗಿರಲಿ, ಡಿಜಿಟಲೀಕರಣ ಒಂದು ರೂಢಿಯಾಗಿ ಮಾರ್ಪಟ್ಟಿದೆ. ಡಿಜಿಟಲ್ ಇಂಡಿಯಾ ಜನರಿಗೆ ಹೊಸ ರೆಕ್ಕೆ ಮೂಡಿಸುತ್ತಿದ್ದು, ಅವರ ಕನಸುಗಳನ್ನು ಸಾಕಾರಗೊಳಿಸುತ್ತಿದೆ. ಒಂದು ಕಾಲದಲ್ಲಿ ಕೇರಳದ ಎರ್ನಾಕುಲಂ ರೈಲು ನಿಲ್ದಾಣದಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದ ಶ್ರೀನಾಥ್ ಈ ಹೊಸ ಹೆಮ್ಮೆಯ ಬದಲಾವಣೆಗೆ ಜ್ವಲಂತ ಉದಾಹರಣೆಯಾಗಿದ್ದಾರೆ. ಅವರು ತಮ್ಮ ಕೆಲಸ ಮುಂದುವರಿಸುತ್ತಲೇ ಸರ್ಕಾರಿ ಉದ್ಯೋಗದ ಕನಸು ಕಂಡಿದ್ದರು. ತಮ್ಮ ಕಳಪೆ ಆರ್ಥಿಕ ಪರಿಸ್ಥಿತಿಯಿಂದಾಗಿ ಅವರು ರೈಲು ನಿಲ್ದಾಣದಲ್ಲಿ ಡಿಜಿಟಲ್ ಇಂಡಿಯಾ ಅಭಿಯಾನದ ಅಡಿಯಲ್ಲಿ ಅಳವಡಿಸಲಾಗಿದ್ದ ವೈ ಫೈ ಸೌಲಭ್ಯವನ್ನು ಬಳಸಿಕೊಂಡು, ವಿದ್ಯಾಭ್ಯಾಸ ಮಾಡಿದರು. ಶ್ರೀನಾಥ್ ಈಗ ಕೇರಳ ಲೋಕಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ರಾಜಸ್ಥಾನದ ಅಳ್ವರ್ ಜಿಲ್ಲೆಯ ಸ್ನೇಹಲತಾ ಯೋಗಿ ತಾವು ಡಿಜಿಟಲ್ ವಹಿವಾಟು ಪ್ರಾರಂಭಿಸಿದ್ದಷ್ಟೇ ಅಲ್ಲದೆ, 200 ಮಹಿಳೆಯರ ಗುಂಪಿಗೆ ತರಬೇತಿ ನೀಡುವ ಮೂಲಕ 1600 ಕುಟುಂಬಗಳ ಜೀವನವನ್ನು ಸಂಪೂರ್ಣವಾಗಿ ಬದಲಾಯಿಸಿದ್ದಾರೆ.

12ನೇ ತರಗತಿವರೆಗೆ ಓದಿದ್ದ ಲಂಬೋದರ್ ಮಾಝಿಗೆ ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಒಂದು ದಿನ ಅವರು ಯೂಟ್ಯೂಬ್ ನಲ್ಲಿ ಡಿಜಿಟಲ್ ಇಂಡಿಯಾ ಬಗ್ಗೆ ತಿಳಿದುಕೊಂಡರು. ಅವರು ಸಾಮಾನ್ಯ ಸೇವಾ ಕೇಂದ್ರವನ್ನು ಪ್ರಾರಂಭಿಸಿದರು. ಇಂದು ಮಾಝಿ ಸ್ವಾವಲಂಬಿಗಳಾಗಿರುವುದು ಮಾತ್ರವಲ್ಲ, ಈಗ ಅವರು ಉದ್ಯೋಗ ನೀಡುವವರಾಗಿದ್ದಾರೆ - ಅವರ ಕೇಂದ್ರದಲ್ಲಿ 3 ಜನ ಕೆಲಸ ಮಾಡುತ್ತಿದ್ದಾರೆ.

ಇವು ಕೆಲವು ಯಶೋಗಾಥೆಗಳಾಗಿದ್ದು ಇದು ನವ ಭಾರತ ಡಿಜಿಟಲ್ ಆಗುತ್ತಿರುವ ಗಾತ್ರದ ಬಗ್ಗೆ ಮಾತನಾಡುತ್ತದೆ. “ಮನಸ್ಸಿದ್ದರೆ ಮಾರ್ಗ” ಎಂಬ ಗಾದೆ ಡಿಜಿಟಲ್ ಇಂಡಿಯಾದ ಯುಗದಲ್ಲಿ ಕೇವಲ ಸೌಮ್ಯೋಕ್ತಿಯಾಗಿದೆ. ಡಿಜಿಟಲ್ ಶಕ್ತಿ ಈ ಹೊತ್ತಿನ ಅಗತ್ಯವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳುವಂತೆ, “ ಎಂ-ಆಡಳಿತ ಅಥವಾ ಮೊಬೈಲ್ ಆಡಳಿತದ ಮೂಲಕ ಇಡೀ ಸರ್ಕಾರವನ್ನು ಮೊಬೈಲ್ ಫೋನ್ ಮೂಲಕ ಪ್ರವೇಶಿಸಬಹುದು.” ಕೇವಲ ಕಳೆದ ಆರು ವರ್ಷಗಳಲ್ಲಿ ಭಾರತದಲ್ಲಿ ಇಂಟರ್ನೆಟ್ ಬಳಕೆದಾರರ ಸಂಖ್ಯೆ ದುಪ್ಪಟ್ಟಿಗಿಂತ ಹೆಚ್ಚಾಗಿದೆ. 2014ರಲ್ಲಿ ಈ ಸಂಖ್ಯೆ ಸುಮಾರು, 30-35 ಕೋಟಿ ಇತ್ತು, ಈಗ ಅದು 70 ಕೋಟಿಗೆ ತಲುಪಿದೆ. ನಿಸ್ತಂತು ದತ್ತಾಂಶ ಬಳಕೆ 2015 ಮತ್ತು 2020ರ ನಡುವೆ 56 ಪಟ್ಟು ಹೆಚ್ಚಳವಾಗಿದೆ, ಪ್ರತಿ ಜಿಬಿ ದತ್ತಾಂಶದ ಬಳಕೆ ದರ ಶೇ.96ರಷ್ಟು ಇಳಿಕೆಯಾಗಿದೆ. ಭಾರತದ ಸ್ಮಾರ್ಟ್ ಫೋನ್ ಮಾರುಕಟ್ಟೆ ಅಮೆರಿಕವನ್ನೂ ಹಿಂದೆ ತಳ್ಳಿದೆ. ಇಂಟರ್ನೆಟ್ ಬಡವರು ಮತ್ತು ಶ್ರೀಮಂತರ ನಡುವೆ ಯಾವುದೇ ಕಂದಕ ಇಲ್ಲದಂತೆ ಖಾತ್ರಿಪಡಿಸಿದೆ. ಡಿಜಿಟಲ್ ಇಂಡಿಯಾದ ಮಹತ್ವವನ್ನು ಯಾರೇ ಅರ್ಥಮಾಡಿಕೊಳ್ಳಬೇಕಾದರೆ, ಕೇಂದ್ರ ಸರ್ಕಾರದ ಈ ಮಹತ್ವಾಕಾಂಕ್ಷೆ ಯೋಜನೆಯ ಮೂರು ಪ್ರಮುಖ ಸ್ತಂಭಗಳಿವೆ: ಒಂದು, ಪ್ರತಿಯೊಬ್ಬ ನಾಗರಿಕನಿಗೆ ಡಿಜಿಟಲ್ ತಂತ್ರಜ್ಞಾನದ ಮಹತ್ವದ ಬಗ್ಗೆ ಅರಿವು ಮೂಡಿಸುವುದು; ಎರಡನೆಯದಾಗಿ, ಜನರಿಗೆ ಡಿಜಿಟಲ್ ಆಡಳಿತ ಮತ್ತು ಸೇವೆಗಳನ್ನು ಒದಗಿಸುವುದು; ಮತ್ತು ಮೂರನೆಯದಾಗಿ, ಪ್ರತಿಯೊಬ್ಬ ನಾಗರಿಕನನ್ನು ಡಿಜಿಟಲ್

## ಡಿಜಿಟಲ್ ಇಂಡಿಯಾ ಈ ಕೆಳಗಿನ 9 ಕ್ಷೇತ್ರಗಳ ಮೇಲೆ ವಿಶೇಷ ಗಮನ ಹರಿಸಿದೆ:




**01 ಬ್ರಾಡ್ ಬ್ಯಾಂಡ್ ಹೆದ್ದಾರಿಗಳು:** ಗ್ರಾಮಗಳು ಮತ್ತು ನಗರಗಳನ್ನು ಬ್ರಾಡ್ ಬ್ಯಾಂಡ್ ಹೆದ್ದಾರಿಗಳ ಮೂಲಕ ಸಂಪರ್ಕಿಸಲಾಗುತ್ತಿದೆ.

**02 ದೂರವಾಣಿ ಸೇವೆ:** ದೂರವಾಣಿ ಸೇವೆಯ ಪ್ರವೇಶವನ್ನು ಎಲ್ಲ ನಾಗರಿಕರಿಗೆ ಖಾತ್ರಿಪಡಿಸುವುದು.

**03 ಸಾರ್ವಜನಿಕ ಇಂಟರ್ ನೆಟ್ ಪ್ರವೇಶ ಕಾರ್ಯಕ್ರಮ:** ಇಂಟರ್ನೆಟ್ ಸೇವೆಗಳನ್ನು ಸಾರ್ವಜನಿಕ ಇಂಟರ್ನೆಟ್ ಪ್ರವೇಶ ಕಾರ್ಯಕ್ರಮದ ಅಡಿಯಲ್ಲಿ ಒದಗಿಸಲಾಗುತ್ತಿದೆ.

**04 ಇ-ಆಡಳಿತ:** ಇದರ ಅಡಿಯಲ್ಲಿ ತಂತ್ರಜ್ಞಾನದ ಮೂಲಕ ಸರ್ಕಾರದ ಕಾರ್ಯವೈಖರಿ ಮತ್ತು ಆಡಳಿತವನ್ನು ಸುಧಾರಿಸಲಾಗುತ್ತಿದೆ.

**05 ಇ-ಕ್ರಾಂತಿ:** ಇದರಡಿ, ವಿವಿಧ ಸೇವೆಗಳು ಜನರಿಗೆ ವಿದ್ಯುನ್ಮಾನದ ಮೂಲಕ ದೊರೆಯುತ್ತಿದೆ.

**06 ಎಲ್ಲರಿಗೂ ಮಾಹಿತಿ:** ಹೆಸರೇ ಸೂಚಿಸುವಂತೆ, ಎಲ್ಲರಿಗೂ ಮಾಹಿತಿಯನ್ನು ಒದಗಿಸಲಾಗುತ್ತಿದೆ

**07 ಎಲೆಕ್ಟ್ರಾನಿಕ್ಸ್ ಉತ್ಪಾದನೆ:** ಭಾರತದಲ್ಲಿ ಎಲೆಕ್ಟ್ರಾನಿಕ್ ಉತ್ಪನ್ನಗಳ ಬಿಡಿ ಭಾಗಗಳ ಆಮದಿನ ಮೇಲಿನ ಅವಲಂಬನೆಯನ್ನು ತಗ್ಗಿಸುವ ಗುರಿಯನ್ನು ಸರ್ಕಾರ ಹೊಂದಿದೆ.

**08 ಉದ್ಯೋಗಕ್ಕಾಗಿ ಐಟಿ:** ಮಾಹಿತಿ ತಂತ್ರಜ್ಞಾನ ಆಧಾರಿತ ಪ್ರಕ್ರಿಯೆ ಮತ್ತು ಕೆಲಸದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುತ್ತಿದೆ.

**09 ಆರಂಭಿಕ ಕೊಯ್ಲು ಕಾರ್ಯಕ್ರಮ:** ಶಾಲೆಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಹಾಜರಾತಿಗೆ ಇದು ಸಂಬಂಧಿಸಿದೆ.



ರೂಪದಲ್ಲಿ ಸಬಲೀಕರಿಸುವುದು. ಸೇವೆಗಳನ್ನು ಡಿಜಟಲೀಕರಣ ಮಾಡಿ, ಜನರಿಗೆ ಡಿಜಟಲ್ ಸಾಕ್ಷರತೆ ಒದಗಿಸುವುದು ಡಿಜಿಟಲ್ ಇಂಡಿಯಾ ಅಭಿಯಾನದ ಹಿಂದಿನ ಕಲ್ಪನೆಯಾಗಿದೆ.

ಜನರ ಅಗತ್ಯಗಳಿಗೆ ಆನ್ ಲೈನ್ ಪರಿಹಾರ ಒದಗಿಸಲು ಭಾರತವನ್ನು ಒಂದು ಡಿಜಿಟಲ್ ಆರ್ಥಿಕತೆಯಾಗಿ ಪರಿವರ್ತಿಸುವುದು ಡಿಜಿಟಲ್ ಇಂಡಿಯಾ ಅಭಿಯಾನದ ಉದ್ದೇಶವಾಗಿದೆ. ಈ ಕಾರ್ಯಕ್ರಮದ ಮುಖ್ಯ ಗಮನಾರ್ಹ ಕ್ಷೇತ್ರಗಳು ‘ಸುಗಮ ವಾಣಿಜ್ಯ’ ಮತ್ತು ‘ಆರ್ಟಿಫಿಶಿಯಲ್ ಇಂಟಲಿಜೆನ್ಸ್’ ಆಗಿದೆ. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ದೇಶದ ಭದ್ರತೆಗೆ ಭೀತಿ ಒಡ್ಡುತ್ತವೆ ಎನ್ನಲಾದ ಹಲವು ವಿದೇಶೀ ಆಪ್ ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಆತ್ಮ ನಿರ್ಭರ ಭಾರತ ಆಪ್ ಹೊಸ ಶೋಧಗಳ ಸವಾಲನ್ನು ಕೂಡ ಡಿಜಿಟಲ್ ಇಂಡಿಯಾ ಅಡಿ ಆರಂಭಿಸಲಾಗಿದ್ದು, ಭಾರತೀಯ ಐಟಿ ವೃತ್ತಿಪರರ ಆಶೋತ್ತರಗಳಿಗೆ ಗರಿ ಮೂಡಿಸಿದೆ. ಇದು ಫಲಿತಾಂಶವನ್ನೂ ನೀಡುತ್ತಿದೆ.

ದೇಶದ ಅಭಿವೃದ್ಧಿಗೆ ಹೆಚ್ಚಿನ ಮಾನವ –ಕೇಂದ್ರಿತ ದೃಷ್ಟಿಕೋನವನ್ನು ಒದಗಿಸುತ್ತಿರುವ ಡಿಜಿಟಲ್ ಇಂಡಿಯಾಗೆ ಧನ್ಯವಾದಗಳು. ಇಷ್ಟು ದೊಡ್ಡ ಪ್ರಮಾಣದಲ್ಲಿ ತಂತ್ರಜ್ಞಾನದ ಬಳಕೆಯು ನಮ್ಮ ನಾಗರಿಕರ ಬದುಕಿನಲ್ಲಿ ಹಲವಾರು ಧನಾತ್ಮಕ ಬದಲಾವಣೆಗಳನ್ನು ತಂದಿದೆ. ಇಂದು, ಮಾನವ ಘನತೆಯ ಪರಿಕಲ್ಪನೆಯು ತಂತ್ರಜ್ಞಾನಕ್ಕೆ ಬೇರ್ಪಡಿಸಲಾಗದ ರೀತಿಯಲ್ಲಿ ಬೆಸೆದುಕೊಂಡಿದೆ.

ಕೋಟ್ಯಂತರ ರೈತರು ಕೇವಲ ಒಂದು ಕ್ಲಿಕ್ ನಲ್ಲಿ ಆರ್ಥಿಕ ನೆರವು ಪಡೆದುಕೊಳ್ಳುತ್ತಾರೆ. ಕೊರೊನಾ ಹಿನ್ನೆಲೆಯಲ್ಲಿ ಘೋಷಿಸಲಾಗಿದ್ದ ಲಾಕ್ ಡೌನ್ ವೇಳೆ ಬಡವರು ಪ್ರಾಮಾಣಿಕವಾಗಿ ಮತ್ತು ಸೂಕ್ತವಾಗಿ ಪರಿಹಾರವನ್ನು ಪಡೆದುಕೊಂಡಿದ್ದನ್ನು ತಂತ್ರಜ್ಞಾನ ಖಾತ್ರಿಪಡಿಸಿತು. ಇಂದು ಭಾರತದ ಗುಡ್ಡಗಾಡು ಪ್ರದೇಶದ ದೂರದ ಹಳ್ಳಿಯೊಂದರಲ್ಲಿ ವಾಸಿಸುವ ತಾಯಿಗೆ ತನ್ನ ಮಗುವಿನ ಆರೈಕೆಗೆ ಉತ್ತಮ ಆಯ್ಕೆಗಳಿವೆ. ದೂರದ ಗ್ರಾಮಗಳಲ್ಲಿ ವಾಸಿಸುವ ಮಕ್ಕಳಿಗೂ ಶಿಕ್ಷಣದ ಉತ್ತಮ ಅವಕಾಶಗಳಿವೆ. ಒಬ್ಬ ಸಣ್ಣ ರೈತ ತನ್ನ ಕೃಷಿ ಮತ್ತು ಮಾರುಕಟ್ಟೆಯಲ್ಲಿ ಉತ್ತಮ ದರದ ಬಗ್ಗೆ ಹೆಚ್ಚು ವಿಶ್ವಾಸಭರಿತನಾಗಿದ್ದಾನೆ.

ಇದಷ್ಟೇ ಅಲ್ಲ, ಕೆಲವೇ ತಿಂಗಳುಗಳಲ್ಲಿ ಹಲವು ಲಕ್ಷ ಬ್ಯಾಂಕ್ ಖಾತೆಗಳನ್ನು ತರೆದಿದ್ದು ಬಡವರಿಗೆ ಸವಲತ್ತಿನ ನೇರ ವರ್ಗಾವಣೆಗೆ, ಆರ್ಥಿಕ ಅಗತ್ಯಗಳಿಗೆ ನಿಧಿ ಒದಗಿಸಲು, ಬಡವರಿಗೆ ವಿಮೆ ಮತ್ತು ಎಲ್ಲ ವೃದ್ಧರಿಗೆ ಪಿಂಚಣಿ ಒದಗಿಸಲು ಡಿಜಿಟಲ್ ಇಂಡಿಯಾದಿಂದ ಸಾಧ್ಯವಾಗಿದೆ.

ಮಿಗಿಲಾಗಿ, ಹಲವು ಹೊಸ ಅವಕಾಶಗಳು ಮಾಹಿತಿ, ಶಿಕ್ಷಣ, ಸ್ವಯಂ ಆರೈಕೆ, ಹಣಕಾಸು ಪೂರಣ, ಸಣ್ಣ ಮತ್ತು ಗ್ರಾಮೋದ್ಯೋಗ, ನೈಸರ್ಗಿಕ ಸಂಪನ್ಮೂಲದ ಸಂರಕ್ಷಣೆ, ಶುದ್ಧ ಇಂಧನ ಮೊದಲಾದ ಕ್ಷೇತ್ರಗಳಲ್ಲಿ ತೆರೆದುಕೊಂಡಿರುವುದು ಉಲ್ಲೇಖಾರ್ಹವಾಗಿದೆ. ಇದು ಆಡಳಿತದಲ್ಲಿ ಬದಲಾವಣೆಯನ್ನು ತಂದಿದ್ದು, ಅದು ಹೆಚ್ಚು ಪಾರದರ್ಶಕ, ಜವಾಬ್ದಾರಿಯುತ, ಪ್ರವೇಶಾವಕಾಶ ಮತ್ತು ಭಾಗವಹಿಸುವಿಕೆಯಾಗಿದೆ. ಹೀಗಾಗಿ, ಡಿಜಿಟಲ್ ಇಂಡಿಯಾ ಮೂಲಸೌಕರ್ಯಗಳ ರಚನೆಯಿಂದ ಹಿಡಿದು ಸೇವೆಗಳವರೆಗೆ, ಉತ್ಪನ್ನಗಳ ಉತ್ಪಾದನೆಯಿಂದ ಹಿಡಿದು ಮಾನವ ಸಂಪನ್ಮೂಲ ಅಭಿವೃದ್ಧಿಯವರೆಗೆ, ಸರ್ಕಾರಗಳಿಗೆ ಸಹಾಯ ಮಾಡುವುದರಿಂದ ಹಿಡಿದು ನಾಗರಿಕರನ್ನು ಸಬಲೀಕರಣಗೊಳಿಸುವವರೆಗೆ ಮತ್ತು ಡಿಜಿಟಲ್ ಸಾಕ್ಷರತೆಯನ್ನು ಉತ್ತೇಜಿಸುವವರೆಗಿನ ಅವಕಾಶಗಳ ವಿಶಾಲ ಸೈಬರ್ ಪ್ರಪಂಚವಾಗಿ ಮಾರ್ಪಟ್ಟಿದೆ. ಉದ್ಯೋಗ ಮತ್ತು ಆದಾಯವನ್ನು ಗಳಿಸುವಲ್ಲಿ ಭಾರತೀಯ ಯುವಕರಿಗೆ ಡಿಜಿಟಲ್ ಇಂಡಿಯಾ ವರದಾನವಾಗಿ ಹೊರಹೊಮ್ಮಿದೆ. ■

## ಡಿಜಿಟಲ್ ಸ್ವಾವಲಂಬನೆಯತ್ತ ...

**ನಾವು ಆತ್ಮನಿರ್ಭರ ಭಾರತದ ಬಗ್ಗೆ ಮಾತನಾಡುವಾಗ, ಇದು ಕೇವಲ ಆರ್ಥಿಕ ಸ್ವಾವಲಂಬನೆ ಮಾತ್ರವೇ ಅಲ್ಲ. ಡಿಜಿಟಲ್ ಸ್ವಾವಲಂಬನೆಯು ಭಾರತವನ್ನು ಸ್ವಾವಲಂಬನೆಯತ್ತ ತೆಗೆದುಕೊಂಡು ಹೋಗಲು ಮಹತ್ವದ ಕೊಡುಗೆ ನೀಡುತ್ತದೆ.**

**2039**

ಉಮಂಗ್ ಆಪ್ ನಲ್ಲಿ ಈಗ 13 ಭಾಷೆಗಳಲ್ಲಿ ಸೇವೆ ಮತ್ತು ಬಿಲ್ ಪಾವತಿ ಸೌಲಭ್ಯ ಲಭ್ಯವಿದೆ. 3.75 ಕೋಟಿ ಡೌನ್ ಲೋಡ್ ನೊಂದಿಗೆ 25 ಕೋಟಿ ನೋಂದಾಯಿತ ಬಳಕೆದಾರರಿದ್ದಾರೆ.

ಈ ವೇದಿಕೆಯಲ್ಲಿ ಕೇಂದ್ರ ಮತ್ತು ರಾಜ್ಯದ ಇತರ ಸೇವೆಗಳನ್ನೂ ತರುವ ಪ್ರಯತ್ನಗಳು ನಡೆದಿವೆ.

ಭಾರತ **1** ಟ್ರಿಲಿಯನ್ ಡಾಲರ್ ಡಿಜಿಟಲ್ ಆರ್ಥಿಕರಾಷ್ಟ್ರವಾಗುವತ್ತ ಸಾಗಿದೆ

2025ರ ಹೊತ್ತಿಗೆ **5.5-6** ಕೋಟಿ ಉದ್ಯೋಗಾವಕಾಶಗಳ ಸಂಭವನೀಯತೆ ಇದೆ.

ಭಾರತ ಸರ್ಕಾರದ ಡಿಜಿಟಲ್ ಇಂಡಿಯಾ ಯೋಜನೆ ಅಡಿಯಲ್ಲಿ ಇಂಟರ್ನೆಟ್ ಈಗ ದೂರದ ಹಳ್ಳಿಗಳನ್ನೂ ತಲುಪುತ್ತಿದೆ. ಮಾಧ್ಯಮ ವರದಿಗಳ ಪ್ರಕಾರ, ಚೀನಾ ಮತ್ತು ನೇಪಾಳದ ಪಕ್ಕದಲ್ಲಿರುವ ಪಿಥೋರಗಢದಲ್ಲಿ ಈವರೆಗೆ ಫೋನ್ ಮತ್ತು ಇಂಟರ್ನೆಟ್ ಸೇವೆ ಇಲ್ಲದ ಪ್ರದೇಶಗಳನ್ನು ವಿ.ಸ್ಯಾಟ್ ಮೂಲಕ ಡಿಜಿಟಲ್ ಜಗತ್ತಿಗೆ ಸಂಪರ್ಕಿಸಲಾಗುತ್ತಿದೆ.

ಬ್ಯಾಂಕ್ ಸೇವೆಗಳು ಈಗ ಮುಖಾಮುಖಿರಹಿತವಾಗಿವೆ, ಸಂಪರ್ಕರಹಿತ ಮತ್ತು ನಗದು ರಹಿತ ಆಗಿವೆ, ಮತ್ತು ಯುಪಿಐ ಮೂಲಕ 24x7 ಕಾರ್ಯ ನಿರ್ವಹಿಸುತ್ತವೆ. 170ಕ್ಕೂ ಹೆಚ್ಚು ಬ್ಯಾಂಕುಗಳು ಭೀಮ್ ಆಪ್ ಸಂಪರ್ಕಿತವಾಗಿದ್ದು, ಇದು ವಹಿವಾಟಿನ ಹೊಸ ದಾಖಲೆಯನ್ನು ಸೃಷ್ಟಿಸುತ್ತಿದೆ. ರೂಪೆ ಕಾರ್ಡ್ ಈಗ ಬಡವರು, ರೈತರು, ಮಧ್ಯಮ ವರ್ಗದವರು ಮತ್ತು ದೇಶದ ಪ್ರತಿಯೊಂದು ವರ್ಗದವರ ನೆಚ್ಚಿನ ಕಾರ್ಡ್ ಆಗಿ ಮಾರ್ಪಟ್ಟಿದೆ. ಡಿಬಿಟಿ, ಜನ್ ಧನ್-ಆಧಾರ್-ಮೊಬೈಲ್ ಮೂಲಕ ಲಕ್ಷಾಂತರ ಫಲಾನುಭವಿಗಳಿಗೆ ಅಗತ್ಯ ನೆರವು ನೀಡಲು ಸಾಧ್ಯವಾಗಿದೆ. 2020ರಲ್ಲಿ ಡಿಜಿಟಲ್ ವಹಿವಾಟಿನಲ್ಲಿ ಭಾರತ ವಿಶ್ವದಲ್ಲೇ ಪ್ರಥಮ ಸ್ಥಾನ ಪಡೆದಿದೆ.

## ಪರಿವರ್ತನೆಯ ಹಾದಿಯಲ್ಲಿ
# ಹೊಸ ಹೆಜ್ಜೆ

ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಅಭಿಯಾನ: ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಅಭಿಯಾನದ ಅಡಿಯಲ್ಲಿ, ಪ್ರತಿಯೊಬ್ಬ ಭಾರತೀಯರಿಗೂ ಆರೋಗ್ಯದ ಕಾರ್ಡ್ ನೀಡಲಾಗುತ್ತದೆ. ಈ ಕಾರ್ಡ್ ರೋಗಿಗೆ ನಡೆಸಿದ ಪರೀಕ್ಷಾ ವರದಿಗಳು, ಕಾಯಿಲೆ, ವೈದ್ಯರ ಹೆಸರು, ಔಷಧಿಗಳನ್ನು ಪಡೆಯುವ ಸಮಯವನ್ನು ಒಳಗೊಂಡಿರುತ್ತದೆ.

ಗ್ರಾಮಗಳಲ್ಲೂ ಆಪ್ಟಿಕಲ್ ಫೈಬರ್ ನೆಟ್‌ವರ್ಕ್: ಈ ಯೋಜನೆ ಅಡಿಯಲ್ಲಿ, ದೇಶದ ಆರು ಲಕ್ಷ ಗ್ರಾಮಗಳನ್ನು ಆಪ್ಟಿಕಲ್ ಫೈಬರ್ ಕೇಬಲ್ ಮೂಲಕ 1000 ದಿನಗಳಲ್ಲಿ ಸಂಪರ್ಕಿಸುವ ಗುರಿಹೊಂದಲಾಗಿದೆ. 2014ಕ್ಕೆ ಮುನ್ನ ದೇಶದ 59 ಪಂಚಾಯ್ತಿಗಳನ್ನು ಮಾತ್ರ ಆಪ್ಟಿಕಲ್ ಫೈಬರ್ ಕೇಬಲ್ ಮೂಲಕ ಸಂಪರ್ಕಿಸಲಾಗಿತ್ತು. ಆದರೆ ಈವರೆಗೆ 1.58 ಲಕ್ಷ ಗ್ರಾಮಗಳನ್ನು ಆಪ್ಟಿಕಲ್ ಫೈಬಲ್ ನಿಂದ ಸಂಪರ್ಕಿಸಲಾಗಿದೆ.

ನೂತನ ಸೈಬರ್ ಭದ್ರತೆ ನೀತಿ: ದೇಶದಲ್ಲಿ ಹೊಸ ರಾಷ್ಟ್ರೀಯ ಸೈಬರ್ ಭದ್ರತೆ ಕಾರ್ಯತಂತ್ರವನ್ನು ರೂಪಿಸಲಾಗಿದೆ. ಭಾರತ ಈ ಭೀತಿಗಳನ್ನು ಎದುರಿಸಲು ಸಜ್ಜಾಗಿದ್ದು, ಹೊಸ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಸದ್ಯದಲ್ಲೇ ನೂತನ ಸೈಬರ್ ಭದ್ರತೆ ನೀತಿಯನ್ನು ಜಾರಿ ಮಾಡಲಾಗುತ್ತದೆ.

ಲಕ್ಷದ್ವೀಪಕ್ಕೆ ಅಂತರ್ಜಾಲ ಸಂಪರ್ಕ: ಲಕ್ಷದ್ವೀಪವನ್ನು ಜಲಾಂತರ್ಗಾಮಿ ಆಪ್ಟಿಕಲ್ ಫೈಬರ್ ಕೇಬಲ್ ನೊಂದಿಗೆ ಸಂಪರ್ಕಿಸಲಾಗುತ್ತಿದೆ. ನಮ್ಮ ದೇಶದಲ್ಲಿ 1300ಕ್ಕೂ ಹೆಚ್ಚು ದ್ವೀಪಗಳಿವೆ. ಈ ಕೆಲವು ಆಯ್ದ ದ್ವೀಪಗಳನ್ನು, ಅವುಗಳ ಭೌಗೋಳಿಕ ಸ್ಥಳ ಮತ್ತು ದೇಶದ ಅಭಿವೃದ್ಧಿಯಲ್ಲಿ ಅವುಗಳ ಪ್ರಾಮುಖ್ಯವನ್ನು ಪರಿಗಣಿಸಿ, ಹೊಸ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸುವ ಕಾರ್ಯ ನಡೆಯುತ್ತಿದೆ.

ಡಿಜಿಟಲ್ ಗ್ರಾಮಗಳು
ದೇಶದ ಒಂದು ಲಕ್ಷ ಗ್ರಾಮಗಳನ್ನು ಡಿಜಿಟಲ್ ಗ್ರಾಮಗಳಾಗಿ ಮಾಡಲಾಗಿದ್ದು, ಇಲ್ಲಿ ಎಲ್ಲ ಆಧುನಿಕ ಸೌಲಭ್ಯಗಳೂ ದೊರೆಯುವಂತೆ ಮಾಡಲಾಗುತ್ತಿದೆ. ಇಂತಹ ಗ್ರಾಮಗಳಲ್ಲಿ ಎ.ಟಿ.ಎಂ., ಇಂಟರ್ನೆಟ್, ಡೆಬಿಟ್ ಕಾರ್ಡ್ ನಿಂದ ಪಾವತಿ ವ್ಯವಸ್ಥೆ ಮತ್ತು ಅಂಗಡಿಗಳಲ್ಲಿ ಡಿಜಿಟಲ್ ವ್ಯಾಲೆಟ್ ಇರುತ್ತದೆ. ಸರ್ಕಾರವು ಮಿನಿ ಬ್ಯಾಂಕ್, ಮಿನಿ ಎಟಿಎಂ, ಹೋಟೆಲ್ ಕಾಯ್ದಿರಿಸುವಿಕೆ, ಮೊಬೈಲ್ ಫೋನ್ ಗಳು ಮತ್ತು ಡಿಟಿಎಚ್ ರೀಚಾರ್ಜ್, ಮೊಬೈಲ್ ವೈಫೈ – ಹಾಟ್ ಸ್ಪಾಟ್ ಇತ್ಯಾದಿಯನ್ನು ಈ ಗ್ರಾಮಗಳಲ್ಲಿ ಒದಗಿಸುತ್ತಿದೆ.

ಡಿಜಿಸೇವಕ್
ಡಿಜಿ ಸೇವಕ್ ದೇಶದ ನಾಗರಿಕರಿಗೆ ಆನ್ ಲೈನ್ ಸ್ವಯಂ ಸೇವೆ ಒದಗಿಸುವ ವೇದಿಕೆಯಾಗಿದೆ. ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳು ಈ ವೇದಿಕೆಯಡಿ ಸ್ವಯಂ ಸೇವಕರಿಗೆ ಉದ್ಯೋಗ ಒದಗಿಸುತ್ತವೆ ಮತ್ತು ಅವರು ತಮ್ಮ ಆಸಕ್ತಿ ಮತ್ತು ಕೌಶಲದ ಆಧಾರದ ಮೇಲೆ ಕೆಲಸವನ್ನು ಆಯ್ಕೆ ಮಾಡಿಕೊಳ್ಳಬಹುದು.

- ಪ್ರಧಾನಮಂತ್ರಿ ಡಿಜಿಟಲ್ ಸಾಕ್ಷರತಾ ಅಭಿಯಾನದ ಅಡಿಯಲ್ಲಿ ಆರು ಕೋಟಿ ಜನರನ್ನು ಡಿಜಿಟಲ್ ಸಾಕ್ಷಕರನ್ನಾಗಿ ಮಾಡಲಾಗುತ್ತಿದೆ. ಇದರ ಅಡಿಯಲ್ಲಿ, ದೇಶಾದ್ಯಂತ ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಧಿಕೃತ ಪಡಿತರ ಮಾರಾಟಗಾರರಲ್ಲದೆ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರಿಗೆ ಸಾಮಾನ್ಯ ಮಾಹಿತಿ ತಂತ್ರಜ್ಞಾನದ ಅರಿವು ಮತ್ತು ತರಬೇತಿಯನ್ನು ನೀಡಲಾಗುತ್ತಿದ್ದು, ಇದರಿಂದಾಗಿ 'ಸಾಂಪ್ರದಾಯಿಕ ಆರ್ಥಿಕತೆ'ಯಿಂದ ಡಿಜಿಟಲ್ ಆರ್ಥಿಕತೆ'ಗೆ ಪರಿವರ್ತನೆ ವೇಗವಾಗುತ್ತದೆ.
- ಡಿಜಿಟಲ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಲಾದ ಮೈ ಗೌ ಮೊಬೈಲ್ ಆಪ್ ಜನರಿಗೆ ತಮ್ಮ ಅನಿಸಿಕೆಗಳು ಮತ್ತು ಸಮಾಜದ ಹಾಗೂ ಇಡೀ ದೇಶದ ವಿವಿಧ ಸಮಸ್ಯೆಗಳು ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದ ಸಲಹೆಗಳು ಮತ್ತು ಪ್ರಸ್ತಾಪಗಳನ್ನು ಹಂಚಿಕೊಳ್ಳಲು ಸಹಾಯ ಮಾಡುತ್ತದೆ.
- ಡಿಜಿಟಲ್ ಇಂಡಿಯಾ ಕಾರ್ಯಕ್ರಮವು ವಿವಿಧ ಉಪಕ್ರಮಗಳಾದ ಆಧಾರ್, ನೇರ ಸವಲತ್ತು ವರ್ಗಾವಣೆ, ಸಾಮಾನ್ಯ ಸೇವಾ ಕೇಂದ್ರಗಳು, ಡಿಜಿಲಾಕರ್, ಮೊಬೈಲ್ ಆಧಾರಿತ ಉಮಂಗ್ ಸೇವಾ, ಮೈಗೌ ಮೂಲಕ ಆಡಳಿತದಲ್ಲಿ ಪಾಲ್ಗೊಳ್ಳುವುದು, ಆಯುಷ್ಮಾನ್ ಭಾರತ್, ಇ-ಆಸ್ಪತ್ರೆ, ಪಿ.ಎಂ. ಕಿಸಾನ್, ಇ-ನಾಮ್, ಮಣ್ಣಿನ ಆರೋಗ್ಯ ಕಾರ್ಡ್, ಸ್ವಯಂ ಪ್ರಭಾ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್, ಇ-ಪಾಠಶಾಲಾ ಇತ್ಯಾದಿ ಮೂಲಕ ಭಾರತೀಯ ನಾಗರಿಕರ ಜೀವನದ ಎಲ್ಲ ಆಯಾಮಗಳ ಮೇಲೆ ಧನಾತ್ಮಕವಾಗಿ ಪ್ರಭಾವ ಬೀರಿದೆ.
- ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಸಮುದ್ರದೊಳಗಿನ ಆಪ್ಟಿಕಲ್ ಫೈಬರ್ ಕೇಬಲ್ ಸಂಪರ್ಕವು 4 ಜಿ ಮೊಬೈಲ್ ಸೇವೆ, ಟೆಲಿ –ಶಿಕ್ಷಣ, ಟೆಲಿ-ಆರೋಗ್ಯ, ಇಆಡಳಿತ ಮತ್ತು ದ್ವೀಪ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುತ್ತದೆ. ಸುಮಾರು 1,224 ಕೋಟಿ ರೂ.ಗಳನ್ನು ಇದಕ್ಕಾಗಿ ವೆಚ್ಚ ಮಾಡಲಾಗಿದೆ.
- ಹಲವು ಸರ್ಕಾರಿ ಸೇವೆಗಳ ಡಿಜಿಯಲ್ ಸೌಲಭ್ಯಗಳಾದ ಪ್ರಮಾಣಪತ್ರ, ಪರವಾನಗಿ, ಆಧಾರ್ ಕಾರ್ಡ್, ಪಾಸ್ ಪೋರ್ಟ್, ಬ್ಯಾಂಕಿಂಗ್, ಪಿಂಚಣಿ ಇತ್ಯಾದಿ 3.74 ಲಕ್ಷ ಸಾಮಾನ್ಯ ಸೇವಾ ಕೇಂದ್ರ (ಸಿಎಸ್.ಇ.)ಗಳಲ್ಲಿ ಲಭ್ಯವಿದೆ.

### ಕೋವಿಡ್ ಸಾಂಕ್ರಾಮಿಕದ ವೇಳೆ ಮಹತ್ವದ ಪಾತ್ರ ವಹಿಸಿದ ಡಿಜಿಟಲ್ ಇಂಡಿಯಾ

ಆರೋಗ್ಯ ಸೇತು ಆಪ್ ಮತ್ತು ಟೆಲಿಮೆಡಿಸನ್ ಸೇವೆ - ಇ. ಸಂಜೀವಿನಿ, ಡಿಜಿಟಲ್ ಇಂಡಿಯಾ ಕಾರ್ಯಕ್ರಮದಿಂದ ಕಾರ್ಯ ಸಾಧ್ಯವಾಗಿದೆ ಎಂಬುದು ಇಂದು ಪ್ರತಿಯೊಬ್ಬರಿಗೂ ತಿಳಿದಿದೆ. ಆರೋಗ್ಯ ಸೇತು ವಿಶ್ವದಲ್ಲೇ ಅತಿ ಹೆಚ್ಚು ಡೌನ್ ಲೋಡ್ ಮಾಡಲಾದ ಸೋಂಕು ಪತ್ತೆ ಆಪ್ ಆಗಿದ್ದರೆ, ಇ- ಸಂಜೀವಿನಿ ಮನೆಯಲ್ಲೇ ಕುಳಿತ ಲಕ್ಷಾಂತರ ರೋಗಿಗಳಿಗೆ ಪರಿಹಾರ ಒದಗಿಸುವ ಕಾರ್ಯ ಮಾಡಿದೆ. ಡಿಜಿಟಲ್ ಇಂಡಿಯಾ ಅಡಿ ಆರಂಭವಾದ ಮೈಗೌ ಅಂತರ್ಜಾಲತಾಣ ಗ್ರಾಫಿಕ್ ಮತ್ತು ವಿಡಿಯೋ ಮೂಲಕ ಕೊರೊನಾ ಸಾಂಕ್ರಾಮಿಕದ ವೇಳೆ ವಿಶೇಷ ಜಾಗೃತಿ ಅಭಿಯಾನ ನಡೆಸಿದೆ.

**ಸಚಿವ ಸಂಪುಟದ ನಿರ್ಣಯಗಳು**

# ರೈತರ ಹಿತದೃಷ್ಟಿಯಿಂದ ಎಂ.ಎಸ್.ಪಿ. ಹೆಚ್ಚಳ, ರೈಲ್ವೆಯಲ್ಲಿ 'ಸಾರ್ವಜನಿಕ ಸುರಕ್ಷತೆ' ಖಾತ್ರಿಗೆ ಅತ್ಯಾಧುನಿಕ ವ್ಯವಸ್ಥೆ



ಮುಂಗಾರು ಹಂಗಾಮು ಪ್ರಾರಂಭವಾಗುವ ಮೊದಲೇ ಎಂ.ಎಸ್.ಪಿ.ಯನ್ನು ಹೆಚ್ಚಿಸುವುದಾಗಿರಲಿ ಅಥವಾ ರೈತರ ಅನುಕೂಲಕ್ಕಾಗಿ ಯೂರಿಯಾವನ್ನು ಸುಸ್ಥಿರವಾಗಿ ಪೂರೈಸುವುದಾಗಿರಲಿ, ಅಥವಾ ಮುಖಾಮುಖಿ ಮತ್ತು ರೈಲು-ಅಪಘಾತಗಳನ್ನು ತಪ್ಪಿಸಲು ಅಥವಾ ಅತ್ಯಾಧುನಿಕ ಸಂವಹನ ಸೌಲಭ್ಯಗಳೊಂದಿಗೆ ದೇಶದ ರೈಲುಗಳನ್ನು ಸಜ್ಜುಗೊಳಿಸುವುದಾಗಿರಲಿ ಅಥವಾ ಮಾದರಿ ಬಾಡಿಗೆ ಕಾಯಿದೆ ಮೂಲಕ ಸುರಕ್ಷಿತ ವಸತಿ ಸೌಕರ್ಯವನ್ನು ಒದಗಿಸಲಾಗಿರಲಿ, ಇದನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಳ್ಳಲು ಕಳುಹಿಸಲಾಗಿದೆ, ಕೇಂದ್ರ ಸಚಿವ ಸಂಪುಟ ತನ್ನ ಇತ್ತೀಚಿನ ಸಭೆಗಳಲ್ಲಿ ಜನರ ಅನುಕೂಲಕ್ಕಾಗಿ ಹಲವಾರು ನಿರ್ಣಯಗಳನ್ನು ತೆಗೆದುಕೊಂಡಿದೆ.

## ನಿರ್ಣಯ 1

ರೈತರಿಗೆ ಅವರ ಉತ್ಪನ್ನಗಳಿಗೆ ಲಾಭದಾಯಕ ಬೆಲೆಯನ್ನು ಖಾತ್ರಿಪಡಿಸಲು ಮತ್ತು ಅವರ ಆದಾಯ ಹೆಚ್ಚಿಸಲು, ಸರ್ಕಾರ 2021-22ನೇ ಹಂಗಾಮಿನ ಮುಂಗಾರು ಬೆಳೆಗಳ ಎಂ.ಎಸ್.ಪಿ.ಯನ್ನು ಹೆಚ್ಚಳ ಮಾಡಿದೆ.

ಪರಿಣಾಮ: ಸರ್ಕಾರ ವೆಚ್ಚದ ಮೇಲೆ ಶೇಕಡ 50ರಷ್ಟು ಸೇರಿಸಿ ಎಂ.ಎಸ್.ಪಿ. ನೀಡುವ ಕಾರಣ ಇದು ರೈತರಿಗೆ ಅವರು ಮಾಡಿದ ವೆಚ್ಚದ ಮೇಲೆ ಶೇ.50ರಿಂದ 65ರವರೆಗೆ ಹೆಚ್ಚಿನ ಪ್ರತಿಫಲ ನೀಡುತ್ತದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಎಳ್ಳಿನ ಮೇಲೆ ಅತಿ ಹೆಚ್ಚು ಅಂದರೆ ಪ್ರತಿ ಕ್ವಿಂಟಾಲ್ ಗೆ ರೂ. 452, ಕಪ್ಪು ಉದ್ದಿನ ಕಾಳು ಮತ್ತು ತೊಗರಿಕಾಯಿ ಕಾಳಿನ ಮೇಲೆ ಪ್ರತಿ ಕ್ವಿಂಟಾಲ್ ಗೆ 300 ರೂ. ಹೆಚ್ಚಿಸಲು ಶಿಫಾರಸು ಮಾಡಲಾಗಿದೆ. ಕಡಲೆಕಾಯಿಬೀಜ ಮತ್ತು ಹುಚ್ಚೆಳ್ಳಿಗೆ ಸಂಬಂಧಿಸಿದಂತೆ ಪ್ರತಿ ಕ್ವಿಂಟಾಲ್ ಗೆ ಕಳೆದ ವರ್ಷಕ್ಕಿಂತ ಅನುಕ್ರಮವಾಗಿ 275 ರೂ. ಮತ್ತು 235 ರೂ. ಹೆಚ್ಚಿಸಲಾಗಿದೆ. ಬೆಳೆ ವೈವಿಧ್ಯಕ್ಕೆ ಉತ್ತೇಜನ ನೀಡಲು ಈ ವ್ಯತ್ಯಾಸ ಮಾಡಲಾಗಿದೆ.

| ಬೆಳೆ | ಎಂ.ಎಸ್.ಪಿ 2020-21 | ಎಂ.ಎಸ್.ಪಿ. 2021-22 | ಉತ್ಪಾದನಾ ವೆಚ್ಚ 2021-22 ಪ್ರತಿ ಕ್ವಿಂಟಾಲ್ ಗೆ) | ಎಂ.ಎಸ್.ಪಿ. ಯಲ್ಲಿನ ಹೆಚ್ಚಳ | ಎಂ.ಎಸ್.ಪಿ. ಯಲ್ಲಿನ ಹೆಚ್ಚಳ |
|---|---|---|---|---|---|
| ಭತ್ತ (ಸಾಮಾನ್ಯ) | 1868 | 1940 | 1293 | 72 | 50 |
| ಭತ್ತ (ದರ್ಜೆ 1) | 1888 | 1960 | - | 72 | - |
| ಜೋಳ (ಹೈಬ್ರೀಡ್) | 2620 | 2738 | 1825 | 118 | 50 |
| ಜೋಳ (ಮಾಲ್ದಾಂಡಿ) | 2640 | 2758 | - | 118 | - |
| ನವಣೆ | 2150 | 2250 | 1213 | 100 | 85 |
| ರಾಗಿ | 3295 | 3377 | 2251 | 82 | 50 |
| ಮೆಕ್ಕೆಜೋಳ | 1850 | 1870 | 1246 | 20 | 50 |
| ತೊಗರಿ (ಅರ್ಹರ್) | 6000 | 6300 | 3886 | 300 | 62 |
| ಹೆಸರು | 7196 | 7275 | 4850 | 79 | 50 |
| ಉದ್ದು | 6000 | 6300 | 3816 | 300 | 65 |
| ಕಡಲೆಕಾಯಿ | 5275 | 5550 | 3699 | 275 | 50 |
| ಸೂರ್ಯಕಾಂತಿ ಬೀಜ | 5885 | 6015 | 4010 | 130 | 50 |
| ಸೋಯಾಬೀನ್ (ಹಳದಿ) | 3880 | 3950 | 2633 | 70 | 50 |
| ಎಳ್ಳು | 6855 | 7307 | 4871 | 452 | 50 |
| ಹುಚ್ಚೆಳ್ಳು | 6695 | 6930 | 4620 | 235 | 50 |
| ಹತ್ತಿ (ಮಧ್ಯಮ ಸ್ಟೇಪಲ್) | 5515 | 5726 | 3817 | 211 | 50 |
| ಹತ್ತಿ (ಉದ್ದದ ಸ್ಟೇಪಲ್) | 5825 | 6025 | - | 200 | - |

# ಸಚಿವ ಸಂಪುಟದ ನಿರ್ಣಯಗಳು

## ನಿರ್ಣಯ 2

**ನಿರ್ಣಯ:** ಯೂರಿಯಾ ಉತ್ಪಾದನೆಯಲ್ಲಿ ದೇಶವನ್ನು ಸ್ವಾವಲಂಬಿಯನ್ನಾಗಿಸುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರ ತೆಲಂಗಾಣದ, ರಾಮಗುಂಡಂ ರಸಗೊಬ್ಬರ ಮತ್ತು ರಾಸಾಯನಿಕ ನಿಯಮಿತ - ಆರ್.ಎಫ್.ಸಿ.ಎಲ್. ಗಾಗಿ ಹೊಸ ಹೂಡಿಕೆ ನೀತಿ 2012ರ ವಿಸ್ತರಣೆಗೆ ಅನುಮೋದನೆ ನೀಡಿದೆ.

**ಪರಿಣಾಮ:** 2014ರಲ್ಲಿ ಕೇಂದ್ರದಲ್ಲಿ ಹೊಸ ಸರ್ಕಾರ ಬಂದ ಮೇಲೆ, ಹೊಸ ಹೂಡಿಕೆ ನೀತಿಯನ್ನು ತರಲಾಗಿದ್ದು, ಅದರ ಅಡಿಯಲ್ಲಿ 2019ರವರೆಗೆ ಆರಂಭವಾದ ಕಾರ್ಖಾನೆಗಳು ಪ್ರೋತ್ಸಾಹಕ ಸಹಾಯಧನ ಪಡೆಯಲಿವೆ. ಆದರೆ ಅದು 2019ರ ನಂತರ ಅಸ್ತಿತ್ವಕ್ಕೆ ಬಂದ ಕಾರ್ಖಾನೆಗಳಿಗೆ ಅನ್ವಯವಾಗುವುದಿಲ್ಲ. ಈಗ ಸರ್ಕಾರ ಯೂರಿಯಾ ಉತ್ಪಾದನೆಯಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು 2021ರಲ್ಲಿ ಆರಂಭವಾದ ಕಾರ್ಖಾನೆಗಳಿಗೂ ಸಬ್ಸಿಡಿ ಸೌಲಭ್ಯ ನೀಡಲು ನಿರ್ಧರಿಸಲಾಗಿದೆ.

- ಈ ಘಟಕ 12 ಲಕ್ಷ 70 ಸಾವಿರ ಮೆಟ್ರಿಕ್ ಟನ್ ಯೂರಿಯಾವನ್ನು ಪ್ರತಿವರ್ಷ ದೇಶೀಯವಾಗಿ ಉತ್ಪಾದಿಸುತ್ತದೆ. ಇದು ಯೂರಿಯಾ ಆಮದಿನ ಮೇಲಿನ ಅವಲಂಬನೆಯನ್ನು ತಗ್ಗಿಸಲಿದ್ದು, ಇದು ಸ್ವಾವಲಂಬಿ ಭಾರತದೆಡೆಗೆ ಒಂದು ಹೆಜ್ಜೆಯಾಗಿದೆ. ಕೇಂದ್ರ ಸರ್ಕಾರ ಈ ಯೋಜನೆಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಲು ಯೋಜಿಸಿದ್ದು, ಯೂರಿಯಾ ಉತ್ಪಾದನೆ ಭಾರತದಲ್ಲಿಯೇ ಆರಂಭವಾಗಿದೆ. ಭಾರತೀಯ ರಸಗೊಬ್ಬರ ನಿಗಮದ ಹಳೆಯ ರಾಮಗೊಂಡಂ ಸ್ಥಾವರನ್ನು ಪುನಶ್ಚೇತನಗೊಳಿಸಲು, ರಾಮಗುಂಡಂ ರಸಗೊಬ್ಬರ ಮತ್ತು ರಾಸಾಯನಿಕ ನಿಯಮಿತ - ಆರ್.ಎಫ್.ಸಿ.ಎಲ್. ಹೊಸ ಅನಿಲ ಆಧಾರಿತ ಹಸಿರು ವಲಯ ಬೇವು ಲೇಪಿತ ಯೂರಿಯಾ ಸ್ಥಾವರವನ್ನು 6165.06 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸುತ್ತಿದೆ.
- ತೆಲಂಗಾಣ ಸೇರಿದಂತೆ ದಕ್ಷಿಣ ಮತ್ತು ಮಧ್ಯ ಭಾರತ ವಲಯದ ರಾಜ್ಯಗಳ ಯೂರಿಯೂ ಬೇಡಿಕೆ ಪೂರೈಸಲು ಈ ಸೌಲಭ್ಯದಲ್ಲಿ ವಿಶ್ವದ ಅತ್ಯುತ್ತಮ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ.
- ಇದು ರಸ್ತೆ, ರೈಲು, ಪೂರಕ ಕೈಗಾರಿಕೆಗಳ ಮೂಲಸೌಕರ್ಯ ಅಭಿವೃದ್ಧಿಯ ಜೊತೆಗೆ ವಲಯದ ಆರ್ಥಿಕತೆಗೂ ಉತ್ತೇಜನ ನೀಡಲಿದೆ.



## ನಿರ್ಣಯ 3

**ನಿರ್ಣಯ:** ಸುರಕ್ಷಿತ ಮತ್ತು ಸಮರ್ಥ ರೈಲ್ವೆ ಉಪಕ್ರಮಕ್ಕಾಗಿ ಸರ್ಕಾರ, ಭಾರತೀಯ ರೈಲ್ವೆಗಾಗಿ 700 ಮೆಗಾ ಹರ್ಟ್ಜ್ (ಮೆಗಾ ಹರ್ಟ್ಜ್) ತರಂಗಾಂತರದ ಬ್ಯಾಂಡ್ ನಲ್ಲಿ 5 ಮೆಗಾ ಹರ್ಟ್ಜ್ (ಮೆಗಾ ಹರ್ಟ್ಜ್) ಸ್ಪೆಕ್ಟ್ರಮ್ ಹಂಚಿಕೆಗೆ ಸರ್ಕಾರ ಅನುಮೋದನೆ ನೀಡಿದೆ.

- **ಪರಿಣಾಮ:** ಭಾರತದ ಶೇ.96ರಷ್ಟು ರೈಲ್ವೆಯ ಸಂಚಾರದಟ್ಟಣೆ 34,000 ಕಿಮೀ ಹಳಿಗಳ ಮೇಲಿದೆ. ಅಂತಹ ಸನ್ನಿವೇಶದಲ್ಲಿ, ಸಾರ್ವಜನಿಕ ಸುರಕ್ಷತೆಯನ್ನು ಖಾತ್ರಿಪಡಿಸುವುದು ಯಾವುದೇ ಸರ್ಕಾರಕ್ಕೆ ಮಹತ್ವದ ಜವಾಬ್ದಾರಿಯಾಗಿರುತ್ತದೆ. ಈ ಆಲೋಚನೆಯೊಂದಿಗೆ, ಕೇಂದ್ರ ಸರ್ಕಾರ, ರೈಲ್ವೆಗೆ ತರಂಗಾಂತರ ಹಂಚಿಕೆಯ ಕ್ರಾಂತಿಕಾರಿ ಕ್ರಮವನ್ನು ಕೈಗೊಂಡಿದೆ.
- **ಆಧುನಿಕ ವ್ಯವಸ್ಥೆ:** ಈವರೆಗೆ ರೈಲ್ವೆ 2ಜಿ ತರಂಗಾಂತರ ಬಳಕೆ ಮಾಡುತ್ತಿದೆ. ಆದರೆ, ಈಗ ರೈಲ್ವೆಯ ಸಂಚಾರ ಮತ್ತು ಸಂವಹನ ವ್ಯವಸ್ಥೆಯನ್ನು ಹೆಚ್ಚು ಸುರಕ್ಷಿತಗೊಳಿಸಲು ರೈಲ್ವೆಗೆ ಹೆಚ್ಚಿನ 4ಜಿ ತರಂಗಾಂತರ ಹಂಚಿಕೆ ಮಾಡಲಾಗುತ್ತಿದೆ. ಈವರೆಗೆ ರೈಲ್ವೆಯ ಸಂವಹನ ಆಪ್ಟಿಕಲ್ ಫೈಬರ್ ಮೂಲಕ ನಡೆಯುತ್ತಿತ್ತು, ಆದರೆ ಈಗ, ಅತ್ಯಾಧುನಿಕ ಸ್ಪೆಕ್ಟ್ರಂ ಲಭ್ಯತೆಯಿಂದಾಗಿ, ಇದು ಸಕಾಲದಲ್ಲಿ ರೇಡಿಯೋ ಸಂವಹನ ಮಾಧ್ಯಮದ ಮೂಲಕ ನಡೆಯಲಿದೆ. ಇದು ಸಂವಹನ ಮತ್ತು ಸಂಕೇತದ ಮೇಲೂ ಪ್ರಭಾವ ಬೀರಲಿದೆ.
- **ರೈಲುಗಳು ಢಿಕ್ಕಿ ಹೊಡೆಯುವುದಿಲ್ಲ:** ಪ್ರಯಾಣಿಕರ ಸುರಕ್ಷತೆಯ ಖಾತ್ರಿಗಾಗಿ ದೇಶೀಯವಾಗಿ ಅಭಿವೃದ್ಧಿ ಪಡಿಸಲಾದ 'ಮೇಡ್ ಇನ್ ಇಂಡಿಯಾ' ರೈಲು ಮುಖಾಮುಖಿ ತಡೆ ವ್ಯವಸ್ಥೆಯನ್ನು ಅನುಮೋದಿಸಲಾಗಿದೆ. ರೈಲು ಪ್ರಯಾಣಿಕರ ಸುರಕ್ಷತೆಗಾಗಿ ನಾಲ್ಕು ಭಾರತೀಯ ಕಂಪನಿಗಳು ಮುಖಾಮುಖಿ ನಿಗ್ರಹ ವ್ಯವಸ್ಥೆ (ರೈಲುಗಳ ಢಿಕ್ಕಿ ತಡೆ ವ್ಯವಸ್ಥೆ) ರೂಪಿಸಿವೆ. ಇದು ಮೇಕ್ ಇನ್ ಇಂಡಿಯಾ ಯೋಜನೆಯ ಯಶಸ್ಸಿಗೆ ಒಂದು ಅದ್ಭುತ ಉದಾಹರಣೆಯಾಗಿದೆ.

## ನಿರ್ಣಯ 4

**ನಿರ್ಣಯ:** ಸರ್ಕಾರ ಒಂದು ಮಾದರಿ ಬಾಡಿಗೆ ಕಾಯಿದೆ (ಎಂ.ಟಿ.ಎ.) ಅನುಮೋದಿಸಿದ್ದು, ಇದು ಬಾಡಿಗೆದಾರರಿಗೆ ಸುಸ್ಥಿರ ಮತ್ತು ಸಮಗ್ರ ಬಾಡಿಗೆ ಮನೆಯನ್ನು ಉತ್ತೇಜಿಸುತ್ತದೆ. ಇದನ್ನು ಅಳವಡಿಸಿಕೊಳ್ಳಲು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರವಾನಿಸಲಾಗಿದೆ.

- **ಪರಿಣಾಮ:** ಹಾಲಿ ಬಾಡಿಗೆ ಕಾಯಿದೆಗೆ ತಿದ್ದುಪಡಿ ಮಾಡಲು ಅಥವಾ ಹೊಸ ಕಾಯಿದೆ ರೂಪಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅವಕಾಶ ನೀಡಲು ಈ ಕಾಯಿದೆಯನ್ನು ಕಳುಹಿಸಲಾಗುವುದು.
- ಇದು ದೇಶಾದ್ಯಂತ ಮನೆಗಳನ್ನು ಬಾಡಿಗೆಗೆ ನೀಡುವ ಬಗ್ಗೆ ಕಾನೂನು ಚೌಕಟ್ಟನ್ನು ಪುನರುಜ್ಜೀವಗೊಳಿಸಲು ಸಹಾಯ ಮಾಡುತ್ತದೆ, ಇದರಿಂದಾಗಿ ಮುಂದಿನ ಅಭಿವೃದ್ಧಿಗೆ ದಾರಿ ಸುಗಮವಾಗುತ್ತದೆ.
- ಇದು ಮನೆಯಿಲ್ಲದವರ ಸಮಸ್ಯೆಯನ್ನು ಪರಿಹರಿಸುತ್ತದೆ ಮತ್ತು ಪ್ರತಿ ಆದಾಯ ಗುಂಪಿನ ಜನರಿಗೆ ಬಾಡಿಗೆಗೆ ಮನೆಗಳು ಲಭ್ಯವಿರುತ್ತವೆ.
- ಇದರ ಮೂಲಕ, ಹಿಡುವಳಿ ಮಾರುಕಟ್ಟೆಯನ್ನು ವ್ಯವಹಾರವಾಗಿ ಅಭಿವೃದ್ಧಿಪಡಿಸುವಲ್ಲಿ ಖಾಸಗಿಯವರ ಪಾಲ್ಗೊಳ್ಳುವಿಕೆ ಹೆಚ್ಚಾಗುತ್ತದೆ. ಈ ಹಂತವು ವಸತಿ ಮನೆಗಳ ತೀವ್ರ ಕೊರತೆಯ ಸಮಸ್ಯೆಯನ್ನು ಪರಿಹರಿಸುತ್ತದೆ. ■

ಒಂದು ರಾಷ್ಟ್ರ - ಒಂದು ತೆರಿಗೆ



# ದೇಶದ ಆರ್ಥಿಕತೆಯ ಏಕೀಕರಣ

यद दुरं यद दुराद्यम, यद च दुरै, व्यवस्थितम्,
तत् सर्वम् तपसा साध्यम तपोहिदुर्तिक्रमम ।

**ಒಂದು ವಿಷಯ ಎಷ್ಟೇ ದೂರದಲ್ಲಿದ್ದರೂ, ಅದನ್ನು ಕಂಡುಹಿಡಿಯುವುದು ಎಷ್ಟೇ ಕಷ್ಟವಾಗಿದ್ದರೂ, ಕಠಿಣ ಪರಿಶ್ರಮ ಮತ್ತು ತಪಸ್ಸಿನಿಂದ ಅದನ್ನು ಪಡೆಯಬಹುದು. ಚಾಣಕ್ಯರ ಈ ಮಾತುಗಳು ಜಿಎಸ್ಟಿಯನ್ನು ಜಾರಿ ಮಾಡುವಲ್ಲಿ ಸರ್ಕಾರದ ಅವಿರತ ಪ್ರಯತ್ನಗಳನ್ನು ಬಿಂಬಿಸುತ್ತವೆ.**

17 ವರ್ಷಗಳ ಚರ್ಚೆ, ಸಮಾಲೋಚನೆಗಳ ಬಳಿಕ ಜಿಎಸ್ಟಿಯನ್ನು 2017ರ ಜೂನ್ 30 ಮತ್ತು ಜುಲೈ 1ರ ಮಧ್ಯರಾತ್ರಿ, ಜಾರಿ ಮಾಡುವ ಮೂಲಕ ದೇಶ ಒಕ್ಕೂಟ ವ್ಯವಸ್ಥೆಗೆ ಒಂದು ಸ್ಪಷ್ಟ ಉದಾಹರಣೆಯನ್ನು ಪ್ರಸ್ತುತ ಪಡಿಸಿತು. ಜಿಎಸ್ಟಿ ಜಾರಿ ಆದಾಗಿನಿಂದ, ಜಿಎಸ್ಟಿ ಆರ್ಥಿಕತೆಗೆ ಇಂಬು ನೀಡಿಕೆಯ ಮುನ್ಸೂಚಕವಾಗಿದೆ. ಇದು 500 ವಿಧದ ಉಪಕರ ಮತ್ತು ತೆರಿಗೆಗಳ ಹೊರೆಯಿಂದ ರಾಷ್ಟ್ರವನ್ನು ಮುಕ್ತಗೊಳಿಸಿದ ಸರ್ಕಾರದ ಒಂದು ದೊಡ್ಡ ಹೆಜ್ಜೆಯಾಗಿದೆ. ಇದು ಗಂಗಾ ನಗರದಿಂದ ಇಟಾನಗರವರೆಗೆ ಅಥವಾ ಲೇಹ್ ನಿಂದ ಲಕ್ಷದ್ವೀಪದವರೆಗೆ ದೇಶಾದ್ಯಂತ ಏಕರೂಪದ ತೆರಿಗೆ ವಿಧಿಸಲು ಅವಕಾಶ ಕಲ್ಪಿಸಿ 'ಒಂದು ರಾಷ್ಟ್ರ – ಒಂದು ತೆರಿಗೆ' ಗುರಿಯನ್ನು ಪೂರೈಸಿದೆ. ಪ್ರಸ್ತುತ ಕೋವಿಡ್ ಸಾಂಕ್ರಾಮಿಕ ಸಮಯದಲ್ಲೂ, ಸತತ ಏಳು ಬಾರಿ 1 ಲಕ್ಷ ಕೋಟಿಗೂ ಅಧಿಕ ಮಾಸಿಕ ಜಿಎಸ್ಟಿ ಸಂಗ್ರಹವು ಅದರ ಯಶೋಗಾಥೆಯನ್ನು ಹೇಳುತ್ತದೆ.

ಬಿಹಾರದ ವೈಶಾಲಿ ಜಿಲ್ಲೆಯ ಕಮಲೇಶ್ ಹೇಳುವಂತೆ - "ಜಿಎಸ್ಟಿ ವ್ಯಾಟ್ ಗಿಂತ ತುಂಬಾ ಉತ್ತಮವಾಗಿದೆ. ಈಗ ಸರಕುಗಳು ಗ್ರಾಹಕರನ್ನು ಕಡಿಮೆ ದರಕ್ಕೆ ತಲುಪುತ್ತವೆ, ಈಗ ತೆರಿಗೆಳು ಹೆಚ್ಚಾಗಿಲ್ಲ. ಹಲವು ಕಂಪನಿಗಳು ತಮ್ಮ ಉತ್ಪನ್ನಗಳ ಎಂ.ಆರ್.ಪಿ.ಯನ್ನು ತಗ್ಗಿಸಿವೆ. ನಮ್ಮ ವ್ಯಾಪಾರಕ್ಕೆ ಇದರಿಂದ ಅನುಕೂಲವಾಗಿದೆ."

ಸರ್ತಾಜ್ ಹೀಗೆ ಹೇಳುತ್ತಾರೆ - "ಈಗ ತೆರಿಗೆ ಏಕರೂಪವಾದ ಬಳಿಕ, ಗ್ರಾಹಕರು ಬಿಹಾರದೊಳಗೇ ಸರಕು ಖರೀದಿ ಮಾಡುತ್ತಾರೆ. ನಮ್ಮಂತಹ ವ್ಯಾಪಾರಿಗಳಿಗೆ ಜಿಎಸ್ಟಿಯಿಂದ ಅನುಕೂಲವಾಗಿದೆ. ಇದಕ್ಕೆ ಮುನ್ನ ನಾವು ಬೇರೆ ರಾಜ್ಯಗಳಿಂದ ಸರಕು ತರುವಾಗ ನಾವು ವ್ಯಾಟ್ ಜೊತೆಗೆ ಶೇ.2ರಷ್ಟು ಸಿಎಸ್ಟಿಯನ್ನೂ ಪಾವತಿಸಬೇಕಾಗಿತ್ತು. ಈಗ ದೇಶದ ಯಾವುದೇ ಭಾಗದಿಂದ ಸರಕು ಖರೀದಿಸಿದರೂ, ದರ ಒಂದೇ ಆಗಿರುತ್ತದೆ. ಇದೆಲ್ಲವೂ ನಮಗೆ ಉಪಯುಕ್ತವಾಗಿದೆ."

> ಈಗ ಜಿಎಸ್ಟಿಗೆ 4 ವರ್ಷ ತುಂಬಿದೆ. ಈ ನಾಲ್ಕು ವರ್ಷಗಳಲ್ಲಿ ನಾವು ಇದನ್ನು ಹಿಂದಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿಸಲು ಹಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಸಣ್ಣ ವ್ಯವಹಾರಗಳಿಗೆ, ಅದು ತ್ರೈಮಾಸಿಕ ರಿಟರ್ನ್ಸ್ ಆಗಿರಲಿ ಮತ್ತು ಮಾಸಿಕ ಪಾವತಿ ಅಥವಾ ಎಲೆಕ್ಟ್ರಾನಿಕ್ ಇನ್ವಾಯ್ಸಿಂಗ್ ವ್ಯವಸ್ಥೆಗಳ ಸೌಲಭ್ಯವಾಗಿರಲಿ, ಅದನ್ನು ಸುಧಾರಿಸಲು ನಾವು ನಿರಂತರವಾಗಿ ಶ್ರಮಿಸುತ್ತಿದ್ದೇವೆ.
>
> **-ನಿರ್ಮಲಾ ಸೀತಾರಾಮನ್,**
> **ಕೇಂದ್ರ ಹಣಕಾಸು ಸಚಿವರು**

**ಜಿಎಸ್ಟಿ 2020-21ರ ಆರ್ಥಿಕ ವರ್ಷದಲ್ಲಿ ಕರೋನಾ ಸಾಂಕ್ರಾಮಿಕದಲ್ಲಿ ಆರ್ಥಿಕತೆಯ ಕುಸಿತವನ್ನು ನಿರೋಧಿಸಿತು. ಒಟ್ಟು ಆದಾಯ ಸಂಗ್ರಹಣೆ 10.71 ಲಕ್ಷ ಕೋಟಿ ರೂ. ಆಗಿದ್ದು, ಹಿಂದಿನ ಹಣಕಾಸು ವರ್ಷಕ್ಕಿಂತ ಶೇ 12 ರಷ್ಟು ಹೆಚ್ಚಾಗಿದೆ.**

ಪಶ್ಚಿಮ ಬಂಗಾಳದ ರೋಶನ್ ಲೋಧಾ ಹೇಳುವಂತೆ - "ಜಿಎಸ್ಟಿ ಸಂಪೂರ್ಣವಾಗಿ ದೇಶವನ್ನು ಪರಿವರ್ತಿಸಿದೆ. ಇದು ದೀರ್ಘಕಾಲದ ಕನಸಾಗಿತ್ತು. ಒಂದು ತೆರಿಗೆ ವ್ಯವಸ್ಥೆಯಿಂದಾಗಿ, ಜನರು ಈಗ ಬಹು ತೆರಿಗೆಯ ಜಾಲದಿಂದ ಮುಕ್ತರಾಗಿದ್ದಾರೆ. ಇದು ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದೆ."

ಮಧ್ಯಪ್ರದೇಶದ ನೀಮಚ್ ನ ಸತ್ಯನಾರಾಯಣ ಹೇಳುವಂತೆ ಜಿಎಸ್ಟಿ ಪಾರದರ್ಶಕತೆಯಿಂದ ಕೂಡಿದ್ದು, ಪ್ರಾಮಾಣಿಕತೆಯನ್ನು ತಂದಿದೆ. ಜಿಎಸ್ಟಿಗೆ ಮುನ್ನ ನಮ್ಮ ಬಳಿ ಖರೀದಿ ಮಾಡುತ್ತಿದ್ದ ವರ್ತಕರು, ನೋಂದಾಯಿತರಾಗಿರಲಿಲ್ಲ, ಹೀಗಾಗಿ ಸರಕು ಪೂರೈಕೆ ಮಾಡಿದ ಬಳಿಕ ಹಣ ಪಾವತಿ ಮಾಡದಿರುವ ಅಪಾಯ ಇದ್ದೇ ಇರುತ್ತಿತ್ತು. ಈಗ ಎಲ್ಲವೂ ನೋಂದಣಿಯಾಗಿರುತ್ತದೆ ಮತ್ತು ಇ-ವೇ ಬಿಲ್ ಸೇರಿದಂತೆ ಎಲ್ಲ ವ್ಯವಸ್ಥೆ ಆನ್ ಲೈನ್ ಆಗಿರುತ್ತದೆ. ಜಿಎಸ್ಟಿ ವ್ಯವಸ್ಥೆಯನ್ನು ಸರಳೀಕರಿಸಿದ್ದು, ಭ್ರಷ್ಟಾಚಾರ ತಡೆಯುತ್ತದೆ.

ಈಗ, ಗುಜರಾತ್ ನ ಅಹ್ಮದಾಬಾದ್ ನಗರದ ದೇವನ್ ರಂತಹ ವರ್ತಕರು, ಯಾವುದೇ ರಾಜ್ಯದಿಂದ ಸರಕು ಖರೀದಿಸಬಹುದಾಗಿದೆ. ಜಿಎಸ್ಟಿ ಅವರಿಗೆ ಬಹು ನಮೂನೆಗಳ ಸಲ್ಲಿಕೆಯಿಂದ ಮುಕ್ತಿ ನೀಡಿದೆ. ಇದು ವ್ಯಾಪಾರಿಗಳಿಗೆ ಪರಿವರ್ತನೆಯ ಹಾದಿ ತೋರಿದ್ದು, ಇದು ವಾಣಿಜ್ಯವನ್ನು ಉತ್ತೇಜಿಸುವುದಷ್ಟೇ ಅಲ್ಲದೆ, ಗ್ರಾಹಕರಿಂದ ವ್ಯಾಪಾರಸ್ಥರವರೆಗೆ ಎಲ್ಲರಿಗೂ ಪ್ರಯೋಜನಕಾರಿಯಾಗಿದೆ.

ಉತ್ತರ ಪ್ರದೇಶದ ಅಲಿಗಢದ ವಿವೇಕ್ ದೀಪ್ ಈಗ ನಾವು ಯಾವುದೇ ನಿರ್ಬಂಧ ಇಲ್ಲದೆ ವ್ಯಾಪಾರ ಮಾಡುವ ಅವಕಾಶ ಪಡೆದಿದ್ದೇವೆ ಎಂದು ಭಾವಿಸುತ್ತಾರೆ. ಮಾರುಕಟ್ಟೆಯ ಏಕೀಕರಣದಿಂದಾಗಿ ಆರೋಗ್ಯಪೂರ್ಣ ಸ್ಪರ್ಧೆ ಏರ್ಪಟ್ಟಿದೆ.

ಇದನ್ನು ಸ್ಪಷ್ಟವಾಗಿ ಮುಂದಿಟ್ಟ ಮೇಲೆ ಈಗ ಯಾರೂ ಮೋಸ ಮಾಡಲು ಧೈರ್ಯ ಮಾಡಲಾರರು.ವ್ಯಾಪಾರಿಗಳಿಂದ ಮೆಚ್ಚುಗೆಯ ಮಾತುಗಳು ಜಿಎಸ್ಟಿಯ ಯಶಸ್ಸನ್ನು ಎತ್ತಿ ತೋರಿಸುತ್ತವೆ. ಒಂದೆಡೆ, ವ್ಯಾಪಾರಿಗಳು ಇದನ್ನು ವ್ಯಾಪಾರ ಸ್ನೇಹಿ ಎಂದು ಕರೆದರೆ, ಮತ್ತೊಂದೆಡೆ ಗ್ರಾಹಕರು ಕಡಿಮೆ ದರದಲ್ಲಿ ಉತ್ಪನ್ನಗಳನ್ನು ಪಡೆಯಲು ಸಾಧ್ಯವಾಗುತ್ತಿದೆ ಎನ್ನುತ್ತಾರೆ. ಜಿಎಸ್ಟಿ ನಾಲ್ಕು ವರ್ಷಗಳನ್ನು ಪೂರೈಸುತ್ತಿದ್ದಂತೆ ಅದರ ಬಗ್ಗೆ ಸಮ್ಯಕ್ ದೃಷ್ಟಿಕೋನದಿಂದ ನೋಡುವುದು ಸೂಕ್ತವಾಗಿದೆ.




### 17 ಬಗೆಯ ತೆರಿಗೆಗಳು, 23 ಉಪಕರ

## ಈಗ ನಮೂನೆ ಸಲ್ಲಿಕೆಯ ತೊಡಕು ನಿವಾರಣೆ

ಜಿಎಸ್ಟಿ ಎಂದರೆ ಸರಕು ಮತ್ತು ಸೇವೆಗಳ ತೆರಿಗೆ. 2017ರ ಜುಲೈ 1ರಿಂದ ಜಿಎಸ್ಟಿ ಜಾರಿ ಮಾಡಿದಾಗ, ಪ್ರಧಾನಮಂತ್ರಿ ನರೇಂದ್ರ ಮೋದಿ ಇದನ್ನು ಆಡು ಭಾಷೆಯಲ್ಲಿ ಗುಡ್ ಅಂಡ್ ಸಿಂಪಲ್ ಟ್ಯಾಕ್ಸ್ (ಉತ್ತಮ ಮತ್ತು ಸರಳ ತೆರಿಗೆ) ಎಂದು ಕರೆದಿದ್ದರು. ಜಿಎಸ್ಟಿಗೆ ಮೊದಲು ತೆರಿಗೆದಾರರು ವಿವಿಧ ರಾಜ್ಯಗಳು ಮತ್ತು ಕೇಂದ್ರ ವಿಧಿಸುತ್ತಿದ್ದ ವಿವಿಧ ರೀತಿಯ ತೆರಿಗೆಯನ್ನು ಪಾವತಿಸಬೇಕಾಗಿತ್ತು. ಉದಾಹರಣೆಗೆ ಸರಕು ಕಾರ್ಖಾನೆಯನ್ನು ಬಿಡುತ್ತಿದ್ದಂತೆ ಅದಕ್ಕೆ ಅಬಕಾರಿ ತೆರಿಗೆ ಹಾಕಲಾಗುತ್ತಿತ್ತು. ಹಲವು ಸರಕುಗಳ ಮೇಲೆ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಮಾರಾಟಗಾರರು ಕಟ್ಟಬೇಕಾಗುತ್ತಿತ್ತು. ಯಾವುದೇ ಸರಕು ಐಷಾರಾಮಿ ವಸ್ತುವಿನ ಪ್ರವರ್ಗಕ್ಕೆ ಬಂದರೆ ಐಷಾರಾಮಿ ತೆರಿಗೆಯನ್ನು ಹೆಚ್ಚುವರಿಯಾಗಿ ವಿಧಿಸಲಾಗುತ್ತಿತ್ತು. ಹೋಟೆಲ್ ಅಥವಾ ರೆಸ್ಟೋರೆಂಟ್ ನಲ್ಲಿ ಈ ಸರಕುಗಳನ್ನು ಒದಗಿಸಿದರೆ, ಅದಕ್ಕೆ ಪ್ರತ್ಯೇಕವಾಗಿ ಸೇವಾ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ವಿವಿಧ ರಾಜ್ಯಗಳಲ್ಲಿ ಅದೇ ವಸ್ತುವಿನ ಮೇಲೆ ವಿವಿಧ ದರದಲ್ಲಿ ತೆರಿಗೆ ವಿಧಿಸಲಾಗುತ್ತಿದ್ದ ಕಾರಣ ದರವೂ ಬೇರೆ ಬೇರೆಯಾಗಿರುತ್ತಿತ್ತು. ಸರಕು ಅಥವಾ ಸೇವೆಗಳು ಗ್ರಾಹಕರ ಕೈ ಸೇರುವ ಮುನ್ನ ಅದರ ಮೇಲೆ ಹಲವು ಬಗೆಯ ತೆರಿಗೆಗಳನ್ನು ಹಾಕಲಾಗುತ್ತಿತ್ತು.




**ಸತತ ಎಂಟನೇ ತಿಂಗಳು ಮೇ 2021ರಲ್ಲಿ, ಜಿಎಸ್ಟಿ ಸಂಗ್ರಹ 1 ಲಕ್ಷ ಕೋಟಿ ಮೀರಿತ್ತು. ಕೊರೊನಾ ಅವಧಿಯಲ್ಲೂ ಮೇ 2021ರಲ್ಲಿ ಅದು ರೂ.1,02,709 ಕೋಟಿ ಆಗಿದ್ದರೆ, 2019ರ ಮೇ ನಲ್ಲಿ ಇದು 1,00,289 ಕೋಟಿ ಆಗಿತ್ತು.**

2017ರ ಜುಲೈ 1ರಂದು ಐತಿಹಾಸಿಕ ಮಧ್ಯರಾತ್ರಿ ಅಧಿವೇಶನಕ್ಕಾಗಿ ಸಂಸತ್ತು ದೀಪಾಲಂಕಾರದಿಂದ ಸಿಂಗಾರಗೊಂಡಿತ್ತು. ಜುಲೈ 1ರ ಮಧ್ಯರಾತ್ರಿ ಜಿಎಸ್ಟಿ ಅಸ್ತಿತ್ವಕ್ಕೆ ಬಂತು. ಇದನ್ನು ಬದಲಾವಣೆಯ ಹರಿಕಾರ ಎಂದೇ ಬಣ್ಣಿಸಲಾಗಿದ್ದು, ಗ್ರಾಹಕರಿಗೆ ಅನುಕೂಲ ಉಂಟು ಮಾಡುವ ಉದ್ದೇಶ ಹೊಂದಿತ್ತು. ಜೊತೆಗೆ ಇದು ಕೈಗಾರಿಕೆಗಳ ಉತ್ಪಾದನೆ ಮತ್ತು ಸಾಗಣೆಯ ವೆಚ್ಚವನ್ನು ತಗ್ಗಿಸುತ್ತದೆ. ಜಿಎಸ್ಟಿ ಒಟ್ಟು 17 ತೆರಿಗೆಗಳು ಮತ್ತು ಅದಕ್ಕೆ ಸಂಬಂಧಿಸಿದ 500 ಬಗೆಯ ಉಪಕರಗಳಿಂದ ದೇಶವನ್ನು ಮುಕ್ತಗೊಳಿಸಿದೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂಸತ್ತಿನ ಸೆಂಟ್ರಲ್ ಹಾಲ್ ನಿಂದ ಏಕೀಕೃತ ತೆರಿಗೆ ವ್ಯವಸ್ಥೆಗೆ ಚಾಲನೆ ನೀಡಿದರು. ಜಿಎಸ್ಟಿಯ ಪ್ರಭಾವ ಅದರ ಹುಟ್ಟಿನಿಂದಲೇ ಗೋಚರಿಸುತ್ತಿದೆ.

## ಭಾರತದಲ್ಲಿರುವ 4 ವಿಧದ ಜಿಎಸ್ಟಿಗಳು:

**ಕೇಂದ್ರೀಯ ಸರಕು ಮತ್ತು ಸೇವೆಗಳ ತೆರಿಗೆ (ಸಿಜಿಎಸ್ಟಿ)**

ಇದು ರಾಜ್ಯದೊಳಗಿನ ಪೂರೈಕೆಗೆ ಸರಕು ಮತ್ತು ಸೇವೆಗಳೆರಡಕ್ಕೂ ಕೇಂದ್ರ ಸರ್ಕಾರ ವಿಧಿಸುವ ತೆರಿಗೆಯಾಗಿದೆ.

**ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ**

ಇದು ಅಂತರ ರಾಜ್ಯದೊಳಗಿನ ಪೂರೈಕೆಗೆ ಸರಕು ಮತ್ತು ಸೇವೆಗಳೆರಡಕ್ಕೂ ರಾಜ್ಯ ಸರ್ಕಾರ ವಿಧಿಸುವ ತೆರಿಗೆಯಾಗಿದೆ.

**ಕೇಂದ್ರಾಡಳಿತ ಪ್ರದೇಶದ ಸರಕು ಮತ್ತು ಸೇವೆಗಳ ತೆರಿಗೆ**

ಕೇಂದ್ರಾಡಳಿತ ಪ್ರದೇಶದ ಇಬ್ಬರು ವ್ಯಕ್ತಿಗಳ ನಡುವೆ (ವ್ಯಾಪಾರಸ್ಥರು) ವ್ಯವಹಾರ ನಡೆದಿದ್ದರೆ, ಆಗ ಯುಟಿಜಿಎಸ್ಟಿಯನ್ನು ಆ ಕೇಂದ್ರಾಡಳಿತ ಪ್ರದೇಶದ ಪಾಲಾಗಿ ಪಾವತಿ ಮಾಡಬೇಕಾಗುತ್ತದೆ.

**ಸಂಯೋಜಿತ ಸರಕು ಮತ್ತು ಸೇವೆಗಳ ತೆರಿಗೆ**

ಐಜಿಎಸ್ಟಿ ತೆರಿಗೆ, ಎಲ್ಲ ಅಂತರ – ರಾಜ್ಯ ಪೂರೈಕೆಯ ಮೇಲೆ ಸರಕು ಮತ್ತು ಸೇವೆಗಳಿಗೆ ವಿಧಿಸುವ (ಐ.ಜಿ.ಎಸ್.ಟಿ.) ತೆರಿಗೆಯಾಗಿದೆ. ಇದು ರಾಜ್ಯಗಳ ಪಾಲು (ಎಸ್.ಜಿ.ಎಸ್.ಟಿ.) ಮತ್ತು ಕೇಂದ್ರ ಸರ್ಕಾರದ ಪಾಲು (ಸಿಜಿಎಸ್ಟಿ) ಸೇರಿ ಸಂಯೋಜಿತ ತೆರಿಗೆ ಆಗಿದೆ.

### 5 ಜಿಎಸ್ಟಿ ದರಗಳ ಹಂತಗಳ ಪ್ರಗತಿಪರ ವ್ಯವಸ್ಥೆ

- ದರ ಮತ್ತು ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಹಂತದ ತೆರಿಗೆಗಳಿವೆ. ಜಿಎಸ್ಟಿ ಡೈನಾಮಿಕ್ ದರವನ್ನು ಆಧರಿಸಿದೆ, ಅದು ಸಂದರ್ಭೋಚಿತವಾಗಿ ಬದಲಾಗುತ್ತದೆ.
- ಜಿಎಸ್ಟಿಯ ರಚನೆ ಸರಳವಾಗಿದೆ. ಜಿಎಸ್ಟಿ ವ್ಯವಸ್ಥೆಯಲ್ಲಿ ಐದು ಹಂತಗಳಿವೆ, ತೆರಿಗೆ ಮುಕ್ತ ಹಂತ, ಶೇ. 5ರ ಹಂತ, 12ರ ಹಂತ, ಶೇ.18 ಹಂತ, ಮತ್ತು ಶೇ.28ರ ಹಂತ.
- ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಅತ್ಯಾವಶ್ಯಕ ವಸ್ತುಗಳು ತೆರಿಗೆ ಮುಕ್ತವಾಗಿವೆ. ಐಷಾರಾಮಿ ಮತ್ತು ಅಪಾಯಕಾರಿ ಪ್ರವರ್ಗಕ್ಕೆ ಬರುವ ಸರಕು ಮತ್ತು ಸೇವೆಗಳನ್ನು ಶೇ.28ರ ಹಂತದ ತೆರಿಗೆಯ ವ್ಯಾಪ್ತಿಯಲ್ಲಿಡಲಾಗಿದೆ.

## ಹಲವು ವರ್ಷಗಳ ಸಮಾಲೋಚನೆ ಮತ್ತು ಚರ್ಚೆಯ ನಂತರ 2017ರಲ್ಲಿ ಜಾರಿಯಾದ ಜಿಎಸ್ಟಿ

- 2000ನೇ ಇಸವಿಯಲ್ಲಿ ಅಂದಿನ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಏಕರೂಪ ತೆರಿಗೆ ಕಲ್ಪನೆಯನ್ನು ಹುಟ್ಟುಹಾಕಿತು.
- 2006-2007ರ ಸಾಮಾನ್ಯ ಆಯವ್ಯಯದಲ್ಲಿ ಸಹ ಆಗಿನ ಹಣಕಾಸು ಸಚಿವರು ಜಿಎಸ್ಟಿಯ ಪ್ರಸ್ತಾಪ ಮಾಡಿದ್ದರು. 2007ರಲ್ಲಿ ರಾಜ್ಯ ಹಣಕಾಸು ಸಚಿವರುಗಳ ಜಂಟಿ ಸಮಿತಿಯನ್ನು ಸಹ ಸ್ಥಾಪಿಸಲಾಯಿತು.
- 2008ರ ಬಜೆಟ್ ಭಾಷಣವು 2010ರ ಏಪ್ರಿಲ್ 1ರಿಂದ ದೇಶಾದ್ಯಂತ ಜಿಎಸ್ಟಿ ಜಾರಿ ಮಾಡುವ ಅಗತ್ಯವನ್ನು ಪ್ರತಿಪಾದಿಸಿತ್ತು. ಆದರೆ, ರಾಜ್ಯಗಳ ನಡುವೆ ಒಮ್ಮತ ಮೂಡಲಿಲ್ಲ.
- 2014ರಲ್ಲಿ ಹೊಸ ಸರ್ಕಾರ ಬಂದ ಬಳಿಕ, ಅದು ಜಿಎಸ್ಟಿಯನ್ನು ಜಾರಿ ಮಾಡುವ ಪ್ರಯತ್ನ ಮುಂದುವರಿಸಿತು. ಆಗಿನ ಹಣಕಾಸು ಸಚಿವರಾದ ಅರುಣ್ ಜೈಟ್ಲಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು.
- ಸರ್ಕಾರ ಸಂವಿಧಾನಕ್ಕೆ 122ನೇ ತಿದ್ದುಪಡಿ ತರುವ ಮೂಲಕ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್ಟಿ)ಜಾರಿಗೆ ಅವಕಾಶ ಕಲ್ಪಿಸಿತು. ಆ ಪ್ರಕಾರವಾಗಿ, ವಿಧಿ 246, 248 ಮತ್ತು 268ನ್ನು ತಿದ್ದುಪಡಿ ಮಾಡಲಾಯಿತು. 2015ರ ಮೇನಲ್ಲಿ ಲೋಕಸಭೆಯಲ್ಲಿ ಮತ್ತು 2016ರ ಆಗಸ್ಟ್ ನಲ್ಲಿ ರಾಜ್ಯಸಭೆಯಲ್ಲಿ ಯಾವುದೇ ಪ್ರತಿರೋಧವಿಲ್ಲದೆ ಇದಕ್ಕೆ ಅಂಗೀಕಾರ ದೊರೆಯಿತು. ಈ ರೀತಿಯಾಗಿ ಸಂವಿಧಾನಕ್ಕೆ 101ನೇ ತಿದ್ದುಪಡಿ ಆಯಿತು.
- ಈ ವಿಷಯ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡರ ವ್ಯಾಪ್ತಿಗೂ ಸೇರಿದ್ದಾದ ಕಾರಣ, ಸಂಸತ್ತಿನ ಉಭಯ ಸದನಗಳೂ ಇದನ್ನು ಅನುಮೋದಿಸಿದ ತರುವಾಯ, ಅರ್ಧಕ್ಕೂ ಹೆಚ್ಚು ರಾಜ್ಯಗಳು ಇದಕ್ಕೆ ಅನುಮೋದನೆ ನೀಡುವುದು ಅತ್ಯಗತ್ಯವಾಗಿತ್ತು. ಅಸ್ಸಾಂ ವಿಧಾನಸಭೆ ಮೊದಲು ಇದಕ್ಕೆ ಅನುಮೋದನೆ ನೀಡಿತು.



**ಜಿಎಸ್ಟಿ ಜಾರಿಗೆ ಮುನ್ನ ಸಾಂವಿಧಾನಿಕ ತಿದ್ದುಪಡಿ ಅಗತ್ಯ**

ಭಾರತ ಒಕ್ಕೂಟ ವ್ಯವಸ್ಥೆಯ ಆಡಳಿತವನ್ನು ಒಳಗೊಂಡಿದೆ, ಇದರಲ್ಲಿ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ರಾಜ್ಯಗಳು ಮತ್ತು ಕೇಂದ್ರದ ನಡುವೆ ವಿಭಜಿಸಲಾಗಿದೆ. ಅದರಂತೆ, ಸರಕಿನ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರ ಕೇಂದ್ರಕ್ಕೆ ಇರುವುದಿಲ್ಲ, ಅದೇ ರೀತಿ, ಸೇವೆಗಳ ಮೇಲೆ ತೆರಿಗೆ ವಿಧಿಸಲು ರಾಜ್ಯಗಳಿಗೆ ಅಧಿಕಾರ ಇರಲಿಲ್ಲ. ಆದರೆ ಜಿಎಸ್ಟಿಯ ನಿಬಂಧನೆಗಳ ರೀತ್ಯ, ಸರಕುಗಳ ಮಾರಾಟಕ್ಕೆ ತೆರಿಗೆ ವಿಧಿಸುವ ಹಕ್ಕನ್ನು ಕೇಂದ್ರಕ್ಕೆ ನೀಡುವುದು ಅಗತ್ಯವಾಗಿತ್ತು, ಅಲ್ಲಿಯವರೆಗೆ ರಾಜ್ಯಗಳಿಗೆ ಮಾತ್ರ ಆ ಅಧಿಕಾರ ಲಭ್ಯವಿತ್ತು. ಹೆಚ್ಚುವರಿಯಾಗಿ, ಕೇಂದ್ರವು ತೆರಿಗೆ ಸೇವೆಗಳ ಹಕ್ಕನ್ನು ಮಾತ್ರ ಹೊಂದಿತ್ತು, ಸೇವಾ ಕ್ಷೇತ್ರದ ತೆರಿಗೆ ಪಾಲನ್ನು ರಾಜ್ಯಗಳಿಗೂ ರವಾನಿಸುವ ಅವಶ್ಯಕತೆಯಿತ್ತು. ಅಂತಹ ಸನ್ನಿವೇಶದಲ್ಲಿ, ಕೇಂದ್ರ ಮತ್ತು ರಾಜ್ಯಗಳು ಮಾತ್ರ ತಮ್ಮದೇ ಆದ ಜಿಎಸ್ಟಿ ತೆರಿಗೆಯನ್ನು ವಿಧಿಸಬಹುದು. ಇದು ಸಾಂವಿಧಾನಿಕ ತಿದ್ದುಪಡಿಯ ಮುಖ್ಯ ಉದ್ದೇಶವಾಗಿತ್ತು.

**ಜಿಎಸ್ಟಿ ಮಂಡಳಿ ಭಾರತೀಯ ಒಕ್ಕೂಟ ವ್ಯವಸ್ಥೆಗೆ ಸ್ಪಷ್ಟ ನಿದರ್ಶನ**

ಜಿಎಸ್ಟಿ ಸಾಂವಿಧಾನಿಕ ತಿದ್ದುಪಡಿಯು ಜಿಎಸ್ಟಿ ಕೌನ್ಸಿಲ್ ಹೆಸರಿನ ಸಾಂವಿಧಾನಿಕ ಸಂಸ್ಥೆಯನ್ನು 60 ದಿನಗಳಲ್ಲಿ ಸ್ಥಾಪಿಸುವುದನ್ನು ಕಡ್ಡಾಯಗೊಳಿಸಿತ್ತು. ಜಿಎಸ್ಟಿ ಮಂಡಳಿ ಸರ್ಕಾರಕ್ಕೆ ಸಲಹೆ ನೀಡಲು ಕೇಂದ್ರ ಮತ್ತು ರಾಜ್ಯಗಳ ಸದಸ್ಯರನ್ನು ಒಳಗೊಂಡಿತ್ತು. ಈ ಮಂಡಳಿಗೆ ಕೇಂದ್ರ ಹಣಕಾಸು ಸಚಿವರು ಅಧ್ಯಕ್ಷರಾಗಿರುತ್ತಾರೆ, ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವರನ್ನು ಸದಸ್ಯರನ್ನಾಗಿ ಮಾಡಲಾಗುವುದು. ರಾಜ್ಯ ಹಣಕಾಸು ಸಚಿವರು ಅಥವಾ ರಾಜ್ಯ ಸರ್ಕಾರಗಳು ನಾಮನಿರ್ದೇಶನ ಮಾಡಿದ ಸಚಿವರುಗಳನ್ನು ಅದರ ಸದಸ್ಯರನ್ನಾಗಿ ಮಾಡಲಾಗುವುದು. ಈ ಪರಿಷತ್ತಿನಲ್ಲಿ, ಕೇಂದ್ರವು 1/3 ನೇ ಭಾಗದಷ್ಟು ಮತದಾನದ ಹಕ್ಕನ್ನು ಪಡೆದರೆ, ರಾಜ್ಯಗಳು 2/3 ನೇ ಭಾಗದ ಮತದಾನದ ಹಕ್ಕನ್ನು ಪಡೆಯುತ್ತವೆ. 3/4 ನೇ ಮತಗಳ ಫಲಿತಾಂಶದೊಂದಿಗೆ ಯಾವುದೇ ನಿರ್ಧಾರವನ್ನು ಕೈಗೊಳ್ಳಬಹುದಾಗಿರುತ್ತದೆ.

ಅಂತರ ರಾಜ್ಯ ‘ನಾಕ’ (ತಪಾಸಣಾ ಕೇಂದ್ರಗಳು)ಗಳನ್ನು ತೆರವು ಮಾಡಲಾಯಿತು. ಪ್ರವೇಶ ತೆರಿಗೆ ರದ್ದತಿಯೊಂದಿಗೆ ಸರಕುಗಳು ಮತ್ತೊಂದು ನಗರಕ್ಕೆ ಸಾಗಾಟವಾಗುವುದು ಸುಗಮವಾಯಿತು. ಜಿಎಸ್ಟಿಗೆ ಮುನ್ನ ಹಲವು ರಾಜ್ಯಗಳು ಶೇ.35ರಿಂದ ಶೇ.110ರಷ್ಟು ಮನರಂಜನಾ ತೆರಿಗೆಯನ್ನು ವಿಧಿಸುತ್ತಿದ್ದವು, ಅದು ಗಣನೀಯ ಇಳಿಕೆಯಾಯಿತು. ಈ ಹಿಂದೆ 235 ವಸ್ತುಗಳಿಗೆ ತೆರಿಗೆ ಹಾಕಲಾಗುತ್ತಿದ್ದು, ಅದು ಶೇ.31ಕ್ಕಿಂತ ಹೆಚ್ಚಾಗಿತ್ತು. ಜಿಎಸ್ಟಿ ಆ ತೆರಿಗೆಯನ್ನು 225 ವಸ್ತುಗಳಿಗೆ ಸಂಬಂಧಿಸಿದಂತೆ ಶೇ.28ಕ್ಕೆ ಇಳಿಸಿತು. ಉಳಿದ 10 ವಸ್ತುಗಳ ತೆರಿಗೆ ಶೇ.18ಕ್ಕೆ ಇಳಿಕೆಯಾಯಿತು.



# ಒಂದು ಜಿಎಸ್ಟಿ, ಹಲವು ಪ್ರಯೋಜನಗಳು

### ಈಗ ಉತ್ಪಾದನೆಗೆ ಬದಲಾಗಿ ಬಳಕೆಗೆ ತೆರಿಗೆ

ಉತ್ಪಾದನೆಯಾಗಿ ಗ್ರಾಹಕರನ್ನು ತಲುಪುವವರೆಗೆ ಹಲವಾರು ಹಂತಗಳಲ್ಲಿ ತೆರಿಗೆ ವಿಧಿಸುವ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಜಿಎಸ್ಟಿಯ ಒಂದು ಮೂಲಭೂತ ಲಕ್ಷಣವೆಂದರೆ ದೇಶಾದ್ಯಂತ, ಸರಪಳಿಯಾದ್ಯಂತ (ಸರಕುಗಳ ಉತ್ಪಾದನೆಯಿಂದ ಅದನ್ನು ಬಳಸುವವರೆಗೆ) ಇನ್ಪುಟ್ ಕ್ರೆಡಿಟ್ ನ ತಡೆರಹಿತ ಹರಿವಿರುತ್ತದೆ. ಇನ್ಪುಟ್ ಕ್ರೆಡಿಟ್ ಎಂದರೆ ಔಟ್ಪುಟ್ ಮೇಲೆ ತೆರಿಗೆ ಪಾವತಿಸುವ ಸಮಯದಲ್ಲಿ, ನೀವು ಈಗಾಗಲೇ ಇನ್ ಪುಟ್ ಗಳಲ್ಲಿ ಪಾವತಿಸಿದ ತೆರಿಗೆಯನ್ನು ಕಡಿಮೆ ಮಾಡಲಾಗುವುದು ಮತ್ತು ಬಾಕಿ ಮೊತ್ತವನ್ನು ಮಾತ್ರ ಪಾವತಿಸಬೇಕಾಗುತ್ತದೆ.

### ತೆರಿಗೆ ದರದ ಮೇಲೆ ಯಾವುದೇ ಮನಸೋಇಚ್ಛೆ ನಿರ್ಧಾರ ಇರುವುದಿಲ್ಲ

ಈಗ ಭಾರತ ಏಕೀಕೃತ ಮಾರುಕಟ್ಟೆಯಾಗಿದೆ. ಅಂತರರಾಜ್ಯ ತಪಾಸಣೆ ಕೇಂದ್ರಗಳನ್ನು ತೆಗೆದುಹಾಕಲಾಗಿದೆ ಮತ್ತು ಪ್ರವೇಶ ತೆರಿಗೆಯ ರದ್ಧತಿಯಿಂದಾಗಿ ಸರಕು ಮತ್ತು ಸರಂಜಾಮುಗಳ ಪ್ರವೇಶ ಸುಗಮವಾಗಿದೆ. ಜಿಎಸ್ಟಿಗೆ ಮುನ್ನ ಹಲವು ರಾಜ್ಯಗಳು ಶೇ.35ರಿಂದ ಶೇ.110ರವರೆಗೆ ಮನರಂಜನಾ ತೆರಿಗೆ ವಿಧಿಸುತ್ತಿದ್ದವು, ಈಗ ಅದು ಗಣನೀಯವಾಗಿ ತಗ್ಗಿದೆ. ರಾಜ್ಯಗಳಿಗೆ ಮೊದಲ ಐದು ವರ್ಷಗಳ ಕಾಲ ತಮ್ಮ ಆದಾಯದಲ್ಲಿ ಶೇ.14ರಷ್ಟು ಹೆಚ್ಚಳದ ಭರವಸೆಯನ್ನು ನೀಡಲಾಗಿದೆ.

ದೇಶದಲ್ಲಿ ಸರಕು ಮತ್ತು ಸೇವೆಗಳ ತೆರಿಗೆಯನ್ನು ಜಾರಿ ಮಾಡಲು ಪ್ರತಿಯೊಂದು ಹಂತದಲ್ಲಿಯೂ ನಿಯಂತ್ರಣ ಮತ್ತು ನಿರ್ದೇಶನ ನೀಡಲು ಜಿಎಸ್ಟಿ ಮಂಡಳಿಯನ್ನು ಸ್ಥಾಪಿಸಲಾಗಿದೆ. 2016ರ ಸೆಪ್ಟೆಂಬರ್ 22ರಿಂದ ಈವರೆಗೆ ಇದರ 43 ಸಭೆಗಳು ನಡೆದಿವೆ.

### ಹೆಚ್ಚುವರಿ ತೆರಿಗೆ ಹೊರೆ ಇಲ್ಲ

ಹಿಂದಿನ ತೆರಿಗೆ ಪದ್ಧತಿಯಲ್ಲಿ, ಹಲವು ವಿವಿಧ ಬಗೆಯ ತೆರಿಗೆಗಳನ್ನು ಒಂದೇ ವಸ್ತುವಿನ ಮೇಲೆ ವಿಧಿಸಲಾಗುತ್ತಿತ್ತು. ಹಲವು ಪ್ರಕರಣಗಳಲ್ಲಿ, ತೆರಿಗೆಯನ್ನು ಈಗಾಗಲೇ ಪಾವತಿಸಲಾದ ತೆರಿಗೆಯ ಮೇಲೂ ಹಾಕಲಾಗುತ್ತಿತ್ತು. ಕೆಲವು ವಸ್ತುಗಳು ಎರಡು ಅಥವಾ ಹೆಚ್ಚಿನ ಪ್ರವರ್ಗಕ್ಕೆ ಸೇರಿದ್ದ ಕಾರಣ ಹೀಗಾಗುತ್ತಿತ್ತು.

ಜಿಎಸ್ಟಿಯ ಇನ್ಪುಟ್ ಕ್ರೆಡಿಟ್ ವ್ಯವಸ್ಥೆ ಈ ಸಮಸ್ಯೆ ಪರಿಹರಿಸಿದ್ದು, ಸಿದ್ಧವಸ್ತು ಗ್ರಾಹಕರ ಕೈಗೆ ಅಗ್ಗದ ದರದಲ್ಲಿ ತಲುಪುವಂತೆ ಮಾಡಿದೆ.

**ಉದಾಹರಣೆಗೆ** – ನೀವು ಅಂತಿಮ ಅಥವಾ ವಾಸ್ತವ ಗ್ರಾಹಕ ಅಲ್ಲದಿದ್ದರೆ ಮತ್ತು ನೀವು ಜಿಎಸ್ಟಿಯನ್ನು ಮೊದಲ ಹಂತಗಳಲ್ಲಿ ಪಾವತಿಸಿದ್ದರೆ, ನೀವು ಅದಕ್ಕೆ ಕ್ರೆಡಿಟ್ ಪಡೆಯುತ್ತೀರಿ. ನೀವು ಈ ಕ್ರೆಡಿಟ್ ಗಳನ್ನು ಸರ್ಕಾರಕ್ಕೆ ಜಿಎಸ್ಟಿ ಪಾವತಿಸುವಾಗ ಬಳಕೆ ಮಾಡಬಹುದು. ಹೆಚ್ಚುವರಿಯಾಗಿ ನೀವು ಪ್ರತಿ ತಿಂಗಳೂ ಜಿಎಸ್ಟಿ ರಿಟರ್ನ್ಸ್ ಸಲ್ಲಿಸುವಾಗ ತೆರಿಗೆ ಕ್ರಿಡಿಟ್ ವ್ಯವಸ್ಥೆಯ ಮೂಲಕ ನಿಮ್ಮ ಕ್ರೆಡಿಟ್ ಗಳನ್ನು ಹೊಂದಾಣಿಕೆ ಮಾಡಬಹುದು.

### ಸಂಪೂರ್ಣ ಆನ್ ಲೈನ್ ವ್ಯವಸ್ಥೆ

ಜಿಎಸ್ಟಿಯ ಪ್ರಕಾರ, ಎಲ್ಲ ವಹಿವಾಟುಗಳ ಮಾಹಿತಿಯನ್ನು ಆನ್ ಲೈನ್ ನಲ್ಲಿ ನವೀಕರಿಸಬೇಕು. ಪ್ರತಿಯೊಂದು ವಹಿವಾಟಿನ ರಸೀತಿಯನ್ನು ಸಂಬಂಧಿತ ವ್ಯಕ್ತಿಗಳು ತಮ್ಮ ಬಳಿ ಇಟ್ಟುಕೊಳ್ಳಬೇಕು.

ಅವರು ಇನ್ಪುಟ್ ತೆರಿಗೆ ಕ್ರೆಡಿಟ್ ಅನ್ನು ತಮ್ಮ ಸಂಬಂಧಿತ ರಸೀತಿಗಳ ನೆರವಿನಿಂದ ಪಡೆದುಕೊಳ್ಳಬಹುದು. ವ್ಯವಹಾರಗಳು ಹೊಂದಿಕೆ ಆಗದೆ ಇದ್ದರೆ, ಆಗ ಅಸಮರ್ಪಕತೆಯು ಆನ್ ಲೈನ್ ನಲ್ಲಿಯೇ ಸಿಕ್ಕಿಬೀಳುತ್ತದೆ. ಪ್ರತಿಯೊಂದು ಹಂತದಲ್ಲಿ ಜಿಎಸ್ಟಿ ಪಾವತಿಸುವ ಜವಾಬ್ದಾರಿಯೊಂದಿಗೆ, ತೆರಿಗೆ ಪಾವತಿಯ ಸರಪಳಿ ಎಲ್ಲಿಯೂ ತುಂಡಾಗುವುದಿಲ್ಲ, ಕಾರಣ ಯಾವುದೇ ವ್ಯಾಪಾರಸ್ಥರು ತಮ್ಮ ಕ್ರೆಡಿಟ್ ಕಳೆದುಕೊಳ್ಳಲು ಬಯಸುವುದಿಲ್ಲ.

ಯಾವುದೇ ವಸ್ತುವಿನ ದರ ಹೆಚ್ಚಾಗದಂತೆ ಖಾತ್ರಿಪಡಿಸಲು ಪ್ರತಿಯೊಂದು ಅಲ್ಪಾವಧಿಯ ಸಮಯದಲ್ಲಿ ತೆರಿಗೆ ಹಂತವನ್ನು ನಿಗದಿ ಮಾಡಲಾಗುತ್ತದೆ. ಶ್ರೀಸಾಮಾನ್ಯರು ಬಳಸುವ ವಸ್ತುವನ್ನು ಶೂನ್ಯ ತೆರಿಗೆ ಅಥವಾ ಶೇ.5ರ ತೆರಿಗೆ ವ್ಯಾಪ್ತಿಗೆ ತರಲಾಗಿದೆ. ರಿಟರ್ನ್ಸ್ ಸಲ್ಲಿಕೆ ಮತ್ತು ಆದಾಯ ತೆರಿಗೆ ನಿರ್ಧರಣೆ ಸಹ ಆನ್ ಲೈನ್ ಆಗಿದ್ದು, ದೇಶದಲ್ಲಿ ಇನ್ಸ್ ಪೆಕ್ಟರ್ ರಾಜ್ ಅನ್ನು ನಿರುತ್ತೇಜನಗೊಳಿಸುತ್ತದೆ.

ಮೊದಲ 5 ವರ್ಷಗಳವರೆಗೆ ಆದಾಯದಲ್ಲಿ ಶೇಕಡಾ



# ಎಲ್ಲರಿಗೂ ಜಿಎಸ್ಟಿ ಪ್ರಯೋಜನ

**ಜಿಎಸ್ಟಿಯ ಜಾರಿ ತೆರಿಗೆ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಒಂದೆಡೆ ಸರ್ಕಾರದಿಂದ ತೆರಿಗೆ ಸಂಗ್ರಹಣೆಯನ್ನು ಇದು ಸುಗಮಗೊಳಿಸಿದ್ದರೆ, ಮತ್ತೊಂದೆಡೆ ಇದು ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಬ್ಬರಿಗೂ ಪ್ರಯೋಜನಕಾರಿಯಾಗಿದೆ.**

## ಗ್ರಾಹಕರಿಗೆ ಪ್ರಯೋಜನ



- ಒಂದೇ ವಸ್ತುವಿನ ಮೇಲೆ ಹಾಕಲಾಗುತ್ತಿದ್ದ ಹಲವು ಬಗೆಯ ತೆರಿಗೆಯನ್ನು ತೆಗೆದುಹಾಕಲಾಗಿದೆ. ಅಲ್ಲದೆ, ಈಗಾಗಲೇ ಪಾವತಿಸಿದ ತೆರಿಗೆಗಳ ಮೇಲೂ ತೆರಿಗೆ ವಿಧಿಸುವ ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ, ಇದು ಸರಕುಗಳ ಬೆಲೆ ಏರಿಕೆಯನ್ನು ತಡೆಯುತ್ತದೆ. ಜಿಎಸ್ಟಿ ಪೂರ್ವ ಅವಧಿಗೆ ಹೋಲಿಸಿದರೆ ಸರಕುಗಳ ಬೆಲೆಯಲ್ಲಿ ಇಳಿಕೆ ಕಂಡುಬಂದಿದೆ.
- ಅತ್ಯಾವಶ್ಯಕ ವಸ್ತುಗಳ ಮೇಲಿನ ತೆರಿಗೆಯನ್ನು ಅತ್ಯಂತ ಕಡಿಮೆ ಇಡಲಾಗಿದೆ. ಇದು ಶ್ರೀಸಾಮಾನ್ಯರಿಗೆ ಅಗ್ಗದ ದರದಲ್ಲಿ ನಿತ್ಯ ಬಳಕೆಯ ವಸ್ತುಗಳನ್ನು ಖರೀದಿಸಲು ಅವಕಾಶ ಕಲ್ಪಿಸುತ್ತದೆ. ಇದು ಬಡವರಿಗೆ ಮತ್ತು ಕಡಿಮೆ ಆದಾಯದ ಜನರಿಗೆ ನಿರಾಳ ತರುತ್ತದೆ.

## ವ್ಯಾಪಾರಸ್ಥರಿಗೆ ಪ್ರಯೋಜನ



- ಈ ಹಿಂದೆ 17 ತೆರಿಗೆಗಳಿದ್ದವು, ಅಂದರೆ, ತೆರಿಗೆದಾರರು 17 ರಿಟರ್ನ್ಸ್ ಸಲ್ಲಿಕೆ ಮಾಡುವ ತೊಂದರೆ ಎದುರಿಸಬೇಕಾಗಿತ್ತು ಮತ್ತು 17 ನಿರ್ಧರಣೆಯಲ್ಲಿ ಸಾಗಬೇಕಿತ್ತು. ಹೆಚ್ಚುವರಿಯಾಗಿ, ಆಕ್ಟ್ರಾಯ್ ನಲ್ಲಿ ಪ್ರವೇಶ ತೆರಿಗೆಯ ಹೆಚ್ಚುವರಿ ಹೊರೆಯನ್ನು ಹೊರಬೇಕಾಗಿತ್ತು. ಜಿಎಸ್ಟಿ ಈ ಎಲ್ಲ ತೊಡಕುಗಳಿಂದ ಮುಕ್ತಿ ನೀಡಿದೆ.
- ಈಗ ಎಲ್ಲ ದಸ್ತಾವೇಜೀಕರಣ ಮತ್ತು ರಿಟರ್ನ್ಸ್ ಸಲ್ಲಿಕೆ ಆನ್ ಲೈನ್ ಆಗಿದೆ. ಇದು ವ್ಯಾಪಾರಸ್ಥರಿಗೆ ಪದೇ ಪದೇ ತೆರಿಗೆ ಕಚೇರಿಗೆ ಭೇಟಿ ನೀಡುವ ಶ್ರಮ ತಪ್ಪಿಸಿದೆ. ಇನ್ಪುಟ್ ಕ್ರೆಡಿಟ್ ಮೂಲಕ ಮರುಪಾವತಿಯ ಸೌಲಭ್ಯವೂ ಇದೆ.

## ಸರ್ಕಾರಕ್ಕೆ ಪ್ರಯೋಜನ



- ಜಿಎಸ್ಟಿ ಪದ್ಧತಿಗೆ ಮೊದಲು, ಹಲವರು ತೆರಿಗೆ ತಪ್ಪಿಸುತ್ತಿದ್ದ ಕಾರಣ ತೆರಿಗೆ ದರ ಅಧಿಕವಾಗಿತ್ತು. ಜಿಎಸ್ಟಿ ಪ್ರತಿಯೊಬ್ಬ ವರ್ತಕರೂ ನೊಂದಾಯಿಸಿಕೊಳ್ಳಲು ಅವಕಾಶ ನೀಡಿದೆ. ಜಿಎಸ್ಟಿ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ತೆರಿಗೆದಾರರನ್ನು ಸೇರ್ಪಡೆ ಮಾಡುವುದು ವಿಸ್ತಾರವಾಗಿದೆ. ಈ ಹಿಂದೆ ಬಿಟ್ಟು ಹೋಗಿದ್ದಂತಹ ವ್ಯಾಪಾರಸ್ಥರನ್ನು ತೆರಿಗೆ ಸರಪಣಿಗೆ ಸೇರ್ಪಡೆ ಮಾಡಲಾಗಿದೆ. ಇದು ಆದಾಯದ ಹೆಚ್ಚಳಕ್ಕೆ ಕಾರಣವಾಗಿದೆ. ರಿಟರ್ನ್ಸ್ ಸಲ್ಲಿಕೆಯ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ.
- ಆನ್ ಲೈನ್ ವ್ಯವಸ್ಥೆ ಮೂಲಕ ಜಿಎಸ್ಟಿ ರಿಟರ್ನ್ಸ್ ಸಲ್ಲಿಸುವಾಗ ಪ್ರತಿ ಹಂತದ ರಸೀತಿಗಳನ್ನು ಹೊಂದಿಸಿ ನೋಡಲಾಗುತ್ತದೆ. ರಸೀತಿಗಳಲ್ಲಿ ಯಾವುದೇ ತಾರತಮ್ಯ ಇಲ್ಲದಿದ್ದರೆ, ವ್ಯಾಪಾರಸ್ಥರಿಗೆ ಮೊದಲ ಹಂತದಲ್ಲಿ ಜಮಾ ಆಗಿರುವ ತೆರಿಗೆ ಕ್ರೆಡಿಟ್ ಪ್ರಯೋಜನಕ್ಕೆ ಅವಕಾಶ ನೀಡಲಾಗುತ್ತದೆ, ಆ ಮೂಲಕ ತೆರಿಗೆ ವಂಚನೆಯನ್ನು ತಡೆಯಲಾಗುತ್ತದೆ.
- ಕಾಳಸಂತೆ ಮತ್ತು ಕಳ್ಳಸಾಗಣೆ ಸಾಧ್ಯತೆಯನ್ನು ಕಡಿತಗೊಳಿಸಲಾಗಿದೆ. ಈಗ ಪ್ರತಿಯೊಂದರ ಬೆಲೆಯೂ ದೇಶದೆಲ್ಲೆಡೆ ಒಂದೇ ಆಗಿದೆ.
- ರಾಜ್ಯಗಳಿಗೆ ಜಿಎಸ್ಟಿಯಿಂದ ಆಗುವ ಆದಾಯದ ನಷ್ಟ ತಪ್ಪಿಸಲು ಉಪಕರ ಅಥವಾ ಜಿಎಸ್ಟಿ ಉಪಕರದ ಪರಿಹಾರವನ್ನು 5 ವರ್ಷಗಳ ಅವಧಿಗೆ ಜಾರಿ ಮಾಡಲಾಗಿದೆ. ಪಾನ್ ಮಸಾಲಾ, ತಂಬಾಕು ಅಥವಾ ಅದರ ಉತ್ಪನ್ನಗಳು, ಕಲ್ಲಿದ್ದಲು, ಸೋಡಾ, ಲೆಮೆನೋಡ್ ಇತ್ಯಾದಿ, ಮೋಟಾರು ಕಾರುಗಳು, ಜಿಎಸ್ಟಿ ಉಪಕರಕ್ಕೆ ಒಳಪಟ್ಟಿರುತ್ತವೆ.

14ರಷ್ಟು ಹೆಚ್ಚಳವಾಗಲಿದೆ ಎಂದು ರಾಜ್ಯಗಳಿಗೆ ಭರವಸೆ ನೀಡಲಾಗಿದೆ. ಜಿಎಸ್ಟಿ ಅನುಷ್ಠಾನವು ದೇಶದ ವ್ಯಾಪಾರ ಚಟುವಟಿಕೆಗಳು ಮತ್ತು ಜಿಡಿಪಿಯನ್ನು ಹೆಚ್ಚಿಸುವುದಲ್ಲದೆ ಹಣದುಬ್ಬರವನ್ನು ನಿಗ್ರಹಿಸಲು ಸಹಕಾರಿಯಾಗಿದೆ. ಜಿಎಸ್ಟಿ ತುಂಬಾ ವ್ಯಾಪಾರ-ಸ್ನೇಹಿ ವಾತಾವರಣವನ್ನು ರೂಪಿಸಿದೆ. 2025ರ ವೇಳೆಗೆ 5 ಟ್ರಿಲಿಯನ್ ಆರ್ಥಿಕ ರಾಷ್ಟ್ರವಾಗುವ ಮಹತ್ವಾಕಾಂಕ್ಷೆಯ ಗುರಿಯನ್ನು ದೇಶ ಹಾಕಿಕೊಂಡಿದ್ದು, ಇದರಲ್ಲಿ ಜಿಎಸ್ಟಿ ನಿರ್ಣಾಯಕ ಪಾತ್ರ ವಹಿಸುತ್ತದೆ. ■




ಹಂಸಾ ಮೆಹ್ತಾ

ದುರ್ಗಾಬಾಯಿ ದೇಶ್‌ಮುಖ್

# ಸ್ವಾತಂತ್ರ್ಯದಿಂದ ಗಣರಾಜ್ಯದವರೆಗೆ ಮಹಿಳೆಯರ ಪಾತ್ರದ ಯಶೋಗಾಥೆ

ಭಾರತದ ದಿಟ್ಟ ಮಹಿಳೆಯರು ಯಾವುದೇ ಕ್ಷೇತ್ರದಲ್ಲಿ, ಯಾವುದೇ ಸಮಯದಲ್ಲಿ ಪುರುಷರಿಗಿಂತ ಹಿಂದೆ ಬಿದ್ದಿಲ್ಲ. ಭಾರತದ ಇತಿಹಾಸವು ಅವರ ಅದಮ್ಯ ಧೈರ್ಯ, ಶೌರ್ಯ ಮತ್ತು ಸಾಧನೆಗಳಿಂದ ತುಂಬಿದೆ. ಸ್ವಾತಂತ್ರ್ಯ ಹೋರಾಟದಿಂದ ಆಧುನಿಕ ಭಾರತದ ನಿರ್ಮಾಣದವರೆಗೆ ಅವರ ಕೊಡುಗೆ ಅಸಾಧಾರಣವಾಗಿದ್ದು, ಅವರು ಯುಗಗಳಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ

ತಾಯಿ ಭಾರತಿಯನ್ನು ಗುಲಾಮಗಿರಿಯ ಸಂಕೋಲೆಗಳಿಂದ ಬಂಧಮುಕ್ತಗೊಳಿಸುವ ಸ್ವಾತಂತ್ರ್ಯ ಸಂಗ್ರಾಮದಿಂದ ಆಧುನಿಕ ಭಾರತದ ನಿರ್ಮಾಣದವರೆಗೆ ಭಾರತದ ಮಹಿಳೆಯರ ಕೊಡುಗೆ ಕುರಿತಂತೆ ಅವರ ಹೆಸರುಗಳು ಶತಶತಮಾನಗಳ ಇತಿಹಾಸದ ಪುಟಗಳಲ್ಲಿ ಕೆತ್ತಲಾಗಿದೆ. ಅಂತಹ ಇಬ್ಬರು ಪ್ರಮುಖರ ಹೆಸರುಗಳು ಹಂಸಾ ಮೆಹ್ತಾ ಮತ್ತು ದುರ್ಗಾಬಾಯಿ ದೇಶ್‌ಮುಖ್. ಸಂವಿಧಾನದ ಕರಡು ರಚನೆಯಲ್ಲಿ ಹಾಗೂ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ ಲಿಂಗ ಸಮಾನತೆಗಾಗಿ ಒತ್ತಾಯಿಸುವುದರಲ್ಲಿ ಹಂಸಾ ಮೆಹ್ತಾ ಪ್ರಮುಖ ಪಾತ್ರ ವಹಿಸಿದ್ದಾರೆ. ದುರ್ಗಾಬಾಯಿ ದೇಶ್‌ಮುಖ್ ದೇಶದ ಸೇವೆಗೆ ಸ್ವಯಂಸೇವಕಿಯಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಹಂಸಾ ಮೆಹ್ತಾ ಅವರ ಪ್ರಯತ್ನದ ಫಲವಾಗಿ ವಿಶ್ವಸಂಸ್ಥೆ ಅಂತಿಮವಾಗಿ ಪುರುಷರ ಹಕ್ಕುಗಳ ಘೋಷಣೆಯನ್ನು ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಎಂದು ಗುರುತಿಸಿತು. ಅದಕ್ಕಾಗಿಯೇ ಮಾನವ ಹಕ್ಕುಗಳ ಕೊಡುಗೆಗಾಗಿ ಆವರನ್ನು ವಿಶ್ವದ ಪ್ರಥಮ ಮಹಿಳೆ ಎಂದೂ ಕರೆಯುತ್ತಾರೆ. ಮತ್ತೊಂದೆಡೆ, ದುರ್ಗಾಬಾಯಿ ಅವರು 'ಜೋನ್ ಆಫ್ ಆರ್ಕ್' ಎಂದೇ ಜನರ ನಡುವೆ ಜನಪ್ರಿಯರಾಗಿದ್ದಾರೆ, ಅವರ ಅದ್ಭುತ ಮಾತುಗಾರಿಕೆ, ಧೈರ್ಯಶಾಲಿ ಪ್ರವೃತ್ತಿ ಮತ್ತು ದೃಢ ನಿಶ್ಚಯದ ವ್ಯಕ್ತಿತ್ವ, ಕೋಟ್ಯಂತರ ಜನರಿಗೆ ನೀಡಿದ ಪ್ರೇರಣೆಯ ಕೊಡುಗೆ ಚಿರಸ್ಥಾಯಿಯಾಗಿದೆ.

## ಹಂಸಾ ಮೆಹ್ತಾ: ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಗೆ ಅಸಾಧಾರಣ ಕೊಡುಗೆ



ಸರೋಜಿನಿ ನಾಯ್ಡು ಅವರಿಂದ ಸ್ಫೂರ್ತಿ ಪಡೆದ, ಹಂಸಾ ಮೆಹ್ತಾ ಅವರು ತಮ್ಮ ಜೀವನದ ಆರಂಭದ ಅವಧಿಯಲ್ಲಿ ಮಹಿಳಾ ಆಂಧೋಲನಕ್ಕೆ ಧುಮುಕಿದರು, ಅವರು ಸುಧಾರಕಿ, ಸಾಮಾಜಿಕ ಕಾರ್ಯಕರ್ತೆ, ಶಿಕ್ಷಣ ತಜ್ಞೆ, ಸ್ವಾತಂತ್ರ್ಯ ಹೋರಾಟಗಾರ್ತಿ, ಸ್ತ್ರೀಸಮಾನತೆಯ ಹೋರಾಟಗಾರ್ತಿ ಮತ್ತು ಲೇಖಕರಾಗಿದ್ದರು. ಅಷ್ಟೇ ಅಲ್ಲ ಮಹಾತ್ಮಾ ಗಾಂಧಿ ಅವರ ಶಿಷ್ಯೆಯಾಗಿದ್ದರು. ಹಂಸಾ ಜೀವರಾಜ್ ಮೆಹ್ತಾ 1897ರ ಜುಲೈ 3, ರಂದು ಸೂರತ್ ನಲ್ಲಿ ಜನಿಸಿದರು. ಅವರು ಬರೋಡಾ ಕಾಲೇಜಿನಲ್ಲಿ ತತ್ವಶಾಸ್ತ್ರದಲ್ಲಿ ಪದವಿ ಪೂರೈಸಿ, ಪತ್ರಿಕೋದ್ಯಮ ಮತ್ತು ಸಮಾಜಶಾಸ್ತ್ರದ ಅಧ್ಯಯನಕ್ಕಾಗಿ ಇಂಗ್ಲೆಂಡ್ ಗೆ ತೆರಳಿದರು. 1930ರಲ್ಲಿ ಅವರು ಮಹಾತ್ಮಾ ಗಾಂಧಿ ನೇತೃತ್ವದ ಸ್ವಾತಂತ್ರ್ಯ ಚಳವಳಿ ಸೇರಿಕೊಂಡಾಗ ಅವರ ವ್ಯಕ್ತಿತ್ವದ ಬಹುಮುಖ ಪ್ರತಿಭೆಯ ಅನಾವರಣವಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಕ್ಕಾಗಿ ಅವರು 1932ರಿಂದ 1940ರವರೆಗೆ ಕಾರಾಗೃಹವಾಸ ಅನುಭವಿಸಿದರು. ಏಕರೂಪ ನಾಗರಿಕ ಸಂಹಿತೆ ರಾಷ್ಟ್ರೀಯ ಏಕತೆಗೆ ಅತ್ಯಗತ್ಯ ಎಂಬುದು ಅವರ ನಂಬಿಕೆಯಾಗಿತ್ತು, ಈ ವಿಚಾರದಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರೊಂದಿಗೆ ಅವರಿಗೆ ಅಭಿಪ್ರಾಯಭೇದವಿತ್ತು. ಅವರು 1947-48ರಲ್ಲಿ ವಿಶ್ವ ಸಂಸ್ಥೆಯಲ್ಲಿ ಮಾನವ ಹಕ್ಕುಗಳ ಆಯೋಗದ ಭಾರತೀಯ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದರು ಮತ್ತು ಮಾನವ ಹಕ್ಕುಗಳ ಐತಿಹಾಸಿಕ ಘೋಷಣೆ ಹೆಚ್ಚು ಲಿಂಗ ಸಂವೇದಿಯಾಗಿರಲು ಅಮೂಲ್ಯ ಕೊಡುಗೆ ನೀಡಿದರು.

**2018ರ ಡಿಸೆಂಬರ್ ನಲ್ಲಿ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂತೋನಿಯೋ ಗುತೆರೆಸ್ ಅವರು ಮಾನವ ಹಕ್ಕುಗಳಿಗೆ ಹಂಸಾ ಮೆಹ್ತಾ ಅವರು ನೀಡಿದ ಮಹತ್ವದ ಕೊಡುಗೆಯನ್ನು ಶ್ಲಾಘಿಸಿದ್ದರು.**

ಹಂಸಾ ಮೆಹ್ತಾ ಭಾರತದ ಸಂವಿಧಾನ ಕರಡು ರಚನಾ ಸಮಿತಿಯ ಪ್ರಮುಖ ಸದಸ್ಯರೂ ಆಗಿದ್ದರು ಮತ್ತು 1947ರ ಆಗಸ್ಟ್ 14ರ ಮಧ್ಯರಾತ್ರಿಯಲ್ಲಿ ಅಧಿಕಾರ ವರ್ಗಾವಣೆಯ ಐತಿಹಾಸಿಕ ಸಂದರ್ಭದಲ್ಲಿ ಭಾರತೀಯ ಮಹಿಳೆಯರ ಪರವಾಗಿ ರಾಷ್ಟ್ರಧ್ವಜವನ್ನು ಎತ್ತಿಹಿಡಿದ ಹೆಗ್ಗಳಿಕೆಯೂ ಅವರದಾಗಿದೆ. ಡಿಸೆಂಬರ್ 2018ರಲ್ಲಿ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂತೋನಿಯೊ ಗುತೆರೆಸ್ ಅವರು ಮಾನವ ಹಕ್ಕುಗಳ ಮಹತ್ವದ ಕೊಡುಗೆಗಾಗಿ ಹಂಸಾ ಮೆಹ್ತಾ ಅವರನ್ನು ಶ್ಲಾಘಿಸಿದ್ದರು. "ಭಾರತದ ಹಂಸಾ ಮೆಹ್ತಾ ಅವರಿಲ್ಲದೆ ಇದ್ದಿದ್ದರೆ, ಪುರುಷರ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಬಗ್ಗೆ ಮಾತನಾಡುತ್ತಿದ್ದೆವೇ ಹೊರತು ಮಾನವ ಹಕ್ಕುಗಳ ಕುರಿತಾಗಿ ಅಲ್ಲ" ಎಂದು ಅವರು ಪ್ರತಿಕ್ರಿಯಿಸಿದ್ದರು. ಅಷ್ಟೇ ಅಲ್ಲ, ಹಂಸಾ ಮೆಹ್ತಾ ಸಮಿತಿ ಸುಧಾರಣೆ ಎಂದು ಕರೆಯಲಾಗುವ ಹದಿನಾಲ್ಕು ವರ್ಷಗಳವರೆಗಿನ ಬಾಲಕಿಯರಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಅವರು ಪ್ರತಿಪಾದಿಸಿದ್ದರು. ಅವರು ಸ್ವತಃ ಅಂತರ್ಜಾತಿ ವಿವಾಹದ ವಿರೋಧವನ್ನು ಎದುರಿಸಬೇಕಾಯಿತು ಮತ್ತು ಅವರನ್ನು ಅವರ ಜಾತಿಯಿಂದ ಹೊರಹಾಕಲಾಗಿತ್ತು. ತಮ್ಮ ಕೊಡುಗೆಗಳಿಗಾಗಿ 1959ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದ ಮೆಹ್ತಾ, 1995 ರ ಏಪ್ರಿಲ್ 4ರಂದು ನಿಧನ ಹೊಂದಿದರು.

## ದುರ್ಗಾಬಾಯಿ ದೇಶ್‌ಮುಖ್: ಸ್ವಾತಂತ್ರ್ಯ ಚಳವಳಿಯ ಹಿರಿಯ ನಾಯಕಿ



1909ರಲ್ಲಿ ಆಂಧ್ರಪ್ರದೇಶದಲ್ಲಿ ಜನಿಸಿದ ದುರ್ಗಾಬಾಯಿ ತಮ್ಮ ತಂದೆಯಿಂದ ಪ್ರೇರಿತರಾಗಿ ಬಾಲ್ಯದಿಂದಲೂ ಮಾನವೀಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕೇವಲ 10 ವರ್ಷದವರಾಗಿದ್ದಾಗ, ದುರ್ಗಾಬಾಯಿ ಕಾಕಿನಾಡದಲ್ಲಿ ಬಾಲಕಿಯರಿಗಾಗಿ ಹಿಂದಿ ಶಾಲೆ ತರೆದು, ನಿರ್ವಹಿಸಿದರು. ಸ್ವತಃ ಮಹಾತ್ಮಾ ಗಾಂಧೀ ಅವರೇ ಕಸ್ತೂರಾ ಬಾ ಗಾಂಧಿ ಮತ್ತು ಸಿ.ಎಫ್. ಆಂಡ್ರೂಸ್ ಅವರೊಂದಿಗೆ ಈ ಶಾಲೆಯ ಪರಿಶೀಲನೆಗೆ ಬಂದಿದ್ದರು. ಆಗ ದುರ್ಗಾಬಾಯಿ ಅವರಿಗೆ ಕೇವಲ 12 ವರ್ಷ. ಗಾಂಧೀಜಿ ಅವರ ಪರಿಚಯವಾದ ಬಳಿಕ, ಅವರ ಮುಂದೆಯೇ ತಮ್ಮ ವಿದೇಶೀ ವಸ್ತ್ರಗಳನ್ನು ಸುಟ್ಟಿದ್ದಲ್ಲದೆ ತಮ್ಮ ಬೆಲೆಬಾಳುವ ಆಭರಣಗಳನ್ನು ಅವರಿಗೆ ದಾನವಾಗಿ ನೀಡಿ, ಸ್ವಯಂಸೇವಕಿಯಾಗಿ ತಮ್ಮನ್ನು ದೇಶಕ್ಕೆ ಸಮರ್ಪಿಸಿಕೊಂಡರು. ದುರ್ಗಾಬಾಯಿ ಅವರ ವಾಗ್ಮಿತೆ ಅದ್ಭುತವಾಗಿತ್ತು ಮತ್ತು ಜನರು ಅದರಿಂದ ಪ್ರಭಾವಿತರಾಗುತ್ತಿದ್ದರು. ಅವರ ಧೈರ್ಯ ಮತ್ತು ದೃಢ ವ್ಯಕ್ತಿತ್ವಕ್ಕಾಗಿ ಜನರು ಅವರನ್ನು 'ಜೋನ್ ಆಫ್ ಆರ್ಕ್' ಎಂದು ಕರೆಯುತ್ತಿದ್ದರು. 1930ರಿಂದ 1933ರವರೆಗೆ ಅವರು ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಮೂರು ಬಾರಿ ಸೆರೆವಾಸ ಅನುಭವಿಸಿದರು. ಅವರು ಭಾರತೀಯ ಸಂವಿಧಾನದ ರಚನೆಯಲ್ಲಿ ಅಮೂಲ್ಯ ಕೊಡುಗೆ ನೀಡಿದರು. ಮಹಿಳೆಯರ ಸಾಮಾಜಿಕ ಸ್ಥಾನಮಾನವನ್ನು ಸುಧಾರಿಸುವಲ್ಲಿ ಅವರು ಸದಾ ಸಕ್ರಿಯರಾಗಿದ್ದರು ಮತ್ತು 'ಆಂಧ್ರ ಮಹಿಳಾ ಸಭಾ', 'ವಿಶ್ವ ವಿದ್ಯಾಲಯ ಮಹಿಳಾ ಸಂಘ', 'ನಾರಿ ರಕ್ಷಾ ಸಮಿತಿ', 'ನಾರಿ ನಿಕೇತನ್' ಸೇರಿದಂತೆ ಅನೇಕ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದ್ದರು. 1953ರಲ್ಲಿ ಅಂದಿನ ಕೇಂದ್ರ ಹಣಕಾಸು ಸಚಿವ ಮತ್ತು ಚಿಂತಕ ಚಿಂತಾಮಣಿ ದೇಶ್‌ಮುಖ್ ಅವರನ್ನು ಮದುವೆಯಾದ ನಂತರ ಅವರು ದುರ್ಗಾಬಾಯಿ ದೇಶಮುಖ್ ಎಂದೇ ಖ್ಯಾತರಾದರು. ಮದುವೆಯ ಸಮಯದಲ್ಲಿ ಅವರು ಯೋಜನಾ ಆಯೋಗದ ಸದಸ್ಯರಾಗಿದ್ದರು. ಆಂಧ್ರಪ್ರದೇಶದ ಹಳ್ಳಿಗಳಲ್ಲಿ ಶಿಕ್ಷಣವನ್ನು ಪಸರಿಸಿದ ಕಾರಣಕ್ಕಾಗಿ ಅವರಿಗೆ 'ನೆಹರೂ ಸಾಕ್ಷರತಾ ಪ್ರಶಸ್ತಿ' ನೀಡಲಾಯಿತು. ಅವರು 1981ರ ಮೇ 9ರಂದು ತಮ್ಮ 71ನೇ ವಯಸ್ಸಿನಲ್ಲಿ ಹೈದರಾಬಾದಿನಲ್ಲಿ ನಿಧನಹೊಂದಿದರು. ■

**1930ರಿಂದ 1933ರ ನಡುವೆ ಅವರು ಉಪ್ಪಿನ ಸತ್ಯಾಗ್ರಹದ ವೇಳೆ ಮೂರು ಬಾರಿ ಕಾರಾಗೃಹ ವಾಸ ಅನುಭವಿಸಿದರು.**



# ‘ಒಂದು ಭೂಮಿ’, ‘ಒಂದು ಆರೋಗ್ಯ’ ಮಂತ್ರ

ಜಿ -7 ನಂತಹ ಪ್ರಮುಖ ಜಾಗತಿಕ ವೇದಿಕೆಗಳಲ್ಲಿ ಭಾರತದ ಪಾತ್ರ ಹೆಚ್ಚಾದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ದೃಷ್ಟಿಕೋನವನ್ನು ಜಗತ್ತಿಗೆ ಪ್ರಸ್ತುತಪಡಿಸಿದ್ದಾರೆ ಮತ್ತು ಅವರ ಪರಿಸರ ಬದ್ಧತೆಗಳನ್ನು ಪುನರುಚ್ಚರಿಸಿದ್ದಾರೆ. ಅವರ ದೂರದರ್ಶಿತ್ವದಿಂದ ನವ ಭಾರತದ ನಿರ್ಮಾಣದ ಮಾರ್ಗಸೂಚಿಗಳು ಹೊರಹೊಮ್ಮಿವೆ. ಜಿ 7 ಶೃಂಗಸಭೆಗೆ ಒಂದು ವಾರ ಮೊದಲು ಭಾರತವು 2025ರ ಹೊತ್ತಿಗೆ ಪೆಟ್ರೋಲ್ ನಲ್ಲಿ ಶೇ,20ರಷ್ಟು ಎಥೆನಾಲ್ ಮಿಶ್ರಣ ಮಾಡುವ ಗುರಿಯನ್ನು ಮುಂದಿಟ್ಟಿತ್ತು ಎಂಬ ಅಂಶದಿಂದ ಪರಿಸರ ಸಂರಕ್ಷಣೆಗೆ ದೇಶದ ಬದ್ಧತೆಯನ್ನು ಅಳೆಯಬಹುದಾಗಿದೆ.

ಸರ್ವಾಧಿಕಾರ, ಭಯೋತ್ಪಾದನೆ, ಹಿಂಸಾತ್ಮಕ ತೀವ್ರಗಾಮೀತನ, ತಪ್ಪು ಮಾಹಿತಿ ಮತ್ತು ಆರ್ಥಿಕ ದಬ್ಬಾಳಿಕೆಯಿಂದ ಉಂಟಾಗುವ ವಿವಿಧ ಬೆದರಿಕೆಗಳಿಂದ ಮೌಲ್ಯಗಳನ್ನು ರಕ್ಷಿಸುವ ನಿಟ್ಟಿನಲ್ಲಿ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತವು, ಶೃಂಗಸಭೆಯಲ್ಲಿ ಜಿ 7 ಮತ್ತು ಅತಿಥಿ ರಾಷ್ಟ್ರಗಳ ನೈಸರ್ಗಿಕ ಮಿತ್ರನಾಗಿ ಹೊರಹೊಮ್ಮಿದೆ. ಕಳೆದ ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ವಿಶ್ವದ ಏಳು ಪ್ರಮುಖ ಆರ್ಥಿಕ ಶಕ್ತಿಗಳು ಜೂನ್ 12-13ರಂದು ಒಂದೇ ವೇದಿಕೆಯಲ್ಲಿ ಜೊತೆಗೂಡಿದ್ದವು. ವಿಶ್ವದ ಏಳು ಪ್ರಮುಖ ಆರ್ಥಿಕ ರಾಷ್ಟ್ರಗಳಾದ - ಅಮೆರಿಕ, ಜಪಾನ್, ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ ರಾಷ್ಟ್ರಗಳು ಬ್ರಿಟನ್ ಆತಿಥ್ಯವಹಿಸಿದ್ದ ಈ ಸಮಾವೇಶದಲ್ಲಿ ಭಾಗಿಯಾಗಿದ್ದವು.

ಜಿ-7 ಅಧ್ಯಕ್ಷತೆ ವಹಿಸಿದ್ದ ಬ್ರಿಟನ್, ಭಾರತ, ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ ಮತ್ತು ದಕ್ಷಿಣ ಆಫ್ರಿಕಾಗಳನ್ನು ಅತಿಥಿ ರಾಷ್ಟ್ರಗಳಾಗಿ ಈ ಶೃಂಗಸಭೆಗೆ ಆಹ್ವಾನಿಸಿತ್ತು. ಈ ಸಂದರ್ಭದಲ್ಲಿ ಸಭೆಯನ್ನುದ್ದೇಶಿಸಿ ವರ್ಚುವಲ್ ಮೂಲಕ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಸಮಗ್ರ ಸಮಾಜ ಅಂದರೆ, ಕೈಗಾರಿಕೆ, ನಾಗರಿಕ ಸಮಾಜ ಮತ್ತು ಸರ್ಕಾರದ ಸಂಘಟಿತ ಪ್ರಯತ್ನಗಳ ಮುನ್ನೋಟದೊಂದಿಗೆ ‘ಒಂದು ಭೂಮಿ, ಒಂದು ಆರೋಗ್ಯ’ ಎಂಬ ಮಂತ್ರವನ್ನು ನೀಡಿದರು.

## ಜಿ7 ನಲ್ಲಿ ಪ್ರಧಾನಮಂತ್ರಿಯವರು ಮಾಡಿದ ಭಾಷಣದ ಪ್ರಧಾನ ಅಂಶಗಳು



### ಆರೋಗ್ಯ ಮತ್ತು ಕೋವಿಡ್ ಸಂಕ್ರಾಮಿಕದ ಕುರಿತು......

- ಒಂದು ಭೂಮಿ - ಒಂದು ಆರೋಗ್ಯ ಮಂತ್ರವನ್ನು ನೀಡಿದ ಪ್ರಧಾನಮಂತ್ರಿ ಮೋದಿ ಅವರು, ಸೋಂಕು ಪತ್ತೆಹಚ್ಚುವಿಕೆ ಮತ್ತು ಲಸಿಕೆ ನಿರ್ವಹಣೆಗೆ ಭಾರತವು ಡಿಜಿಟಲ್ ಪರಿಕರಗಳನ್ನು ಯಶಸ್ವಿಯಾಗಿ ಬಳಸಿದ ಬಗ್ಗೆಯೂ ಮಾತನಾಡಿದರು. ತನ್ನ ಅಭಿವೃದ್ಧಿ ಮತ್ತು ಪರಿಣತಿಯನ್ನು ಇತರ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಹಂಚಿಕೊಳ್ಳುವ ಭಾರತದ ಆಶಯವನ್ನು ಅವರು ತಿಳಿಸಿದರು.
- ಕರೋನಾ ಲಸಿಕೆಯನ್ನು ಹಕ್ಕುಸ್ವಾಮ್ಯ ಮುಕ್ತವಾಗಿಸಲು ಪ್ರಸ್ತಾಪಿಸಿದ ಪ್ರಧಾನಮಂತ್ರಿಯವರು, ಜಾಗತಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲು ಮಾಡಲಾಗುತ್ತಿರುವ ಸಾಮೂಹಿಕ ಪ್ರಯತ್ನಗಳಿಗೆ ಭಾರತದ ಬೆಂಬಲದ ಸಂಕಲ್ಪ ಮಾಡಿದರು. ಕೋವಿಡ್ ಸಂಬಂಧಿತ ತಂತ್ರಜ್ಞಾನಗಳ ಮೇಲೆ ಟಿ.ಆರ್.ಐ.ಪಿ.ಎಸ್. ವಿನಾಯಿತಿಗಾಗಿ ಡಬ್ಲ್ಯು.ಟಿ.ಓ.ದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನೀಡಿದ ಪ್ರಸ್ತಾವನೆಗೆ ಅವರು ಜಿ-7 ರ ಬೆಂಬಲವನ್ನು ಕೋರಿದರು.

## ಪರಿಸರಾತ್ಮಕ ಬದ್ಧತೆಗಳ ಕುರಿತು...

- ಭೂಮಿಯ ವಾತಾವರಣ, ಜೀವ ವೈವಿಧ್ಯ ಮತ್ತು ಕಡಲ ಸಂರಕ್ಷಣೆಯನ್ನು ಪ್ರತ್ಯೇಕ ಘಟಕಗಳಾಗಿ ಶ್ರಮಿಸುವ ದೇಶಗಳಿಂದ ಮಾಡಲು ಸಾಧ್ಯವಾಗುವುದಿಲ್ಲ.
- ಜಿ-20 ರಾಷ್ಟ್ರಗಳ ಪೈಕಿ ಭಾರತ ಮಾತ್ರವೇ ಪ್ಯಾರಿಸ್ ಒಪ್ಪಂದದ ಈಡೇರಿಕೆಗೆ ಬದ್ಧವಾಗಿದೆ. ಈಗ ಭಾರತೀಯ ರೈಲ್ವೆ ಇಲಾಖೆ ಶೂನ್ಯ ಹೊಗೆ ಹೊರಸೂಸುವಿಕೆಯ ಗುರಿಯನ್ನು ರೂಪಿಸಿದ್ದು, ಇದನ್ನು 2030ರ ಹೊತ್ತಿಗೆ ಈಡೇರಿಸಲಾಗುತ್ತದೆ.
- ವಿಪತ್ತು ತಾಳಿಕೊಳ್ಳುವ ಮೂಲಸೌಕರ್ಯ ಸಹಯೋಗ ಮತ್ತು ಅಂತಾರಾಷ್ಟ್ರೀಯ ಸೌರ ಸಹಯೋಗ ಎಂಬ ಎರಡು ಪ್ರಮುಖ ಜಾಗತಿಕ ಉಪಕ್ರಮಗಳನ್ನು ಭಾರತ ಕೈಗೊಂಡಿದ್ದು, ಇದು ಅತ್ಯಂತ ಪರಿಣಾಮಕಾರಿ ಎಂದು ಸಾಬೀತಾಗಿದೆ.

### ಸೈಬರ್ ಭದ್ರತೆಯ ಕುರಿತು...

ಮುಕ್ತ ಸಮಾಜಗಳು, ತಪ್ಪು ಮಾಹಿತಿ ಮತ್ತು ಸೈಬರ್ ದಾಳಿಯ ಸುಲಭ ಗುರಿಗಳಾಗಿವೆ. ಸೈಬರ್ ಸ್ಪೇಸ್‌ಗಳ ಮೂಲಕ ಪ್ರಜಾಪ್ರಭುತ್ವ ಮೌಲ್ಯಗಳನ್ನು ದೃಢ ವೇದಿಕೆಯಾಗಿ ಖಾತ್ರಿಪಡಿಸಿಕೊಳ್ಳುವ ಅವಶ್ಯಕತೆಯಿದೆ. ಇದಕ್ಕೆ ಟೆಕ್ ಕಂಪನಿಗಳು ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳು ತಮ್ಮ ಗ್ರಾಹಕರಿಗೆ ಸುರಕ್ಷಿತ ಸೈಬರ್ ವಾತಾವರಣವನ್ನು ಖಾತ್ರಿಪಡಿಸಬೇಕಾಗುತ್ತದೆ.

## ಪರಿಸರ ದಿನದ ಅಂಗವಾಗಿ ಹೊಸ ಉಪಕ್ರಮಗಳು

### 2025ರ ಹೊತ್ತಿಗೆ ಪೆಟ್ರೋಲ್ ನಲ್ಲಿ ಶೇ.20ರಷ್ಟು ಎಥನಾಲ್ ಮಿಶ್ರಣದ ಗುರಿಯನ್ನು ಭಾರತ ಮುಂದಿಟ್ಟಿದೆ

ಪ್ಯಾರಿಸ್ ಹವಾಮಾನ ಸಮಾವೇಶದಲ್ಲಿ ರೂಪಿಸಲಾದ ಪರಿಸರಾತ್ಮಕ ಗುರಿಗಳನ್ನು ಸಾಧಿಸಿದ ವಿಶ್ವದ ಏಕೈಕ ದೇಶ ಭಾರತವಾಗಿದೆ. ಜೂನ್ 13ರಂದು ಪ್ರಧಾನಮಂತ್ರಿ ಮೋದಿಯವರು ಜಾಗತಿಕ ವೇದಿಕೆ ಜಿ7ರಲ್ಲಿ ಇದನ್ನು ಪುನರುಚ್ಚರಿಸಿದಾಗ ಎಲ್ಲ ರಾಷ್ಟ್ರಗಳೂ ಭಾರತವನ್ನು ಬೆಂಬಲಿಸಿದವು. ಭಾರತ ಈ ಗುರಿಯನ್ನು ಪರಿಣಾಮಕಾರಿ ನಿರ್ಧಾರ ತೆಗೆದುಕೊಳ್ಳುವ ಮೂಲಕ ಮತ್ತು ಹಸಿರು ಪರಿಸರಕ್ಕೆ ಕೇಂದ್ರ ಸರ್ಕಾರದ ಬದ್ಧತೆಯ ಮೂಲಕ ಸಾಧಿಸುತ್ತಿದೆ. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಒಂದು ಹೆಜ್ಜೆ ಮುಂದೆ ಇಟ್ಟಿರುವ ಭಾರತ ಶೇ. 20ರಷ್ಟು ಎಥೆನಾಲ್ ಅನ್ನು ಪೆಟ್ರೋಲ್ ನಲ್ಲಿ ಮಿಶ್ರಣ ಮಾಡುವ ತನ್ನ ಗುರಿಯನ್ನು ಸಾಧಿಸಲು ನಿಗದಿಪಡಿಸಿದ್ದ 2030 ರಿಂದ ವಿಶ್ವ ಪರಿಸರ ದಿನವಾದ ಜೂನ್ 5ರಂದು 2025ಕ್ಕೆ, 5 ವರ್ಷ ಇಳಿಸಿದೆ. ದೇಶಾದ್ಯಂತ ಎಥೆನಾಲ್ ಉತ್ಪಾದನೆ ಮತ್ತು ವಿತರಣೆಗಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪುಣೆಯಲ್ಲಿ ಮಹತ್ವಾಕಾಂಕ್ಷೆಯ ಇ -100 ಪ್ರಾಯೋಗಿಕ ಯೋಜನೆಗೆ ಚಾಲನೆ ನೀಡಿದರು. 7-8 ವರ್ಷಗಳ ಹಿಂದೆ ವಿರಳವಾಗಿ ಚರ್ಚಿತವಾಗುತ್ತಿದ್ದ ಎಥೆನಾಲ್ ಈಗ ಪ್ರಾಮುಖ್ಯ ಪಡೆದಿದೆ. ಎಥೆನಾಲ್ 21 ನೇ ಶತಮಾನದ ಭಾರತದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ಎಥೆನಾಲ್ ಅನ್ನು ಇಂಧನವಾಗಿ ಉತ್ತೇಜಿಸಲು ಕೈಗೊಂಡ ಕ್ರಮಗಳು ಪರಿಸರದ ಮೇಲೆ ಮತ್ತು ರೈತರ ಜೀವನದ ಮೇಲೆ ಉತ್ತಮ ಪರಿಣಾಮ ಬೀರುತ್ತಿವೆ. ಕಳೆದ ವರ್ಷ ಒಂದರಲ್ಲೇ, ತೈಲ ಮಾರುಕಟ್ಟೆ ಕಂಪನಿಗಳು 21 ಸಾವಿರ ಕೋಟಿ ರೂ. ಮೌಲ್ಯದ ಎಥನಾಲ್ ಖರೀದಿಸಿವೆ. ಇದರಿಂದ ರೈತರಿಗೆ ತುಂಬಾ ಅನುಕೂಲವಾಗಿದೆ. ಭವಿಷ್ಯದಲ್ಲಿ ಸಹ, ಇದು ರೈತರಿಗೆ ತುಂಬಾ ಲಾಭ ತರುತ್ತದೆ.

### ಇಂಧನವಾಗಿ ಎಥನಾಲ್ ಪ್ರಯೋಜನಗಳು

ವಾಹನಗಳಿಂದ ಹೊರ ಬರುವ ಹೊಗೆಯಿಂದ ದೊಡ್ಡ ಪ್ರಮಾಣದಲ್ಲಿ ವಾಯು ಮಾಲಿನ್ಯ ಉಂಟಾಗುತ್ತದೆ. ಎಥನಾಲ್ ಮಿಶ್ರಿತ ಇಂಧನ ಬಳಕೆಯಿಂದ ಕಾರ್ಬನ್ ಮೋನಾಕ್ಸೈಡ್ ಹೊರಸೂಸುವಿಕೆಯನ್ನು ಶೇ.35ರವರೆಗೆ ತಡೆಯಬಹುದಾಗಿದೆ. ಇದು ಸಲ್ಫರ್ ಡೈಆಕ್ಸೈಡ್, ನೈಟ್ರೋಜನ್ ಆಕ್ಸೈಡ್, ಮತ್ತು ಹೈಡ್ರೋ ಕಾರ್ಬನ್ ಹೊರಸೂಸುವಿಕೆಯನ್ನೂ ತಗ್ಗಿಸುತ್ತದೆ. ಪರಿಸರ ಸ್ನೇಹಿಯಾದ ಎಥನಾಲ್ ಪರಿಸರಕ್ಕೆ ಪಳೆಯುಳಿಕೆ ಇಂಧನಕ್ಕಿಂತ ಸುರಕ್ಷಿತವಾದುದಾಗಿದೆ. ಹೀಗಾಗಿಯೇ ವಿಶ್ವ ಜೈವಿಕ ಇಂಧನ ಮತ್ತು ಎಥನಾಲ್ ಅನ್ನು ಭವಿಷ್ಯದ ಇಂಧನವಾಗಿ ನೋಡುತ್ತಿವೆ.

## ಭವಿಷ್ಯದ ಮೇಲೆ ಕಣ್ಣಿಟ್ಟು ಪ್ರಸಕ್ತ ದಶಕಕ್ಕೆ ಸಜ್ಜಾಗುತ್ತಿರುವ ಭಾರತ

“ಕಳೆದ ಶತಮಾನದ ಅನುಭವವೆಂದರೆ, ವಿಶ್ವದ ಇತರ ದೇಶಗಳಲ್ಲಿ ಯಾವುದೇ ಆವಿಷ್ಕಾರ ಆದಾಗ, ಭಾರತವು ಅದಕ್ಕಾಗಿ ಹಲವು ವರ್ಷಗಳವರೆಗೆ ಕಾಯಬೇಕಾಗುತ್ತಿತ್ತು. ಆದರೆ ಇಂದು ನಮ್ಮ ದೇಶದ ವಿಜ್ಞಾನಿಗಳು ಮಾನವಕುಲದ ಸೇವೆಗಾಗಿ ಇತರ ದೇಶಗಳೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಒಂದು ವರ್ಷದಲ್ಲಿ ತಯಾರಿಸಿದ ಕರೋನಾ ಲಸಿಕೆ ಅಂತಹ ಒಂದು ಉದಾಹರಣೆಯಾಗಿದೆ. ಜೂನ್ 4ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ (ಸಿಎಸ್.ಐ.ಆರ್.) ನ ಸಭೆಯಲ್ಲಿ ಭಾಗಿಯಾಗಿದ್ದರು, ಅಲ್ಲಿ ಅವರು ಭಾರತೀಯ ವಿಜ್ಞಾನಿಗಳ ಪ್ರಯತ್ನವನ್ನು ಶ್ಲಾಘಿಸಿದರು. ಈ ದಶಕದ ಮತ್ತು ಭವಿಷ್ಯದ ಅಗತ್ಯಗಳನ್ನು ಪೂರೈಸಲು ವೈಜ್ಞಾನಿಕ ಜ್ಞಾನವನ್ನು ಉತ್ತೇಜಿಸುವ ಬಲವಾದ ಸಂದೇಶವನ್ನು ಅವರು ನೀಡಿದರು. ತಂತ್ರಾಂಶದಿಂದ ಉಪಗ್ರಹದವರೆಗೆ, ಇಂದು ಭಾರತ ಇತರ ರಾಷ್ಟ್ರಗಳ ಅಭಿವೃದ್ಧಿ ವೇಗವರ್ಧನೆಗೆ ನೆರವಾಗುತ್ತಿದೆ ಎಂದರು. ಅಂತಹ ಸನ್ನಿವೇಶದಲ್ಲಿ, ದೇಶದ ಗುರಿ ಸಹ ಈಗಿರುವುದಕ್ಕಿಂತ ಎರಡು ಹೆಜ್ಜೆ ಮುಂದಿರಬೇಕು. ಈ ದಶಕದ ಮತ್ತು ಮುಂಬರುವ ದಶಕಗಳ ಭವಿಷ್ಯದ ಅಗತ್ಯಗಳ ಮೇಲೆ ಭಾರತವು ಪ್ರಸ್ತುತ ದಶಕಕ್ಕೆ ಸಜ್ಜಾಗಲು ಸಿದ್ಧತೆ ನಡೆಸಬೇಕಾಗಿದೆ. ಇಂದು, ಭಾರತವು ಎಲ್ಲ ನಿಟ್ಟಿನಲ್ಲಿ ಅಂದರೆ ಕೃಷಿಯಿಂದ ಬಾಹ್ಯಾಕಾಶ ವಿಜ್ಞಾನದವರೆಗೆ, ವಿಪತ್ತು ನಿರ್ವಹಣೆಯಿಂದ ರಕ್ಷಣಾ ತಂತ್ರಜ್ಞಾನದವರೆಗೆ, ಲಸಿಕೆಗಳಿಂದ ವರ್ಚುವಲ್ ರಿಯಾಲಿಟಿವರೆಗೆ, ಜೈವಿಕ ತಂತ್ರಜ್ಞಾನದಿಂದ ಬ್ಯಾಟರಿ ತಂತ್ರಜ್ಞಾನದವರೆಗೆ ಸ್ವಾವಲಂಬಿಯಾಗಲು ಮತ್ತು ಸಬಲೀಕರಣಗೊಳ್ಳಲು ಬಯಸುತ್ತದೆ. ಇಂದು ಭಾರತ ಸುಸ್ಥಿರ ಅಭಿವೃದ್ಧಿ ಮತ್ತು ಶುದ್ಧ ಇಂಧನದ ಕ್ಷೇತ್ರದಲ್ಲಿ ವಿಶ್ವಕ್ಕೇ ದಾರಿ ತೋರುತ್ತಿದೆ.

ದೇಶ ಅರೋಮಾ ಅಭಿಯಾನವನ್ನು 2016ರಲ್ಲಿ ಆರಂಭಿಸಿತು. ಸಿಎಸ್.ಐ.ಆರ್. ಇದರಲ್ಲಿ ಮಹತ್ವದ ಪಾತ್ರ ವಹಿಸಿತು ಎಂದು ಹೇಳಿದರು. ಇಂದು ದೇಶದ ಸಾವಿರಾರು ರೈತರು ಹೂ ಬೆಳೆಯುವ ಮೂಲಕ ತಮ್ಮ ಅದೃಷ್ಟವನ್ನೇ ಬದಲಾಯಿಸುತ್ತಿದ್ದಾರೆ. ಭಾರತವು ಯಾವಾಗಲೂ ಇಂಗನ್ನು ವಿಶ್ವದ ಇತರ ದೇಶಗಳಿಂದ ಆಮದು ಮಾಡಿಕೊಳ್ಳುವುದರ ಮೇಲೆ ಅವಲಂಬಿತವಾಗಿತ್ತು. ಆದರೆ ಈಗ ದೇಶದೊಳಗೆ ಇಂಗಿನ ಉತ್ಪಾದನೆ ಪ್ರಾರಂಭವಾಗಿದೆ. ■

ಪ್ರಧಾನಮಂತ್ರಿಯವರ ಪೂರ್ಣ ಭಾಷಣ ಆಲಿಸಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಟೋಕಿಯೋ ಒಲಿಂಪಿಕ್ಸ್ ಜುಲೈ 23-ಆಗಸ್ಟ್ 8, 2021

# ಟೋಕಿಯೋಗೆ ಸಜ್ಜು

## ವಿಶ್ವದ ಅತಿ ದೊಡ್ಡ ಕ್ರೀಡಾ ಉತ್ಸವಕ್ಕೆ ಸಜ್ಜಾದ ಭಾರತೀಯ ಕ್ರೀಡಾಪಟುಗಳು





**ಆಧುನಿಕ ಒಲಿಂಪಿಕ್ಸ್ ನ ಪಿತಾಮಹ ಎಂದೇ ಪರಿಗಣಿಸಲಾಗಿರುವ ಪಿಯರೆ ಡಿ ಕೂಬರ್ಟಿನ್, ಗೆಲ್ಲುವುದಕ್ಕಿಂತ ಒಲಿಂಪಿಕ್ಸ್ ನಲ್ಲಿ ಭಾಗವಹಿಸುವುದು ಮುಖ್ಯ ಎಂದು ಹೇಳಿದ್ದರು. ಕ್ರೀಡಾ ಸ್ಫೂರ್ತಿಯನ್ನು ಅರ್ಥಮಾಡಿಕೊಳ್ಳುವುದು ಇದರ ಮುಖ್ಯ ಉದ್ದೇಶ. ದೇಶದಲ್ಲಿ ಕ್ರೀಡೆ ಉತ್ತೇಜಿಸಲು ಮತ್ತು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲು ಕೈಗೊಂಡ ವಿವಿಧ ಉಪಕ್ರಮಗಳ ಫಲವಾಗಿ, ಈ ಬಾರಿ 100 ಕ್ರೀಡಾಪಟುಗಳು ಟೋಕಿಯೊ ಒಲಿಂಪಿಕ್ಸ್ ಗೆ ಅರ್ಹತೆ ಪಡೆದಿದ್ದು, 11 ಕ್ರೀಡಾ ಸ್ಪರ್ಧೆಗಳಲ್ಲಿ ಭಾಗಿಯಾಗಲಿದ್ದಾರೆ. ಇನ್ನೂ 25 ಕ್ರೀಡಾಪಟುಗಳು ಟೋಕಿಟೋ ಒಲಿಂಪಿಕ್ಸ್ ಗೆ ಅರ್ಹತೆ ಪಡೆಯುವ ಸಾಧ್ಯತೆ ಇದ್ದು, ಈ ಸಂಖ್ಯೆ ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ. 2016ರಲ್ಲಿ ರಿಯೋ ಡಿ ಜನೇರೋದಲ್ಲಿ ನಡೆದ ಪ್ಯಾರಾಲಿಂಪಿಕ್ಸ್ ನಲ್ಲಿ 19 ಭಾರತೀಯ ಅಥ್ಲೀಟ್ ಗಳು ಭಾಗಿಯಾಗಿದ್ದರು. ಈ ಬಾರಿ 26 ಪ್ಯಾರಾ- ಅಥ್ಲೀಟ್ ಗಳು ಟೋಕಿಯೋ ಒಲಿಂಪಿಕ್ಸ್ ಗೆ ಅರ್ಹತೆ ಪಡೆದಿದ್ದಾರೆ, ಇನ್ನೂ 16 ಅಥ್ಲೀಟ್ ಗಳು ಅರ್ಹತೆ ಪಡೆಯುವ ಸಂಭವನೀಯತೆ ಇದೆ.**

ಒಲಿಂಪಿಕ್ ಕ್ರೀಡಾಕೂಟಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಭಾರತೀಯ ಅಥ್ಲೀಟ್ ಗಳು ಈ ಬೃಹತ್ ಕ್ರೀಡಾ ಉತ್ಸವಕ್ಕೆ ಅಣಿಯಾಗಿದ್ದಾರೆ. ಕಳೆದ ವರ್ಷ ಮಾರ್ಚ್ ಆರಂಭದಲ್ಲಿ, ಮಾರಕ ಕೊರೊನಾ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಭಾರತದಲ್ಲಿ ದೇಶವ್ಯಾಪಿ ಲಾಕ್ ಡೌನ್ ಮಾಡಲಾಯಿತು. ಅಥ್ಲೀಟ್ ಗಳ ಸುರಕ್ಷತೆಯ ದೃಷ್ಟಿಯಿಂದ ದೇಶಾದ್ಯಂತ ರಾಷ್ಟ್ರೀಯ ಶಿಬಿರಗಳನ್ನು ಸ್ಥಗಿತಗೊಳಿಸುವಂತಾಯಿತು. 2020ರ ಮಾರ್ಚ್ 24ರಂದು ಟೋಕಿಟೋ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಎರಡನ್ನೂ ಅಧಿಕೃತವಾಗಿ ಮುಂದೂಡಲಾಯಿತು. ಎರಡನೇ ಮಹಾಯುದ್ಧದ ಕಾರಣದಿಂದಾಗಿ 1940 ಮತ್ತು 1944ರಲ್ಲಿ ನಿಗದಿತ ವರ್ಷದಲ್ಲಿ ಒಲಿಂಪಿಕ್ಸ್ ನಡೆದಿರಲಿಲ್ಲ, ಆ ನಂತರ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್ ಮುಂದೂಡಿಕೆ ಆಗಿದೆ. ಉತ್ತಮ ಪ್ರದರ್ಶನ ನೀಡುತ್ತಿದ್ದ ಭಾರತದ ಕ್ರೀಡಾಪಟುಗಳಿಗೆ ಈ ಮುಂದೂಡಿಕೆಯಿಂದ ಹಿನ್ನಡೆಯಾಗಿದೆ. ಜುಲೈ-ಆಗಸ್ಟ್ ಹೊತ್ತಿಗೆ ಅವರು ಒಲಿಂಪಿಕ್ಸ್ ಸಮಯದಲ್ಲಿ ಗರಿಷ್ಠ ಫಾರ್ಮ್ ನಲ್ಲಿದ್ದು ಸಂಪೂರ್ಣ ಸಜ್ಜಾಗಿದ್ದರು.

### ಹಲವು ಮಹತ್ವದ ನಿರ್ಧಾರ ಕೈಗೊಂಡ ಕೇಂದ್ರ ಸರ್ಕಾರ

ಮಾರ್ಚ್ 2020ರಿಂದ ಇಲ್ಲಿಯವರೆಗಿನ ಅವಧಿ ಕ್ರೀಡಾಪಟುಗಳಿಗೆ ಮತ್ತು ಆಡಳಿತಗಾರರಿಗೆ ತುಂಬಾ ಸವಾಲಿನದಾಗಿದೆ. ಅನೂಹ್ಯ ಸ್ವರೂಪದ ಕೋವಿಡ್ -19, ಅಥ್ಲೀಟ್ ಗಳ ಆರೋಗ್ಯದ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ಶಿಬಿರಗಳನ್ನು ಯಾವಾಗ ಪುನಾರಂಭಿಸಬೇಕು ಎಂಬ ಬಗ್ಗೆ ಹಲವು ಬಾರಿ ಹಿಂದೆ-ಮುಂದೆ ನೋಡಿ ನಿರ್ಧಾರ ಕೈಗೊಳ್ಳುವಂತೆ ಮಾಡಿತು.

> ಕ್ರೀಡೆಗಳು ನಮ್ಮ ರಾಷ್ಟ್ರೀಯ ಸ್ವಭಾವದ ಹೃದಯದಲ್ಲಿವೆ ಮತ್ತು ನಮ್ಮ ಯುವಜನರು ಬಲಿಷ್ಠ ಮತ್ತು ಚಲನಶೀಲ ಕ್ರೀಡಾ ಸಂಸ್ಕೃತಿಯನ್ನು ರೂಪಿಸುತ್ತಿದ್ದಾರೆ. ಒಲಿಂಪಿಕ್ಸ್ ನಲ್ಲಿ ಭಾಗವಹಿಸುತ್ತಿರುವ ನಮ್ಮ ಯುವಜನರಿಗೆ 135 ಕೋಟಿ ಭಾರತೀಯರು ಶುಭ ಕೋರಿದ್ದಾರೆ. ಪ್ರತಿಯೊಬ್ಬ ಕ್ರೀಡಾಪಟುವೂ ಜಾಗತಿಕ ವೇದಿಕೆಯಲ್ಲಿ ಪ್ರಕಾಶಿಸಲಿ, ಇದರಿಂದ ಇನ್ನೂ ಸಾವಿರಾರು ಜನರು ಕ್ರೀಡೆಯಲ್ಲಿ ತೊಡಗಲು ಪ್ರೇರಣೆ ದೊರಕಲಿ. ಜುಲೈನಲ್ಲಿ ವೀಡಿಯೊ ಕಾನ್ಫರೆನ್ಸ್ ಮೂಲಕ ನಾನು ಭಾರತದ ಒಲಿಂಪಿಕ್ಸ್ ತಂಡದೊಂದಿಗೆ ಸಂಪರ್ಕ ಸಾಧಿಸಿ, ಭಾರತೀಯರೆಲ್ಲರ ಪರವಾಗಿ ಅವರನ್ನು ಪ್ರೋತ್ಸಾಹಿಸಲು, ಶುಭ ಕೋರಲು ಬಯಸುತ್ತೇನೆ.
> - ಪ್ರಧಾನ ಮಂತ್ರಿ ನರೇಂದ್ರ ಮೋದಿ

ಕ್ರೀಡಾ ಸಚಿವಾಲಯ ಎದುರಿಸಿದ ಮತ್ತೊಂದು ಪ್ರಮುಖ ಸವಾಲು, ಬಯೋ ಬಬಲ್ ನ ಒಂಟಿತನವನ್ನು ಗಮನದಲ್ಲಿಟ್ಟುಕೊಂಡು ಕ್ರೀಡಾಪಟುಗಳನ್ನು ಸರಿಯಾದ ಮಾನಸಿಕ ಸ್ಥಿತಿಯಲ್ಲಿಡುವುದಾಗಿತ್ತು. ತುರ್ತು ಸ್ಥಿತಿಯಲ್ಲಿ ಅವರ ಕೋಣೆಗಳಲ್ಲಿ ಅಗತ್ಯವಾದ ವೈದ್ಯಕೀಯ ಉಪಕರಣಗಳು ಅಥವಾ ಆರೋಗ್ಯ ಸೌಲಭ್ಯಗಳನ್ನು ನೀಡಿ, ಅವರಿಗೆ ವ್ಯಕ್ತಿಗತವಾಗಿ ಸಾಧ್ಯವಾದಷ್ಟು ಉತ್ತಮವಾದ ಆರೈಕೆಯನ್ನು ವಿಸ್ತರಿಸಲಾಗಿದೆ. ಸಾಂಕ್ರಾಮಿಕ ರೋಗದಿಂದಾಗಿ ಕ್ರೀಡಾಪಟುವಿನ ತರಬೇತಿಗೆ ತೊಂದರೆಯಾಗದಂತೆ ಸಚಿವಾಲಯವು ಹೆಚ್ಚಿನ ಕಾಳಜಿ ವಹಿಸಿತು. 2020ರ ಲಾಕ್ ಡೌನ್ ಸಮಯದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಹಲವಾರು ಪ್ರಧಾನ ಕ್ರೀಡಾಪಟುಗಳನ್ನು ಭೇಟಿಯಾಗಿ ತಮ್ಮ ತರಬೇತಿಯನ್ನು ಮುಂದುವರಿಸಲು ಮತ್ತು ಉತ್ಕೃಷ್ಟತೆಯನ್ನು ಸಾಧಿಸಲು ಪ್ರೇರೇಪಿಸಿದರು. ಕ್ರೀಡಾಪಟುಗಳ ತರಬೇತಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು, ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಅವರ ಮನೆಗಳಿಗೆ ತಲುಪಿಸಲಾಯಿತು ಇದರಿಂದ ಅವರು ಅತ್ಯುತ್ತಮ ಸ್ಪರ್ಧಾತ್ಮಕ ಸ್ವರೂಪವನ್ನು ಉಳಿಸಿಕೊಂಡರು. ಅಗತ್ಯವಿರುವ ಎಲ್ಲ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕಾಪಾಡಿಕೊಂಡು ಒಲಿಂಪಿಕ್ ಗೆ ಹೊರಡುವ ಕ್ರೀಡಾಪಟುಗಳು ಅಮೂಲ್ಯವಾದ ತರಬೇತಿ ಸಮಯವನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಲು ಸರ್ಕಾರವು ತರಬೇತಿ ಕೇಂದ್ರಗಳಲ್ಲಿ ಬಯೋ ಬಬಲ್ ಗಳನ್ನು ರಚಿಸಿತು. ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಕಿರೆಣ್ ರಿಜಿಜು ಅವರು ಕ್ರೀಡಾಪಟುಗಳೊಂದಿಗೆ ವಿಡಿಯೋ ಸಂವಾದಗಳ ಮೂಲಕ ನಿರಂತರ ಸಂಪರ್ಕದಲ್ಲಿದ್ದರು ಮತ್ತು ಅವರ ನಿರ್ದಿಷ್ಟ ತರಬೇತಿ ಅಗತ್ಯಗಳ ಬಗ್ಗೆ ವಿಚಾರಿಸಿ, ಅವರ ಸ್ಥೈರ್ಯವನ್ನು ಹೆಚ್ಚಿಸಿದರು.




**ಎಲ್ಲ ಕ್ರೀಡೆಗಳಲ್ಲೂ ನಿರಂತರವಾಗಿ ಮೇಲುಗೈ ಸಾಧಿಸಿದ ಅಥ್ಲೀಟ್ ಗಳು**

ಈ ವರ್ಷದ ಜನವರಿಯ ಹೊತ್ತಿಗೆ ಬಹುತೇಕ ಎಲ್ಲಾ ಕ್ರೀಡೆಗಳಲ್ಲಿನ ಸ್ಪರ್ಧೆಗಳು ನಿಯಮಿತವಾಗಿ ಪ್ರಾರಂಭವಾದವು ಮತ್ತು ಭಾರತೀಯ ಕ್ರೀಡಾಪಟುಗಳು ಎಲ್ಲಾ ಕ್ರೀಡೆಗಳಲ್ಲಿ ಸ್ಥಿರ ಪ್ರದರ್ಶನ ನೀಡಿದರು. ಅವರ ತರಬೇತಿ ಮತ್ತು ಕಾರ್ಯಕ್ಷಮತೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸರ್ಕಾರವು ಹೇಗೆ ಸಹಾಯವನ್ನು ವಿಸ್ತರಿಸಿದೆ ಎಂಬುದಕ್ಕೆ ಇದು ಹಿಡಿದ ಕನ್ನಡಿಯಾಗಿದೆ. ಮೀರಾಬಾಯಿ ಚಾನು ಏಷಿಯಾ ಚಾಂಪಿಯನ್ ಷಿಪ್ ನಲ್ಲಿ ಕಂಚಿನ ಪದಕ ಗೆದ್ದು, ಕ್ಲೀನ್ ಮತ್ತು ಜರ್ಕ್ ನಲ್ಲಿ ವಿಶ್ವ ದಾಖಲೆ ಮಾಡಿದ್ದಾಗಿರಲಿ, ವಿನೇಶ್ ಫೊಗಟ್ ನಾಲ್ಕು ಕುಸ್ತಿ ಪಂದ್ಯಗಳಲ್ಲಿ ನಾಲ್ಕು ಚಿನ್ನದ ಪದಕ ಗೆದ್ದಿದ್ದಾಗಿರಲಿ, ಪಿ.ವಿ. ಸಿಂಧು ಎಲ್ಲ ಬ್ಯಾಡ್ಮಿಂಟನ್ ಪಂದ್ಯಾವಳಿಗಳಲ್ಲಿ ನಿರಂತರವಾಗಿ ಪ್ರದರ್ಶನ ನೀಡಿದ್ದಾಗಿರಲಿ, ನಮ್ಮ ಶೂಟರ್ ಗಳು, ಬಾಕ್ಸರ್ ಗಳು ಮತ್ತು ಬಿಲ್ಲುಗಾರರ ಪ್ರದರ್ಶನ ತೃಪ್ತಿದಾಯಕವಾಗಿತ್ತು. ನಮ್ಮ ಕೆಲವು ಅಥ್ಲೀಟ್ ಗಳು ಕೋವಿಡ್ -19ರಿಂದ ಚೇತರಿಸಿಕೊಂಡಿದ್ದು, ಅವರ ಅಪಾರ ಮಾನಸಿಕ ಸ್ಥೈರ್ಯ ಮತ್ತು ದೈಹಿಕ ಶಕ್ತಿಯ ದ್ಯೋತಕವಾಗಿದೆ.

**ಅಥ್ಲೀಟ್ ಗಳಿಗೆ ಲಸಿಕೆ ಖಾತ್ರಿ ಪಡಿಸಿದ ಪ್ರಧಾನಮಂತ್ರಿ**

ಸರ್ಕಾರವು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಕೋವಿಡ್ ಸಾಂಕ್ರಾಮಿಕದ ಸಮಯದಲ್ಲೂ ಕ್ರೀಡಾಪಟುಗಳು ತಮ್ಮ ತುದಿಗಾಲ ಮೇಲೆ ನಿಲ್ಲುವಂತೆ, ತನ್ನ ಕಾರ್ಯದ ವೇಗವನ್ನು ನಿಲ್ಲಿಸಲಿಲ್ಲ. ಸಾಂಕ್ರಾಮಿಕ ರೋಗದ ಎರಡನೇ ಅಲೆ ಏಪ್ರಿಲ್ ನಲ್ಲಿ ಅಪ್ಪಳಿಸಿದಾಗ ಮತ್ತು ಪ್ರಕರಣಗಳು ಅಪಾಯಕಾರಿಯಾದಾಗ, ಸರ್ಕಾರವು ಪರಿಸ್ಥಿತಿಗೆ ಶೀಘ್ರವಾಗಿ ಸ್ಪಂದಿಸಿತು ಹಾಗು ಕ್ರೀಡಾಪಟು ಮತ್ತು ಅವರ ಒಕ್ಕೂಟದ ಸಹಯೋಗದೊಂದಿಗೆ ಒಲಿಂಪಿಕ್ ಗೆ ತೆರಳಲು ಕ್ರೀಡಾಪಟುಗಳಿಗೆ ವೀಸಾಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಆದ್ಯತೆಯ ಆಧಾರದ ಮೇಲೆ ಕೆಲಸ ಮಾಡಿತು.

ಇದು ನೇರವಾಗಿ ಒಲಿಂಪಿಕ್ಸ್ ಗೆ ತೆರಳುವ ಮೊದಲು ವಿದೇಶ ಪ್ರವಾಸ ಮಾಡಲು ಮತ್ತು ಅಲ್ಲಿ ತರಬೇತಿ ಪಡೆಯಲು ಅವರಿಗೆ ಅನುವು ಮಾಡಿಕೊಟ್ಟಿತು. ಅನೇಕ ದೇಶಗಳು ಭಾರತವನ್ನು ಕೆಂಪು ಪಟ್ಟಿಯಲ್ಲಿ ಸೇರಿಸುತ್ತಿದ್ದಾಗ, ನಿಷೇಧ ಜಾರಿಗೆ ಬರುವ ಮೊದಲು ಸರ್ಕಾರವು ಗರಿಷ್ಠ ಸಂಖ್ಯೆಯ ಕ್ರೀಡಾಪಟುಗಳನ್ನು ವಿದೇಶಕ್ಕೆ ಕಳುಹಿಸಿತ್ತು. ಜ್ವಲಂತ ಉದಾಹರಣೆಯೆಂದರೆ ವೇಟ್ ಲಿಫ್ಟರ್ ಮಿರಾಬಾಯಿ ಚಾನು, ಅವರ ನಿಷೇಧ ಜಾರಿಗೆ ಬರುವ ಮೊದಲೇ ಭಾರತದಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಕಳುಹಿಸಲಾಯಿತು. ಅಥ್ಲೀಟ್ ನೀರಜ್ ಛೋಪ್ರಾ ಅವರ ಮತ್ತೊಂದು ಉದಾಹರಣೆಯೂ ಇದೆ, ಅವರನ್ನು ಕ್ರೀಡಾ ಸಚಿವಾಲಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಹಯೋಗದಲ್ಲಿ ವೀಸಾ ಪಡೆಯುವುದನ್ನು ಮತ್ತು ವಿದೇಶಕ್ಕೆ ತೆರಳುವುದನ್ನು ಖಾತ್ರಿಪಡಿಸಿತು, ಹೀಗಾಗಿ ಅವರು, ತೀರಾ ಅತ್ಯಗತ್ಯವಾಗಿದ್ದ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಂತಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು, ಟೋಕಿಯೋಗೆ ತೆರಳುವ ಎಲ್ಲ ಅಥ್ಲೀಟ್ ಗಳೂ ಕೋವಿಡ್ ಲಸಿಕೆ ಪಡಿದುಕೊಂಡಿರುವುದನ್ನು ಖಾತ್ರಿಪಡಿಸಲು ಎಲ್ಲ ಸಚಿವಾಲಯಗಳೂ ಒಗ್ಗೂಡಿ ಶ್ರಮಿಸುವಂತೆ ಸೂಚಿಸಿದರು, ಟೋಕಿಯೋಗೆ ತೆರಳುವ ಶೇ.99ರಷ್ಟು ಅಥ್ಲೀಟ್ ಗಳು ಈಗಾಗಲೇ ಲಸಿಕೆಯ ಪ್ರಥಮ ಡೋಸ್ ಪಡೆದುಕೊಂಡಿದ್ದರೆ, ಶೇ.75ರಷ್ಟು ಕ್ರೀಡಾಪಟುಗಳು ಎರಡೂ ಡೋಸ್ ಲಸಿಕೆ ತೆಗೆದುಕೊಂಡಿದ್ದಾರೆ.

ಕ್ರೀಡಾಪಟುಗಳಿಗೆ ಲಸಿಕೆ ಹಾಕುವ ಪ್ರಯತ್ನಗಳ ಉದಾಹರಣೆ ಹೇಗಿದೆಯೆಂದರೆ, ಕುಸ್ತಿಪಟು ವಿನೇಶ್ ಫೋಗಾಟ್, ಕೇವಲ ಸ್ಥಳೀಯ ನಿವಾಸಿಗಳಿಗೆ ಮಾತ್ರವೇ ಲಸಿಕೆ ನೀಡುವ ಹಂಗೇರಿಯಲ್ಲಿ ಲಸಿಕಾ ಡೋಸ್ ಪಡೆದಿದ್ದಾರೆ. ಈ ಕ್ರಮದಿಂದಾಗಿ ಒಲಿಂಪಿಕ್ಸ್ ನ ಆರಂಭವಾದಾಗ, ಎಲ್ಲಾ ಭಾರತೀಯ ಕ್ರೀಡಾಪಟುಗಳಿಗೂ ಕರೋನ ವೈರಾಣುವಿನ ಸೋಂಕಿಗೆ ಒಳಗಾಗುವ ಅಪಾಯ ಇರುವುದಿಲ್ಲ. ■

# ಆಸಲ್ ಉತ್ತಾರ್ ಯುದ್ಧದ ನಾಯಕ



**"ಯುದ್ಧವನ್ನು ಕೇವಲ ಶಸ್ತ್ರಾಸ್ತ್ರಗಳಿಂದ ಮಾತ್ರ ಗೆಲ್ಲಲು ಸಾಧ್ಯವಿಲ್ಲ, ಆದರೆ ಅದಕ್ಕೆ ದೇಶಕ್ಕಾಗಿ ಪ್ರಾಣಕೊಡುವ ಧೈರ್ಯವೂ ಅಗತ್ಯ." ಇದಕ್ಕೆ 1965ರಲ್ಲಿ ಪಂಜಾಬ್ ನ ಖೇಂಕರನ್ ಸೆಕ್ಟರ್ ನಲ್ಲಿ 7 ಪಾಕಿಸ್ತಾನಿ ಪ್ಯಾಟನ್ ಟ್ಯಾಂಕ್ ಗಳನ್ನು ಏಕಾಂಗಿಯಾಗಿ ನಾಶಪಡಿಸಿದ ಸಿ.ಕ್ಯೂ.ಎಚ್ ಅಬ್ದುಲ್ ಹಮೀದ್ ಅವರು ತೋರಿದ ಭಾರತೀಯ ಸೈನಿಕರ ಧೈರ್ಯಶಾಲಿ ಮನೋಭಾವ ಸ್ಮರಣಾರ್ಹವಾಗಿದ್ದು, ಇದಕ್ಕಿಂತ ಉತ್ತಮವಾದ ಉದಾಹರಣೆ ಮತ್ತೊಂದು ಸಿಗಲಾರದು.**

ಅಬ್ದುಲ್ ಹಮೀದ್ ಪಂಜಾಬ್ ನ ತರನ್ ತರನ್ ಜಿಲ್ಲೆಯಲ್ಲಿ ಬಂದೂಕು ಅಳವಡಿಸಿದ್ದ ತಮ್ಮ ಜೀಪ್ ನೊಂದಿಗೆ 1965ರ ಸೆಪ್ಟೆಂಬರ್ 8ರಂದು ಅಮೃತಸರವನ್ನು ವಶಪಡಿಸಿಕೊಳ್ಳಲು ಯೋಜಿಸಿ ಗಿಬ್ರಾಲ್ಟರ್ ಕಾರ್ಯಾಚರಣೆ ನಡೆಸಿದ್ದ ಪಾಕಿಸ್ತಾನದ ಟ್ಯಾಂಕರ್ ರೆಜಿಮೆಂಟ್ ನ ಒಳನುಗ್ಗುವ ಪ್ರಯತ್ನವನ್ನು ಯಶಸ್ವಿಯಾಗಿ ತಡೆದರು. ಪಾಕಿಸ್ತಾನದ ಈ ದುಷ್ಕೃತ್ಯಗಳು ಏಪ್ರಿಲ್ 1965ಕ್ಕೆ ಮೊದಲೇ ಪ್ರಾರಂಭವಾದವು, ಆಪರೇಷನ್ ಡೆಸರ್ಟ್ ಹಾಕ್ ಅಡಿಯಲ್ಲಿ ಪಶ್ಚಿಮ ಮುಂಚೂಣಿಯಲ್ಲಿ ಭಾರತದ ರನ್ ಆಫ್ ಕಚ್ ನ ಕೆಲವು ಭಾಗಗಳಲ್ಲಿ ಹಕ್ಕು ಪ್ರತಿಪಾದಿಸಲು ಪ್ರಯತ್ನಿಸಿತು. ಮುಖಭಂಗ ಅನುಭವಿಸಿದ ನಂತರ ಪಾಕಿಸ್ತಾನ, ಕಾಶ್ಮೀರ ಮತ್ತು ಪಂಜಾಬ್ ನಲ್ಲಿ ಅಶಾಂತಿ ಸೃಷ್ಟಿಸುವ ತಂತ್ರ ಮಾಡಿತು.

ಭಾರತೀಯ ಸೇನೆ ಎಲ್ಲಾ ರಂಗಗಳಲ್ಲಿಯೂ ಪಾಕಿಸ್ತಾನಕ್ಕೆ ತಕ್ಕ ಉತ್ತರ ನೀಡಿತು. ಅಮೃತಸರವನ್ನು ವಶಪಡಿಸಿಕೊಳ್ಳುವ ಉದ್ದೇಶದೊಂದಿಗೆ ಪಾಕಿಸ್ತಾನ ಪಡೆಗಳು ತಮ್ಮ ಪ್ಯಾಟನ್ ಟ್ಯಾಂಕ್ ಗಳೊಂದಿಗೆ ಮುನ್ನಡೆದಿದ್ದವು. ಸೆಪ್ಟೆಂಬರ್ 8 ರಂದು, ಪಾಕಿಸ್ತಾನವು ತನ್ನ ಪ್ಯಾಟನ್ ಟ್ಯಾಂಕ್ ಗಳ ಸಂಪೂರ್ಣ ರೆಜಿಮೆಂಟ್ ನೊಂದಿಗೆ ಅಂತಾರಾಷ್ಟ್ರೀಯ ಗಡಿಯ 5 ಕಿ.ಮೀ. ದೂರ ಬಂದಿತ್ತು, ಆಸಲ್ ಉತ್ತಾರ್ ಗ್ರಾಮವು ಯುದ್ಧ ವಲಯವಾಗಿ ಮಾರ್ಪಟ್ಟಿತು. 4 ಗ್ರೆನೇಡಿಯರ್ ಗಳ ಸೈನಿಕರು ಹತ್ತಿ ಹೊಲ ಮತ್ತು ಕಬ್ಬಿನ ಗದ್ದೆಗಳಲ್ಲಿ ಯುದ್ಧಕ್ಕೆ ಸಜ್ಜಾದರು. ಪಾಕಿಸ್ತಾನದ ಪ್ಯಾಟನ್ ಟ್ಯಾಂಕ್ ಗಳು ಮುಂದೆ ಬರುತ್ತಿರುವ ಶಬ್ದವನ್ನು ಅವರು ಸುಲಭವಾಗಿ ಆಲಿಸಿದರು.

ಕ್ವಾರ್ಟರ್ ಮಾಸ್ಟರ್ ಅಬ್ದುಲ್ ಹಮೀದ್ ರಸ್ತೆಯಿಂದ ಕೇವಲ 30 ಮೀಟರ್ ದೂರದಲ್ಲಿದ್ದರು, ಅವರು ಬಂದೂಕು ಅಳವಡಿಸಿದ್ದ ಜೀಪ್ ನಲ್ಲಿ ಅಡಗಿ ಕುಳಿತರು. ಪಾಕಿಸ್ತಾನದ ಮೊದಲ ಪ್ಯಾಟನ್ ಟ್ಯಾಂಕ್ ತಮ್ಮ ಬಂದೂಕಿನ ಗುರಿಯ ವಲಯಕ್ಕೆ ಬಂದಾಗ, ಅವರು ತಮ್ಮ ಆರ್.ಸಿ.ಎಲ್. ಬಂದೂಕಿನಿಂದ ಗುಂಡು ಸಿಡಿಸಿದರು, ಟ್ಯಾಂಕ್ ಬೆಂಕಿ ಹೊತ್ತಿಕೊಂಡಿತು. 106 ಎಂ.ಎಂ. ಆರ್.ಸಿ.ಎಲ್. 500-600 ಗಜ ದೂರದಲ್ಲಿದ್ದು, ಟ್ಯಾಂಕ್ ವಿರುದ್ಧ ಅತ್ಯಂತ ಪರಿಣಾಮಕಾರಿ ಶಸ್ತ್ರವಾಗಿತ್ತು.

ಆರ್.ಸಿ.ಎಲ್. ಬಂದೂಕಿನ ಒಂದು ನ್ಯೂನತೆಯೆಂದರೆ, ಅದರ ಶೆಲ್ ಗಳನ್ನು ಸುಲಭವಾಗಿ ಗುರುತಿಸಬಹುದಾಗಿರುವುದಾಗಿತ್ತು, ಅದು ಹಿಂದಿನಿಂದ ಬೆಂಕಿಯನ್ನು ಹೊರಹಾಕುತ್ತದೆ. ಇದು ಆರ್. ಸಿ.ಎಲ್.ನಿಂದ ಗುಂಡಿನ ಹೊಡೆತಗಳನ್ನು ಕೇವಲ ಒಂದು ಅಥವಾ ಎರಡು ಅಥವಾ ಗರಿಷ್ಠ ಮೂರಕ್ಕೆ ನಿರ್ಬಂಧಿಸುತ್ತದೆ. ಇದರ ಹೊರತಾಗಿಯೂ ಹಮೀದ್ ಪಾಕಿಸ್ತಾನದ ಎರಡನೇ ಪ್ಯಾಟನ್ ಟ್ಯಾಂಕ್ ಅನ್ನು ಅದೇ ದಿನ ಧ್ವಂಸ ಮಾಡಿದರು. ಪಾಕಿಸ್ತಾನದ ಯೋಧರು ಟ್ಯಾಂಕ್ ಬಿಟ್ಟು ಓಡಿ ಹೋದರು. ಕೆಲ ಸಮಯದ ಬಳಿಕ ಅವರು ಮತ್ತೆ ದಾಳಿ ಮಾಡಿದರು. ಅಬ್ದುಲ್ ಹಮೀದ್ ಮತ್ತೆರೆಡು ಟ್ಯಾಂಕ್ ಗಳನ್ನು ನಾಶ ಮಾಡಿದರು. ಬಂದೂಕು ಅಳವಡಿಸಲಾಗಿದ್ದ ಜೀಪ್ ನಿಂದ ನಾಲ್ಕು ಪ್ಯಾಟನ್ ಟ್ಯಾಂಕ್ ಸ್ಫೋಟಿಸಿದ ಸುದ್ದಿ ಕೇಳಿ ಪ್ರತಿಯೊಬ್ಬರೂ ಆಶ್ಚರ್ಯ ಚಕಿತರಾದರು. ಸೆಪ್ಟೆಂಬರ್ 10ರಂದು ಪಾಕಿಸ್ತಾನ ಮತ್ತೆ ದಾಳಿ ಮಾಡಿತು. ಈ ಬಾರಿ ಅಬ್ದುಲ್ ಹಮೀದ್ ಮತ್ತೆರೆಡು ಪಾಕಿಸ್ತಾನಿ ಟ್ಯಾಂಕ್ ಗಳನ್ನು ಸ್ಫೋಟಿಸಿದರು. ಅವರು ಮೂರನೇ ಟ್ಯಾಂಕ್ ಗುರಿ ಇಡುತ್ತಿದ್ದಾಗ, ಅವರ ಜೀಪ್ ಅನ್ನು ಶತ್ರು ಪಡೆ ಗುರುತಿಸಿ, ಅವರ ಮೇಲೆ ಶೆಲ್ ಸಿಡಿಸಿದರು, ಕ್ಷಣ ಮಾತ್ರದಲ್ಲೇ ಅವರೂ ಕೂಡ ಪ್ಯಾಟನ್ ಟ್ಯಾಂಕ್ ಮೇಲೆ ಪ್ರತಿ ದಾಳಿ ಮಾಡಿದರು. ಹಮೀದ್ ಈ ದಾಳಿಯಲ್ಲಿ ಹುತಾತ್ಮರಾದರು, ಆದರೆ ಅದಕ್ಕೂ ಮುನ್ನ 7ನೇ ಟ್ಯಾಂಕ್ ಅನ್ನೂ ನಾಶ ಮಾಡಿದ್ದರು. ಒಟ್ಟಾರೆ ಭಾರತೀಯ ಸೇನೆ 100 ಪಾಕಿಸ್ತಾನಿ ಟ್ಯಾಂಕ್ ಗಳನ್ನು ನಾಶ ಮಾಡಿತ್ತು. ಈ ಐತಿಹಾಸಿಕ ಸೋಲಿನಿಂದ ಪಾಕಿಸ್ತಾನ ಸೆಪ್ಟೆಂಬರ್ 23ರಂದು ಕದನ ವಿರಾಮ ಘೋಷಿಸುವುದು ಅನಿವಾರ್ಯವಾಯಿತು. ಅಬ್ದುಲ್ ಹಮೀದ್ ಅವರಿಗೆ ಮರಣೋತ್ತರವಾಗಿ ಭಾರತದ ಪರಮೋಚ್ಚ ಸೇನಾ ಗೌರವ ಪರಮ ವೀರ ಚಕ್ರ ನೀಡಿ ಗೌರವಿಸಲಾಯಿತು.

ಹಮೀದ್, ಉತ್ತರ ಪ್ರದೇಶದ ಗಾಝಿಪುರದ ಧಾಮುಪುರ್ ಗ್ರಾಮದಲ್ಲಿ 1933ರ ಜುಲೈ 1ರಂದು ಜನಿಸಿದರು. ಅವರ ತಂದೆ ದರ್ಜಿಯಾಗಿ ಕೆಲಸ ಮಾಡುತ್ತಿದ್ದರು. ಅವರ ಮನೆಯ ಆರ್ಥಿಕ ಸ್ಥಿತಿ ಕೂಡ ಉತ್ತಮವಾಗಿರಲಿಲ್ಲ. ಹಮೀದ್ ಅವರಿಗೆ ಓದಿಗಿಂತ ಕುಸ್ತಿ ಮತ್ತು ಈಜಿನಲ್ಲಿ ಹೆಚ್ಚಿನ ಆಸ್ಥೆಯಿತ್ತು. ಹಮೀದ್ ಭಾರತೀಯ ಸೇನೆಯನ್ನು 20ರ ವಯಸ್ಸಿನಲ್ಲೇ ಸೇರಿದರು. ಅವರನ್ನು ಭಾರತ-ಚೈನಾ ಯುದ್ಧದ ಸಮಯದಲ್ಲಿ 1962ರಲ್ಲಿ ಎನ್.ಇ.ಎಫ್.ಎ.ನಲ್ಲಿ ನಿಯೋಜಿಸಲಾಗಿತ್ತು. 1965ರ ಯುದ್ಧ ಆರಂಭಗೊಂಡಾಗ, ಅವರು ರಜೆಯಲ್ಲಿದ್ದರು. ಅವರು ತಮ್ಮ ಸಾಮಾನು ಸರಂಜಾಮು ಮೂಟೆ ಕಟ್ಟುತ್ತಿದ್ದಾಗ, ಅವರ ಹಾಸಿಗೆಯ ಒಂದು ದಾರ ತುಂಡಾಯಿತು. ಅವರ ಪತ್ನಿ ರಸೂಲನ್ ಬೀಬಿ ಅದನ್ನು ಅಪಶಕುನ ಎಂದು ಪರಿಗಣಿಸಿದರು ಮತ್ತ ಒಂದು ದಿನ ತಡವಾಗಿ ಹೊರಡುವಂತೆ ಮನವಿ ಮಾಡಿದರು. ದೇಶಕ್ಕಾಗಿ ನಾನು ಹೋಗಲೇಬೇಕು ಎಂದು ಹಮೀದ್ ಹೇಳಿದರು. ಅವರು ತಮ್ಮ ಸೋದರನಿಗೆ ಹೇಳಿದರು. - "ಸೈನ್ಯದಲ್ಲಿ ಶೌರ್ಯ ಪ್ರಶಸ್ತಿಗಳನ್ನು ಪಡೆಯುವವರು ತುಕಡಿಯಲ್ಲಿ ಬಹಳ ಗೌರವವನ್ನು ಪಡೆಯುತ್ತಾರೆ, ಒಂದು ದಿನ ನಾನೂ ಯುದ್ಧದಲ್ಲಿ ಶೌರ್ಯ ಪ್ರಶಸ್ತಿಯನ್ನು ಪಡೆಯುತ್ತೇನೆ." ಅಬ್ದುಲ್ ಹಮೀದ್ ಭವಿಷ್ಯ ನಿಜವಾಯಿತು. 1965ರ ಯುದ್ಧದಲ್ಲಿ, ಅವರಿಗೆ ದೇಶದ ಪರಮೋಚ್ಚ ಶೌರ್ಯ ಪ್ರಶಸ್ತಿ ಪರಮವೀರ ಚಕ್ರ ನೀಡಲಾಯಿತು. ಇಂದಿಗೂ ಅವರ ಜೀಪನ್ನು ಸ್ಮರಣಾರ್ಥ ಇರಿಸಲಾಗಿದೆ. 2000 ಇಸವಿಯಲ್ಲಿ, ಅವರು ಹುತಾತ್ಮರಾದ ಸ್ಮರಣಾರ್ಥ ಜೀಪ್ ಇರುವ ಅಂಚೆ ಚೀಟಿ ಹೊರತರಲಾಯಿತು. ■




# ಉದಾತ್ತ ಉಪಕ್ರಮಗಳೊಂದಿಗೆ ಉದ್ಯಮಶೀಲ ಮಹಿಳೆಯರು

**ಕೊರೊನಾದಿಂದ ಗಂಭೀರವಾಗಿ ಸೋಂಕಿಗೆ ಒಳಗಾದ ರೋಗಿಗಳ ಜೀವನವನ್ನು ಸುಗಮಗೊಳಿಸಲು ಹೊಸ ಆವಿಷ್ಕಾರಗಳನ್ನು ಮಾಡುವುದು ಅಥವಾ ದೂರದ ಪ್ರದೇಶಗಳಲ್ಲಿ ವಾಸಿಸುವ ಜನರ ಮನೆ ಬಾಗಿಲಿಗೆ ಔಷಧಿಗಳ ಪೂರೈಕೆಯನ್ನು ಖಾತ್ರಿಪಡಿಸುವುದು ಒಂದು ದೊಡ್ಡ ಕೆಲಸವಾಗಿದೆ. ಆದರೆ ಪ್ರತ್ಯಕ್ಷಾ ಮಾಝಿ ಮತ್ತು ಪ್ರವಾಸಿನಿ ಬಟಾಕರ್ ಅನೇಕ ಸವಾಲುಗಳ ನಡುವೆಯೂ ಅದನ್ನು ಸಾಧ್ಯವಾಗಿಸಿದ್ದಾರೆ ಮತ್ತು ಇತರ ಜನರಿಗೆ ಒಂದು ಉದಾಹರಣೆಯಾಗಿದ್ದಾರೆ...**

## ಆಮ್ಲಜನಕದ ಬೆಂಬಲದಲ್ಲಿರುವ ಗಂಭೀರ ರೋಗಿಗಳಿಗೆ ವಿಶಿಷ್ಟ ಶೌಚಾಲಯ ನಿರ್ಮಿಸಿದ ಪ್ರತ್ಯಕ್ಷಾ



ಪ್ರತ್ಯಕ್ಷಾ ಮಾಝಿ, ಮಧ್ಯಪ್ರದೇಶದ ಭೋಪಾಲ್ ನ ಎನ್.ಐ.ಎಫ್.ಟಿ.ಯ ವಿದ್ಯಾರ್ಥಿನಿ, ಇವರು ಆಮ್ಲಜನಕದ ಬೆಂಬಲದೊಂದಿಗೆ ಗಂಭೀರ ಸ್ಥಿತಿಯಲ್ಲಿರುವ ಕೋವಿಡ್ ರೋಗಿಗಳಿಗೆ ನೆರವಾಗಲು ಸಂಚಾರಿ ಶೌಚಾಲಯ ನಿರ್ಮಿಸಿದ್ದಾರೆ. ಇದು ಮನೆಯಲ್ಲಿ ಅಥವಾ ಆಸ್ಪತ್ರೆಯಲ್ಲಿ ಹಾಸಿಗೆ ಹಿಡಿದ ರೋಗಿಗಳಿಗೆ ಉಪಯುಕ್ತವಾಗಿದೆ. ಪ್ರತ್ಯಕ್ಷಾ ಕೊರೊನಾ ಸೋಂಕಿಗೆ ತುತ್ತಾದ ಮನೆಯಲ್ಲಿದ್ದ ತಮ್ಮ ಚಿಕ್ಕಪ್ಪನನ್ನು ನೋಡಿ ಪ್ರೇರಣೆ ಪಡೆದು ಅವರು ಈ ಶೌಚಾಲಯ ನಿರ್ಮಿಸಿದ್ದಾರೆ. ಪ್ರತ್ಯಕ್ಷಾ ಅವರು ಮುಂಬರುವ ದಿನಗಳಲ್ಲಿ ಆಸ್ಪತ್ರೆಗಳು ಮತ್ತು ಇತರ ಅಗತ್ಯ ಇರುವ ಜನರೊಂದಿಗೆ ಈ ಸಂಚಾರಿ ಶೌಚಾಲಯ ನಿರ್ಮಾಣದ ಜ್ಞಾನವನ್ನು ಹಂಚಿಕೊಳ್ಳಲು ಬಯಸಿದ್ದಾರೆ.  ಈ ಶೌಚಾಲಯ ಎಲ್ಲ ಕಡೆಗಳಿಂದಲೂ ಮುಚ್ಚಲ್ಪಟ್ಟಿದ್ದು, ಇದರ ನಿರ್ಮಾಣಕ್ಕೆ 25 ಸಾವಿರ ರೂ. ವೆಚ್ಚವಾಗುತ್ತದೆ. ಪ್ರತ್ಯಕ್ಷಾ ಹೇಳುವಂತೆ,” ನಾನು ಆಕ್ಸಿಜನ್ ಬೆಂಬಲದೊಂದಿಗೆ ಇರುವ ರೋಗಿಗಳಿಗಾಗಿ ಈ ಶೌಚಾಲಯ ವಿನ್ಯಾಸ ಮಾಡಿದ್ದೇನೆ. ಇದನ್ನು ವಾರ್ಡ್ ನಲ್ಲಿಯೇ ಇಡಬಹುದು. ಈ ಸಂಚಾರಿ ಶೌಚಾಲಯವನ್ನು ಗಾಲಿ ಕುರ್ಚಿಯ ಮಾದರಿಯಲ್ಲಿ ನಿರ್ಮಿಸಲಾಗಿದ್ದು, ಇದನ್ನು ಬಳಸುವುದು ತುಂಬಾ ಸುಲಭ” ಎನ್ನುತ್ತಾರೆ.

## ರಾಜ್ಯದ ಬುಡಕಟ್ಟು ವಲಯದ ಮನೆ ಬಾಗಿಲಿಗೇ ಔಷಧ ಪೂರೈಸುವ ಒಡಿಶಾ ಮಹಿಳೆ



ಒಡಿಶಾದ ಕಂಧಮಾಲ್ ಜಿಲ್ಲೆಯ ದೂರದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರಿಗೆ ಔಷಧ ಪೂರೈಸುವುದು ತುಂಬಾ ಸವಾಲಿನ ಕಾರ್ಯ. ಆದರೆ ಪ್ರವಾಸಿನಿ ಬಟಾಕರ್ ತಮ್ಮ ಅದಮ್ಯ ಸಂಕಲ್ಪದೊಂದಿಗೆ ಇದನ್ನು ಸಾಧ್ಯವಾಗಿಸಿದ್ದಾರೆ. ಹಲವು ತೊಡಕುಗಳು ಮತ್ತು ಸವಾಲುಗಳನ್ನು ಮೆಟ್ಟಿ ಅವರು ಆ ಪ್ರದೇಶದಲ್ಲಿರುವ ಬುಡಕಟ್ಟು ಜನರ ಮನೆ ಬಾಗಿಲಿಗೇ ಔಷಧಗಳನ್ನು ಪೂರೈಸುತ್ತಿದ್ದಾರೆ. ಅವರು 21 ಸಾವಿರ ಗ್ರಾಮಗಳ ಮೇಲೆ ಪ್ರಭಾವ ಬೀರಿದ ಅಪೌಷ್ಟಿಕತೆ ಮುಕ್ತ ಗ್ರಾಮ ಯೋಜನೆಯಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಅವರ ಪಾತ್ರವು ಸ್ಥಳೀಯ ಜನರಿಂದ ಪ್ರಶಂಸೆಗೆ ಪಾತ್ರವಾಗಿದೆ. ಜೀವಿಕಾ ಸುರಕ್ಷ ಮಂಚ್ ಅವರ ಹೆಲ್ತ್-ಕಿಟ್ ನೀಡಿಕೆ ಕಾರ್ಯಕ್ರಮದಡಿ ‘ಆರೋಗ್ಯ ಪ್ರೇರಕ’ ರಾಗಿ ಕೆಲಸ ಮಾಡುತ್ತಿರುವ ಅವರು ಜನರಿಗೆ ಔಷಧಿ ತಲುಪಿಸಲು ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸುವ ಗುರಿ ಹೊಂದಿದ್ದಾರೆ. ಆರೋಗ್ಯ ಸಮಸ್ಯೆಗಳ ಬಗ್ಗೆ ಜನರಿಗೆ ತಿಳಿವಳಿಕೆ ನೀಡಲು ಅವರು ಉದಾತ್ತ ಕಾರ್ಯವನ್ನು ಮಾಡುತ್ತಿದ್ದಾರೆ. ಗರ್ಭಪಾತದ ದುಷ್ಪರಿಣಾಮಗಳ ಬಗ್ಗೆಯೂ ಕೂಡ ಅವರು ಮಹಿಳೆಯರಿಗೆ ಅರಿವು ಮೂಡಿಸುತ್ತಿದ್ದಾರೆ. ■

# ರಸಪ್ರಶ್ನೆ?

## ಸರಿಯಾದ ಉತ್ತರ ಹುಡುಕಲು ನ್ಯೂ ಇಂಡಿಯಾ ಸಮಾಚಾರದ ಈ ಸಂಚಿಕೆಯನ್ನು ಓದಿ

1. ಯಾರ ಸ್ಮರಣಾರ್ಥ ರಾಷ್ಟ್ರೀಯ ವೈದ್ಯರ ದಿನ ಆಚರಿಸಲಾಗುತ್ತದೆ?
   - ☐ a) ಡಾ. ಸಿ.ವಿ. ರಾಮನ್
   - ☐ b) ಡಾ. ಹೋಮಿ ಜಹಾಂಗೀರ್ ಬಾಬಾ
   - ☐ c)ಡಾ. ಬಿಧಾನ್ ಚಂದ್ರ ರಾಯ್
   - ☐ d) ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

2. ಭಾರತದಲ್ಲಿ ಎಷ್ಟು ನವೋದ್ಯಮಗಳನ್ನು ಗುರುತಿಸಲಾಗಿದೆ?
   - ☐ a) 20 ಸಾವಿರ
   - ☐ b) 30 ಸಾವಿರ
   - ☐ c) 40 ಸಾವಿರ
   - ☐ d) 50 ಸಾವಿರ

3. ಕೋವಿಡ್ ವಿರುದ್ಧದ ಸಮರದಲ್ಲಿ ತೊಡಗಿಕೊಂಡಿರುವ ಮುಂಚೂಣಿಯ ಕಾರ್ಯಕರ್ತರಿಗೆ ಸರ್ಕಾರ ಎಷ್ಟು ವಿಮಾ ರಕ್ಷಣೆಯನ್ನು ಒದಗಿಸುತ್ತದೆ?
   - ☐ a) 15 ಲಕ್ಷ
   - ☐ b) 25 ಲಕ್ಷ
   - ☐ c) 40 ಲಕ್ಷ
   - ☐ d) 50 ಲಕ್ಷ

4. 2019ಕ್ಕೆ ಹೋಲಿಸಿದರೆ ಆಮ್ಲಜನಕದ ಉತ್ಪಾದನೆ ಎಷ್ಟು ಪಟ್ಟು ಹೆಚ್ಚಾಗಿದೆ?
   - ☐ a) 2 ಪಟ್ಟು
   - ☐ b) 5 ಪಟ್ಟು
   - ☐ c) 10 ಪಟ್ಟು
   - ☐ d) 20 ಪಟ್ಟು

5) ದೇಶದ ಎಷ್ಟು ಹಳ್ಳಿಗಳನ್ನು ಡಿಜಿಟಲ್ ಗ್ರಾಮಗಳಾಗಿ ಮಾಡಲಾಗಿದೆ?
   - ☐ a) 1 ಲಕ್ಷ
   - ☐ b) 50 ಸಾವಿರ
   - ☐ c) 2 ಲಕ್ಷ
   - ☐ d) 75 ಸಾವಿರ

6. 1000 ದಿನಗಳಲ್ಲಿ ಎಷ್ಟು ಗ್ರಾಮಗಳನ್ನು ಆಪ್ಟಿಕಲ್ ಫೈಬರ್ ಮೂಲಕ ಸಂಪರ್ಕಿಸಲು ಯೋಜಿಸಲಾಗಿದೆ?
   - ☐ a) ಆರು ಲಕ್ಷಕ್ಕೂ ಅಧಿಕ
   - ☐ b) 3 ಲಕ್ಷ
   - ☐ c) 2 ಲಕ್ಷ
   - ☐ d) 5 ಲಕ್ಷ

7. ಉಮಂಗ್ ಆಪ್ ನಲ್ಲಿ ಎಷ್ಟು ಸೇವೆಗಳು ಮತ್ತು ಪಾವತಿ ಸೌಲಭ್ಯಗಳು ಲಭ್ಯವಿದೆ?
   - ☐ a) 1980
   - ☐ b) 1751
   - ☐ c) 1458
   - ☐ d) 2039

8. ಈ ವರ್ಷ ಜುಲೈ 1ಕ್ಕೆ ಜಿಎಸ್ಟಿ ಎಷ್ಟು ವರ್ಷಕ್ಕೆ ಕಾಲಿಡಲಿದೆ?
   - ☐ a) 2
   - ☐ b) 3
   - ☐ c) 4
   - ☐ d) 6

9.2030ರಿಂದ ಯಾವ ವರ್ಷಕ್ಕೆ ಶೇ.20ರಷ್ಟು ಎಥನಾಲ್ ಮಿಶ್ರಣದ ಗುರಿ ಸಾಧನೆಗೆ ನಿಗದಿ ಮಾಡಲಾಗಿದೆ?
   - ☐ a) 2022
   - ☐ b) 2028
   - ☐ c) 2025
   - ☐ d) 2027

10. ಟೋಕಿಯೋ ಒಲಿಂಪಿಕ್ಸ್ ಯಾವಾಗ ಆರಂಭವಾಗುತ್ತದೆ?
   - ☐ a) ಜುಲೈ 23
   - ☐ b) ಜುಲೈ 30
   - ☐ c) ಆಗಸ್ಟ್ 8
   - ☐ d) ಆಗಸ್ಟ್ 15

ನಿಮ್ಮ ಉತ್ತರಗಳನ್ನು ನಮಗೆ ನೀವು ಇ-ಮೇಲ್:- **response-nis@pib.gov.in** ಮೂಲಕ ಕಳುಹಿಸಬಹುದು.
ಸರಿ ಉತ್ತರ ನೀಡಿದ ಐವರು ಸ್ಪರ್ಧಿಗಳ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

RNI No. :
DELKAN/2020/78828
July: 1-15, 2021

ನ್ಯೂ ಇಂಡಿಯಾ
# ಸಮಾಚಾರ
ಪಾಕ್ಷಿಕ

RNI Registered No DELKAN/2020/78828, Delhi Postal License No DL(S)-1/3543/2020-22, WPP NO U (S)-91/2020-22, posting at BPC, Meghdoot Bhawan, New Delhi - 110 001 on 26-30 advance Fortnightly (Publishing Date June 17, 2021, Pages - 44)

# ಭಗವಾನ್ ಜಗನ್ನಾಥನ
# ರಥಯಾತ್ರೆ

ನೀಲಾಚಲನಿವಾಸಾಯನಿತ್ಯಾಯ ಪರಮಾತ್ಮನೇ ।
ಬಲಭದ್ರಸುಭದ್ರಾಭ್ಯಾಂ ಜಗನ್ನಾಥಾಯ ತೇ ನಮಃ ॥
ಜಗದಾನಂದಕಂದಾಯ ಪ್ರಣತಾರ್ತಹರಾಯಚ ।
ನೀಲಾಚಲ ನಿವಾಸಾಯ ಜಗನ್ನಾಥಾಯ ತೇ ನಮಃ ॥

## ಜುಲೈ 12-20, 2021







"ಭಗವಾನ್ ಜಗನ್ನಾಥ ರಥ ಯಾತ್ರೆಯ ಪವಿತ್ರ ಸಂದರ್ಭದಲ್ಲಿ ನನ್ನ ಹೃತ್ಪೂರ್ವಕ ಶುಭಾಶಯಗಳು. ಪೂಜ್ಯ ಮತ್ತು ಭಕ್ತಿಯಿಂದ ತುಂಬಿರುವ ಈ ಯಾತ್ರೆ ದೇಶವಾಸಿಗಳ ಜೀವನದಲ್ಲಿ ಸಂತೋಷ, ಸಮೃದ್ಧಿ, ಅದೃಷ್ಟ ಮತ್ತು ಆರೋಗ್ಯವನ್ನು ತರಲಿ. ಜೈ ಜಗನ್ನಾಥ!"
ಪ್ರಧಾನ ಮಂತ್ರಿ ನರೇಂದ್ರ ಮೋದಿ

**Editor:**
**Jaideep Bhatnagar**, Principal Director General, Press Information Bureau, New Delhi

**Published & Printed by: Satyendra Prakash**, Principal Director General, BOC on behalf of Bureau of Outreach and Communication

**Published from Bureau of Room No-278, Bureau of Outreach and Communication, 2nd Floor, Soochna Bhawan, New Delhi -110003**

**Printed at** Infinity Advertising services Pvt.Ltd. FBD-One Corporate Park, 10th floor, New Delhi-Faridabad border, NH-1,Faridabad-121003

Kannada Vol. 2
Issue 1